ಅಧ್ಯಕ್ಷರು:– ಅದನ್ನು ನಾನು ನೋಡಿ ತೆಗೆಯುತ್ತೇನೆ. ಅದನ್ನು ನನಗೆ ಬಿಡಿ. ಯಾವುದೇ ಆ ರೀತಿಯ ಪದಗಳಿದ್ದರೆ, ಅದನ್ನು ನಾನು ಕಡತದಿಂದ ತೆಗೆದು ಹಾಕುತ್ತೇನೆ.

[ಗೊಂದಲ]

ಶ್ರೀ ಕಟ್ಟಾ ಸುಬ್ರಹ್ಮಣ್ಯ ನಾಯ್ಡು: ಮಾನ್ಯ ಅಧ್ಯಕ್ಷರೆ, ...

[ಗೊಂದಲ]

ಅಧ್ಯಕ್ಷರು:– No, I Will not allow you. ಸುಮ್ಮನೆ time waste ಆಗುತ್ತದೆ.

[ಗೊಂದಲ]

ಈಗ ಮಾನ್ಯಧ್ರುವ ನಾರಾಯಣ್‌ರವರು ಬಜೆಟ್ ಮೇಲೆ ಚರ್ಚೆಯನ್ನು ಮುಂದುವರೆಸಿ ಮಾತನಾಡಲಿ.

[ಗೊಂದಲ]

ಶ್ರೀ ಎಂ.ಪಿ. ರೇಣುಕಾಚಾರ್ಯ:– ಮಾನ್ಯ ಅಧ್ಯಕ್ಷರೆ, ಮಾನ್ಯ ರೇವಣ್ಣನವರು ಕ್ಷಮೆ ಕೇಳಲಿ. ಅಲ್ಲಿಯವರೆಗೆ ಯಾರಿಗೂ ಮಾತನಾಡಲಿಕ್ಕೆ ಅವಕಾಶ ಕೊಡಬೇಡಿ...

[ಗೊಂದಲ]

ಶ್ರೀ ಸಿದ್ದರಾಮಯ್ಯ:– ಮಾನ್ಯ ಸಭಾಧ್ಯಕ್ಷರ ಆದೇಶದ ಮೇರೆಗೆ ಕಡತದಿಂದ ತೆಗೆದುಹಾಕಲಾಗಿದೆ.

[ಗೊಂದಲ]

ಡಾ: ಹೆಚ್.ಸಿ. ಮಹಾದೇವಪ್ಪ : ಮಾನ್ಯ ಅಧ್ಯಕ್ಷರೆ, ಇನ್ನು ಮೇಲೆ ಗೊಂದಲ ನಿವಾರಣೆ ಮಾಡುವುದಕ್ಕೆ parliamentary words, un-parliamentary words ಎಂದು ಎಲ್ಲರಿಗೂ list ಕೊಟ್ಟುಬಿಟ್ಟರೆ they can use accordingly.

ಅಧ್ಯಕ್ಷರು:ಆ listನ್ನು announce ಮಾಡೋಣ ಬಿಡಿ. ಧ್ರುವನಾರಾಯಣ್‌ರವರೆ. ಬಜೆಟ್ ಮೇಲೆ ಚರ್ಚೆ ಪ್ರಾರಂಭ ಮಾಡಿ.

[ಗೊಂದಲ]

7. ವಿತ್ತೀಯ ಕಾರ್ಯಕಲಾಪಗಳು

2008–2009ನೇ ಸಾಲಿನ ಆಯವ್ಯಯ ಅಂದಾಜುಗಳ ಮತ್ತು ಅನುದಾನ ಬೇಡಿಕೆಗಳ ಮೇಲಿನ ಮುಂದುವರೆದ ಚರ್ಚೆ

ಶ್ರೀ ಆರ್. ಧ್ರುವನಾರಾಯಣ್ (ಕೊಳ್ಳೇಗಾಲ): ಮಾನ್ಯ ಅಧ್ಯಕ್ಷರೆ, ಇಂತಹ ಸಂದರ್ಭದಲ್ಲೂ. ನನಗೆ ಮಾತನಾಡುವುದಕ್ಕೆ ಅವಕಾಶ ಕೊಟ್ಟಿದ್ದಕ್ಕೆ ಧನ್ಯವಾದಗಳು.

ಈಗಾಗಲೇ ಮುಖ್ಯಮಂತ್ರಿಗಳಾಗಿರತಕ್ಕಂತಹ ಮಾನ್ಯ ಯಡಿಯೂರಪ್ಪನವರು ಮೂರು ಬಾರಿ ಬಜೆಟ್‌ನ್ನು ಮಂಡಿಸಿದ್ದಾರೆ. ಮೂರು ಬಾರಿ ಮಂಡಿಸಿದ ಬಜೆಟ್ ಕೂಡ ರೈತ ಪರ ಬಜೆಟ್ ಎಂದು ಹೇಳಿ ಅವರು ಈ ಬಾರಿ ಕೂಡ 2008–09ನೇ ಸಾಲಿನ ಬಜೆಟ್‌ನ್ನು ಮಂಡಿಸಿದ್ದಾರೆ. ಈ ಬಜೆಟ್ ಏನಿದೆ ಇದು ದೂರದೃಷ್ಟಿಯ ಬಜೆಟ್ ಅಲ್ಲ. ಅಭಿವೃದ್ಧಿ ಪರ ಬಜೆಟ್ ಅಲ್ಲ. ಸಣ್ಣ ಸಣ್ಣ ಕಾರ್ಯಕ್ರಮಗಳಿಗೆ ಹೆಚ್ಚಿನ ಒತ್ತು ಕೊಟ್ಟು ಕೇವಲ ಪ್ರಚಾರದ ದೃಷ್ಟಿಯಿಂದ ಬಜೆಟ್‌ನ್ನು ಮಂಡಿಸಿದ್ದಾರೆ. ಇದರಲ್ಲಿ ಶಾಶ್ವತ ಯೋಜನೆಗಳು ದೊಡ್ಡ ದೊಡ್ಡ ಕಾರ್ಯಕ್ರಮಗಳಿಗೆ ಹೆಚ್ಚಿನ ಆದ್ಯತೆಯನ್ನು ಕೊಟ್ಟಿಲ್ಲ. ಹೆಚ್ಚಿನ ಭರವಸೆಗಳನ್ನೇ ಕೊಟ್ಟು ಬಜೆಟ್‌ನ್ನು ಮಂಡಿಸಿದ್ದಾರೆ. ಇದಕ್ಕೆ ಕವಿ ಡಾ.ಸಿದ್ದಲಿಂಗಯ್ಯ ಕವನವನ್ನು ನಾನು ಓದಲಿಕ್ಕೆ ಇಚ್ಛೆಪಡುತ್ತೇನೆ.

ಸುತ್ತಮುತ್ತ ಹಸಿರು ಬೆಳೆ,
ಬೆಳೆಯುತ್ತಾರೆ ಬೆಂಕಿ ಬೆಳೆ,
ಕಪ್ಪು ಜನರ ತಲೆಯ ಮೇಲೆ
ಬಿಳಿ ಬಿಳಿ ಮಡಕೆ,
ಪಾತಾಳದ ಆಳದಲಿ,
ಭರವಸೆಗಳ ಕೋಳದಲಿ,
ನರಳುತಾದೆ ಉರುಳುತಾದೆ ಜನರ ಜಂಗುಳಿ

ಅಂದರೆ, ಹೆಚ್ಚಿನ ಭರವಸೆಗಳನ್ನು ಕೊಟ್ಟು, ಜನ ನಗುತ್ತಿರಲಿ ಎಂದು ಈ ಬಜೆಟ್ ಕೊಟ್ಟಿದ್ದಾರೆ. ಸರ್ಕಾರ ಅಧಿಕಾರಕ್ಕೆ ಬಂದು ಸುಮಾರು 60 ದಿವಸಗಳು ಕಳೆದಿವೆ. ಮೂರು ಬಜೆಟ್‌ನಲ್ಲೂ ಕೂಡ ರೈತರ ಪರ ಬಜೆಟ್ ಎಂದು ತಿಳಿಸಿದ್ದಾರೆ. ಆದರೆ, ರೈತರು ಆತ್ಮಹತ್ಯೆ ಮಾಡಿಕೊಳ್ಳತಕ್ಕಂಥದ್ದು ನಿಜವಾಗಿಯೂ ತಪ್ಪಿಲ್ಲ. ಮೂರು ಬಜೆಟ್ ಮಂಡನೆಯಾದ ಮೇಲೆ ರೈತನಿಗೆ ಆತ್ಮಸ್ಥೈರ್ಯ ಮೂಡುವಂತಹ ಕೆಲಸವಾಗಬೇಕು. ನಮ್ಮ ಪರ ಹೋರಾಟ ಮಾಡುತ್ತಿದ್ದಾರೆ. ನಮ್ಮ ಹೋರಾಟಗಾರರು ಇವತ್ತು ಅಧಿಕಾರಕ್ಕೆ ಬಂದಿದ್ದಾರೆ. ನಾವು ಏಕೆ ಸಾಯಬೇಕು ನಮ್ಮ ಪರ ಸರ್ಕಾರವಿದೆ ಎನ್ನತಕ್ಕ ಭಾವನೆ ಉಂಟಾಗಬೇಕು. ಆದರೆ, ಇವರು ಅಧಿಕಾರಕ್ಕೆ ಬಂದಾಗಿನಿಂದಲೂ ದಿನಕ್ಕೊಂದು ಆತ್ಮಹತ್ಯೆಯ ಪ್ರಕರಣಗಳು ಆಗುತ್ತಿರುವುದನ್ನು ನೋಡಿದರೆ ಬಹಳ ನೋವಾಗುತ್ತದೆ. ತಮ್ಮ 'ಸಂಕಲ್ಪ' ಪ್ರಣಾಳಿಕೆಯಲ್ಲಿ ಹಲವಾರು ಭರವಸೆಗಳನ್ನು ಕೊಟ್ಟಿದ್ದಾರೆ. ಅದರಲ್ಲೂ ವಿಶೇಷವಾಗಿ, 2 ರೂಪಾಯಿಗೆ 1 ಕೆ.ಜಿ. ಅಕ್ಕಿ ಕೊಡುತ್ತೇವೆಂದು ಬಹಳ ಪ್ರಚಾರ ತೆಗೆದುಕೊಂಡರು. ಅದೇ ರೀತಿ ಸಹಸ್ರಾರು

ಬಡವರಿಗೆ ಭರವಸೆಗಳನ್ನು ಕೊಟ್ಟು ಅಧಿಕಾರಕ್ಕೆ ಬಂದಿದ್ದಾರೆ. ಇದರ ಬಗ್ಗೆಯೂ ಕವಿ ಡಾ: ಸಿದ್ದಲಿಂಗಯ್ಯನವರ ಕವನವಿದೆ ಅದನ್ನು ಓದಲಿಕ್ಕೆ ಇಷ್ಟಪಡುತ್ತೇನೆ.

ಕಾರ್ಗತ್ತಲಿನಲ್ಲೇ ಹಸಿದವರ ಬಂಡಾಯ,
ಅಗುಳಿನಾಸೆಗೆ ಸೇರಿ ಸಾಗುತ್ತಿತ್ತು ಕ್ರಾಂತಿ ಸರಪಳಿ,
ಆಗ ಶೋಷಕರ ಕೊರಳುಗಳ ಬಿಗಿದಿತ್ತು,ಅಗೆದಿತ್ತು,ಕೊಲ್ಲುತ್ತಿತ್ತು,

ಎಂದು, ಅಗುಳಿನ ಆಸೆಗೆ ಅಂದರೆ ಅನ್ನ. ಇವರು 2 ರೂಪಾಯಿಗೆ 1 ಕೆ.ಜಿ.ಅಕ್ಕಿ ಕೊಡುತ್ತೇವೆಂದು ಪ್ರಚಾರ ಗಿಟ್ಟಿಸಿಕೊಂಡು ಲಕ್ಷಾಂತರ ಮಂದಿ ತಮ್ಮ ಪಕ್ಷಕ್ಕೆ ಮತ ನೀಡಿದ್ದಾರೆ. ಆ ಅಗುಳಿನ ಆಸೆ ಹೊತ್ತುಕೊಂಡು ನಿರೀಕ್ಷೆ ಮಾಡುತ್ತಿದ್ದ ಜನರಿಗೆ ಇವತ್ತು ಏನು ಮಾಡಿದ್ದೀರೆಂದು ಯೋಚನೆ ಮಾಡಬೇಕು. ಇವತ್ತು ಬಿಜೆಪಿ ಇಷ್ಟರ ಮಟ್ಟಿಗೆ ಬೆಳೆಯಬೇಕಾದರೆ ಯುವಕರೇ ಕಾರಣ. ಯುವಕರನ್ನು ಮುಂದಿಟ್ಟುಕೊಂಡು ಪ್ರಚಾರ ನೀಡಿ ಇವತ್ತು ಇಷ್ಟು ದೊಡ್ಡ ಮಟ್ಟಿಗೆ ಬೆಳೆದಿದ್ದಾರೆ. ಮಾನ್ಯ ರವಿ ಅವರು ABVPಯಿಂದ ಬಂದಿದ್ದಾರೆ. ಅರವಿಂದ ಲಿಂಬಾವಳಿ, ವಿಶ್ವೇಶ್ವರ ಹೆಗಡೆ ಕಾಗೇರಿಯವರಿದ್ದಾರೆ. ಆದರೆ, ಅವರು ಪಾಪ ಏಕೋ ಮಾತನಾಡುತ್ತಿಲ್ಲ. ವಯೋಮಿತಿಯನ್ನು 58 ರಿಂದ 60ಕ್ಕೆ ಏರಿಸಿದಾಗ ಬೇರೆ ಸರ್ಕಾರ ಇದ್ದಿದ್ದರೆ ಇಷ್ಟೊತ್ತಿಗೆ ABVP ಅವರು ದೊಡ್ಡ ಚಳುವಳಿಯನ್ನು ಮಾಡುತ್ತಿದ್ದರು. ಇವತ್ತು ವಯೋಮಿತಿಯಲ್ಲಿ ಏರಿಕೆಯಾದಾಗ ನಿರುದ್ಯೋಗಿಗಳಿಗೆ ಉದ್ಯೋಗ ಕೊಡುತ್ತೇವೆ. ತಿಂಗಳಿಗೆ 1,500 ರೂಪಾಯಿ ನಿರುದ್ಯೋಗಿ ಭತ್ಯೆಯನ್ನು ಕೊಡುತ್ತೇವೆಂದು ಹೇಳಿದಿರಿ. ಆದರೆ, ಇವತ್ತು ನಿರುದ್ಯೋಗಿ ಭತ್ಯೆ ಕೂಡ ಇಲ್ಲ. ಸರ್ಕಾರ ಉದ್ಯೋಗ ಒದಗಿಸಿಕೊಡುವುದರಲ್ಲೂ ಮೋಸ ಮಾಡಿದ್ದೀರಿ. ಹಾಗಾಗಿ ಈ ಸರ್ಕಾರ ಯುವಕರ ಪರವಾದಂತಹ ಸರ್ಕಾರ ಅಲ್ಲ. ಮೂರು ಬಜೆಟ್‌ನಲ್ಲೂ ರೈತರ ಪರ ಎಂದು ಹೇಳಿ ಅವರ ಮೂಗಿಗೆ ತುಪ್ಪ ಸವರಿದ್ದಾರೆ. ಒಟ್ಟಾರೆ ಬಜೆಟ್‌ನಲ್ಲಿ ಭರವಸೆಗಳನ್ನು ಹೆಚ್ಚಾಗಿ ಮಂಡಿಸಿದ್ದಾರೆಂದು ಹೇಳಲಿಕ್ಕೆ ಇಚ್ಛೆಪಡುತ್ತೇನೆ.

ಮಾನ್ಯ ಯಡಿಯೂರಪ್ಪನವರು ತಮ್ಮ ಮೊದಲ ಬಜೆಟ್‌ನಲ್ಲಿ ಒಂದು ಕವನವನ್ನು ಮಂಡಿಸಿದ್ದರು.

ಹೆಗಲ ಮೇಲೆ ನೇಗಿಲು ಹೊತ್ತು,
ಸೋತು ಸೊರಗಿದ ಎತ್ತುಗಳು ಹಿಂಬಾಲಿಸುತ್ತಿರಲು,
ಹೊಲದೆಡೆಗೆ ನಡೆವ ಪ್ರತಿ ರೈತನು
ನನಗೆ ಶಿಲುಬೆ ಹೊತ್ತ ಜೀಸಸ್‌ನಂತೆ ಕಾಣುತ್ತಾನೆ.

ಎಂದು ತೆಲುಗು ಕವಿ ನಗ್ನಮುನಿಯ ಕವನವನ್ನು ಅವರು ಓದಿದರು.

ಆದರೆ, ಇವತ್ತು ಹಾವೇರಿಯಲ್ಲಿ ರೈತನಿಗೆ ಗುಂಡು ಹೊಡೆದ ಪರಿಸ್ಥಿತಿಯನ್ನು ನೋಡಿದರೆ, ರೈತ ಯಾವ ರೀತಿ ಕಾಣುತ್ತಾನೆ? ರೈತ ಜೀಸಸ್‌ನಂತೆ ಕಾಣುತ್ತಾನೆಂದು ತಾವು ಕವನವನ್ನು ಹೇಳಿದಿರಿ. ದಯಮಾಡಿ ಇಂತಹವುಗಳಿಗೆ ಆಸ್ಪದ ಕೊಡದೆ, ರೈತರ ಪರವಾಗಿ ಸರ್ಕಾರ ನಿಲ್ಲಬೇಕು.

ಸಮಾಜ ಕಲ್ಯಾಣ ಇಲಾಖೆಗೆ ಹೆಚ್ಚಿನ ಒತ್ತು ಕೊಟ್ಟಿಲ್ಲ. ವಿಶೇಷ ಘಟಕ ಯೋಜನೆಯಲ್ಲಿ ಜನಸಂಖ್ಯೆಗೆ ಅನುಗುಣವಾಗಿ ಹಣವನ್ನು ಬಿಡುಗಡೆ ಮಾಡಬೇಕಾಗಿತ್ತು. ಸುಮಾರು 18 ಪರ್ಸೆಂಟ್‌ನಲ್ಲಿ 15 ಪರ್ಸೆಂಟ್ ಪರಿಶಿಷ್ಟ ಜಾತಿಗೆ 3 ಪರ್ಸೆಂಟ್ ಪರಿಶಿಷ್ಟ ಪಂಗಡಕ್ಕೆ ಎಂದು ಇದೆ. ಆದರೆ ಈಗ ಜನಸಂಖ್ಯೆ ಹಚ್ಚಾಗಿದೆ. 22 ಪರ್ಸೆಂಟ್ reservation ಕೂಡ ಹೆಚ್ಚಾಗಬೇಕು. ಆದರೂ reservation ಹೆಚ್ಚಾಗದ ಸಂದರ್ಭದಲ್ಲಿ ಬಜೆಟ್‌ನಲ್ಲಿ ಒಟ್ಟು ಅಂದಾಜು ಸುಮಾರು 47,240 ಕೋಟಿ ರೂಪಾಯಿ. ಇದರಲ್ಲಿ 18 ಪರ್ಸೆಂಟ್ ಅಂದರೆ 8,503 ಕೋಟಿ ರೂಪಾಯಿ ಪರಿಶಿಷ್ಟ ಜಾತಿ–ಪರಿಶಿಷ್ಟ ಪಂಗಡ ವಿಶೇಷ ಘಟಕ ಯೋಜನೆಗೆ ನಿಗದಿಯಾಗಬೇಕಾಗಿತ್ತು. ಇದರಲ್ಲಿ ಕೇವಲ 3,923 ಕೋಟಿ ರೂಪಾಯಿ ಮಾತ್ರ ನಿಗದಿ ಮಾಡಿದ್ದಾರೆ. ಇದು ಕೇವಲ 9 ಪರ್ಸೆಂಟ್ ಮಾತ್ರ ಆಗುತ್ತದೆ. ಸನ್ಮಾನ್ಯ ಮುಖ್ಯಮಂತ್ರಿಗಳು ನಮ್ಮಲ್ಲಿ ಜಾತಿ–ಗೀತಿ ಇಲ್ಲ ನೀತಿ ಮಾತ್ರ ಇದೆ ಎಂದು ಹೇಳಿದ್ದಾರೆ. ಆದ್ದರಿಂದ ತಾವು ಶೋಷಿತರ ಪರವಾಗಿ ನಿಲ್ಲಬೇಕು. ಏನು ನೀವು 8,503 ಕೋಟಿ ರೂಪಾಯಿ ನಿಗದಿ ಮಾಡಬೇಕಾಗಿದ್ದನ್ನು special component programme ನಲ್ಲಿ ಕೇವಲ 3,923 ಕೋಟಿ ರೂಪಾಯಿ ಮಾತ್ರ ಇಟ್ಟಿದ್ದೀರಿ.

ಡಾ: ಹೆಚ್.ಸಿ. ಮಹಾದೇವಪ್ಪ: 25,000 ಕೋಟಿ ರೂಪಾಯಿ plan size ನಲ್ಲಿದೆ.planning commission of India ದವರು proportion of population ಪ್ರಕಾರ ಪ್ಲಾನ್ ಸೈಜ್‌ನಲ್ಲಿ earmark ಮಾಡಬೇಕೆಂದು ಹೇಳಿದ್ದಾರೆ. 1,100 ಕೋಟಿ ರೂಪಾಯಿ SC-STಗೆ ಪ್ಲಾನ್ ಸೈಜ್‌ನಲ್ಲಿ ಕಡಿತ ಮಾಡಿದ್ದೀರಿ. 9 ಪರ್ಸೆಂಟ್ ಅಷ್ಟೇ ಕೊಟ್ಟಿದ್ದೀರಿ. ಇದು direction of the planning commission ಇರುವುದು. ಪ್ರಮುಖ ಅಭಿವೃದ್ಧಿ ಹೇಗೆ ಮಾಡಿತ್ತೀರಿ? ಸನ್ಮಾನ್ಯ ಮುಖ್ಯಮಂತ್ರಿಗಳು ಇದನ್ನು ಗಂಭೀರವಾಗಿ ಪರಿಗಣಿಸಬೇಕು.

ಶ್ರೀ ಆರ. ಧ್ರುವನಾರಾಯಣ್: ನಾನು ಒತ್ತಾಯ ಮಾಡುವುದೇನೆಂದರೆ, ಕೇವಲ 9 ಪರ್ಸೆಂಟ್ ಮಾತ್ರ ಇದೆ. ಅದು 18 ಪರ್ಸೆಂಟ್ ಆಗಬೇಕೆಂದರೆ ಇನ್ನೂ 8,503 ಕೋಟಿ ರೂ.ಗಳನ್ನು special component programmeಗೆ ಬಿಡುಗಡೆ ಮಾಡಬೇಕೆಂದು ಒತ್ತಾಯ ಮಾಡುತ್ತೇನೆ. ಮೆಟ್ರಿಕ್ ಪೂರ್ವ ವಸತಿನಿಲಯಗಳಿಗೆ scholarship ಹೆಚ್ಚಳ ಮಾಡಿದ್ದಾರೆ. ಅವರ ಸಂಕಲ್ಪ ಚುನಾವಣಾ manifestoದಲ್ಲಿ

ಹೇಳಿರುವುದು 250 ರೂಪಾಯಿ ಹೆಚ್ಚು ಮಾಡುತ್ತೇವೆಂದು ಹೇಳಿದ್ದರು. ಆದರೆ ಈಗ ಕೇವಲ 150 ರೂಪಾಯಿ ಮಾಡಿದ್ದಾರೆ. ದಯಮಾಡಿ ಈಗ 450 ರೂಪಾಯಿ ಎನಿದೆ ಅದನ್ನು 900 ರೂಪಾಯಿ ಅಥವಾ 1000 ರೂಪಾಯಿಗೆ ಏರಿಸಬೇಕು. ಏಕೆಂದರೆ, ಇವತ್ತು ದರಗಳ ಬೆಲೆ ಸಾಕಷ್ಟು ಜಾಸ್ತಿಯಾಗಿದೆ. ಮೆಟ್ರಿಕ್ ಪೂರ್ವ ವಸತಿ ನಿಲಯಕ್ಕೆ ಕೊಡತಕ್ಕಂತಹ scholarshipಅನ್ನು ತಮ್ಮ election manifesto ದಲ್ಲಿ ಏನು ಹೇಳಿದ್ದೀರಿ ಅದರ ಪ್ರಕಾರ 250 ರೂಪಾಯಿಗೆ ಏರಿಸಿಲ್ಲ. ಬರೀ 150 ರೂಪಾಯಿ ಹೆಚ್ಚಳ ಮಾಡಿದ್ದೀರಿ. ಅದನ್ನು 500 ರೂಪಾಯಿಗೆ ಹೆಚ್ಚಳ ಮಾಡಬೇಕೆಂದು ಒತ್ತಾಯ ಮಾಡುತ್ತೇನೆ. ಕಳೆದ ಬಜೆಟ್‌ನಲ್ಲಿ ಸಣ್ಣ, ಅತೀ ಸಣ್ಣ ರೈತರಿಗಾಗಿ 25,000 ರೂಪಾಯಿ ಸಾಲ ಮನ್ನಾ ಮಾಡಿದ್ದಾರೆ. ಡಾ:ಅಂಬೇಡ್ಕರ ನಿಗಮ, SC-ST Corporation ನಲ್ಲಿ ಪರಿಶಿಷ್ಟ ಜಾತಿ ಪರಶಿಷ್ಟ ವರ್ಗದವರು ಸಾಲ ತೆಗೆದುಕೊಂಡಿದ್ದಾರೆ. ಪರಶಿಷ್ಟ ಜಾತಿ ವರ್ಗದವರು ಬ್ಯಾಂಕ್, ಸೊಸೈಟಿಗಳಲ್ಲಿ ಸಾಲ ತೆಗೆದುಕೊಳ್ಳುವುದು ಬಹಳ ಕಡಿಮೆ. ಅವರು 162 ಕೋಟಿ ರೂಪಾಯಿ ಸಾಲವನ್ನು ತೆಗೆದುಕೊಂಡಿದ್ದಾರೆ. ಆದುದರಿಂದ 162 ಕೋಟಿ ರೂಪಾಯಿ ಸಾಲ ಮನ್ನಾ ಮಾಡಬೇಕೆಂದು ನಾನು ಒತ್ತಾಯ ಮಾಡುತ್ತೇನೆ. "ಗಂಗಾ ಕಲ್ಯಾಣ" ಯೋಜನೆಯು ಒಂದು ಒಳ್ಳೆಯ ಯೋಜನೆ. ಅದರ ಅಡಿಯಲ್ಲಿ ಬರುವಂತಹ ಕೊಳವೆ ಬಾವಿಯಲ್ಲಿ ಸುಮಾರು 16 ಸಾವಿರ ಕೊಳವೆ ಬಾವಿಗಳು 4–5 ವರ್ಷದಿಂದ electrification ಆಗಿಲ್ಲ. ದಯಮಾಡಿ ಸಂಬಂಧಪಟ್ಟ ಇಲಾಖೆಯ ಮಂತ್ರಿಗಳು ಇದರ ಬಗ್ಗೆ ಗಮನಹರಿಸಬೇಕು.

ಶ್ರೀ ಎಂ. ನಾರಾಯಣಸ್ವಾಮಿ: ಅಧ್ಯಕ್ಷರೆ, ಸಮಾಜ ಕಲ್ಯಾಣ ಇಲಾಖೆಯ ವಿಷಯ ಚರ್ಚೆಯಾಗುತ್ತಿದೆ, ಮಾನ್ಯ ಮಂತ್ರಿಗಳು ಬೇರೆ ಕಡೆ ಹರಟೆ ಹೊಡೆದುಕೊಂಡು ಕುಳಿತುಕೊಂಡಿದ್ದಾರೆ, ಇದು ಸರಿ ಹೋಗುತ್ತದೆಯೇ?

ಶ್ರೀ ಆರ್.ಧ್ರುವನಾರಾಯಣ್: ಮಾನ್ಯ ಸಮಾಜ ಕಲ್ಯಾಣ ಸಚಿವರ ಗಮನವನ್ನು ಸೆಳೆಯುತ್ತೇನೆ, ಪರಿಶಿಷ್ಟ ಜಾತಿ:ವರ್ಗದವರು ತೆಗೆದುಕೊಂಡಿರುವ 162 ಕೋಟಿಗಳ ಸಾಲವಿದೆ, ಇದನ್ನು ತಾವು ಮನ್ನಾ ಮಾಡಬೇಕು. ಏಕೆಂದರೆ, ಕಳೆದ ಸಾರಿ ಆಯವ್ಯಯದಲ್ಲಿ ರೈತರಿಗೆ 25 ಸಾವಿರ ರೂಪಾಯಿಗಳು ಮನ್ನಾ ಮಾಡಲಾಗಿದೆ. ಹಾಗಾಗಿ ಏನು 162 ಕೋಟಿ ರೂಪಾಯಿಗಳನ್ನು ಹರಿಜನ–ಗಿರಜನರು ಸಾಲ ತೆಗೆದುಕೊಂಡಿದ್ದಾರೋ ಅದು ಕೂಡ ತಕ್ಷಣ ಮನ್ನಾವಾಗಬೇಕೆಂದು ನಾನು ಒತ್ತಾಯ ಮಾಡುತ್ತೇನೆ. ಮತ್ತೆ ಇನ್ನು 16 ಸಾವಿರ ಕೊಳವೆ ಬಾವಿಗಳು ಕಳೆದ 4–5 ವರ್ಷಗಳಿಂದ ಇನ್ನೂ electrification ಆಗಿಲ್ಲ. ಅದು ಕೂಡ electrification ಆಗಬೇಕು. ಬೋರ್ ವೆಲ್ ಯೂನಿಟ್ ಕಾಸ್ಟ್ 1

ಲಕ್ಷ ರೂಪಾಯಿ ಏನಿದೆ, ಅದನ್ನು 2 ಲಕ್ಷ ರೂಪಾಯಿಗೆ ಏರಿಸಬೇಕು. ಈ ಆಶ್ರಯ ಮನೆಗಳಿಗೆ 30 ಸಾವಿರದಿಂದ 40 ಸಾವಿರ ರೂಪಾಯಿಗಳಿಗೆ ಏರಿಸಿದ್ದೀರಿ, ಆದರೆ, ಅಂಬೇಡ್ಕರ್ ಮನೆಗಳಿಗೆ ಇನ್ನೂ 20 ಸಾವಿರ ರೂಪಾಯಿಗಳು ಇವೆ, ಈ ಬಗ್ಗೆ ವಸತಿ ಸಚಿವರು ಗಮನಹರಿಸಬೇಕು. ನಮಗೆ ಅಂಬೇಡ್ಕರ್ ಮತ್ತು ಆಶ್ರಯ ಮನೆಗಳು ಎರಡು ನಮಗೆ ಬರುತ್ತವೆ. ಅಂಬೇಡ್ಕರ್ ಮನೆಗೆ 20,000 ರೂಪಾಯಿ ಅನುದಾನ ಮಾತ್ರವಿರುವುದು. ಅದು ಕೂಡ on par with ಆಶ್ರಯ ಮನೆಗಳಿಗೆ ಏನು ಅನುದಾನವನ್ನು ಹೆಚ್ಚಳವನ್ನು ಮಾಡಿದ್ದಿರೋ, ಆ ಪ್ರಕಾರ ಅದೂ ಕೂಡ ಹೆಚ್ಚಳವಾಗಬೇಕೆಂದು ನಾನು ಒತ್ತಾಯ ಮಾಡುತ್ತೇನೆ. ಮತ್ತೆ ಈ ಸರ್ಕಾರದವರು ಲಿಕ್ಕರ್ ಶಾಪ್‌ಗಳಿಗೆ ಲೈಸೆನ್ಸ್ ಕೊಡಲು ಮುಂದಾಗುತ್ತಿದ್ದೀರಿ, ಅದನ್ನು ಮಾಡಬೇಡಿ ಎಂದು ನಾವು ಒತ್ತಾಯ ಮಾಡುತ್ತೇವೆ. In case,ನೀವು ಮಾಡೇ ಮಾಡುತ್ತೇವೆಂದರೆ, ಅದರಲೂ ಕೂಡ 18% ಪರಿಶಿಷ್ಟ ಜಾತಿ:ಪರಿಶಿಷ್ಟ ವರ್ಗದವರಿಗೂ ಕೂಡ ತಾವು ಲಿಕ್ಕರ್ ಶಾಪ್‌ಗಳನ್ನು ಕೊಡಬೇಕೆಂದು ನಾನು ಒತ್ತಾಯ ಮಾಡುತ್ತೇನೆ. ನಾನು ನಿಜವಾಗಲೂ ಅದು ಬೇಡವೆಂದು ಹೇಳುತ್ತೇನೆ. ಇನ್ನು ಬ್ಯಾಕ್‌ಲಾಗ್ ಪೋಸ್ಟ್‌ಗಳ ಬಗ್ಗೆ ಹೇಳುವುದಾದರೆ, ಹಿಂದೆ ಎಸ್.ಎಂ. ಕೃಷ್ಣರವರು ಮುಖ್ಯಮಂತ್ರಿಗಳಾಗಿದ್ದಾಗ ತಾವು ವಿರೋಧಪಕ್ಷದ ನಾಯಕರಾಗಿದ್ದಿರಿ, ಆಗ ಸುಮಾರು 17,000 ಬ್ಯಾಕ್‌ಲಾಗ್ ಹುದ್ದೆಗಳು ಭರ್ತಿಯಾದವು. ಆದಾದ ನಂತರ ಬ್ಯಾಕ್‌ಲಾಗ್ ಹುದ್ದೆಗಳು ಭರ್ತಿಯಾಗುತ್ತಿಲ್ಲ. ಮಾನ್ಯ ಸಮಾಜ ಕಲ್ಯಾಣ ಸಚಿವರು ಇದನ್ನು ತುಂಬಾ ಗಂಭೀರವಾಗಿ ತೆಗೆದುಕೊಂಡು, ದಯಮಾಡಿ ಸಾವಿರಾರು ಬ್ಯಾಕ್‌ಲಾಗ್ ಹುದ್ದೆಗಳು ಖಾಲಿ ಇವೆ, ಎಷ್ಟು ಬ್ಯಾಕ್‌ಲಾಗ್ ಹುದ್ದೆಗಳಿವೆ ಎಂಬುದಕ್ಕೆ ಈಗಲೇ ತಾವು ಸೂಚನೆ ನೀಡಿ ತಾವು ತಿಳಿಸಬೇಕು. ತತ್‌ಕ್ಷಣ ಬ್ಯಾಕ್‌ಲಾಗ್ ಹುದ್ದೆಗಳನ್ನು ತುಂಬುವುದಕ್ಕೆ ತಾವು ಕ್ರಮ ತೆಗೆದುಕೊಳ್ಳಬೇಕೆನ್ನುವ ಒತ್ತಾಯವನ್ನು ಕೂಡ ನಾನು ಮಾಡುತ್ತೇನೆ. ಇನ್ನು ನಮ್ಮ ಚಾಮರಾಜನಗರ ಜಿಲ್ಲೆಯನ್ನು ಬಹಳ ಕಡೆಗಣಿಸಿದ್ದಾರೆ. ಏಕೆಂದರೆ ನಾಲ್ಕು ನಾಲ್ಕು ಜನ ಕಾಂಗ್ರೆಸ್ ಶಾಸಕರೆಂದೀನೋ ಈ ಬಜೆಟ್ ಪುಸ್ತಕದಲ್ಲೂ ಕೂಡ ಅದರ ಒಂದು ನಮೂದನ್ನೂ ಕೂಡ ಮಾಡಿಲ್ಲ. ದಯಮಾಡಿ, ಆ ರೀತಿ ಮಾಡಬಾರದು, ಏಕೆಂದರೆ, ಇಲ್ಲಿ,ನೀತಿ ಬಹಳ ಮುಖ್ಯ ಜಾತಿಗೀತಿ ಇಲ್ಲ, ನಮಗೆ ನೀತಿ ಮುಖ್ಯವೆಂದು , ಮತ್ತೆ ಪ್ರೀತಿ ನೀತಿ ನಮ್ಮ ದೇವರುಗಳೆಂದೆಲ್ಲಾ ಇಲ್ಲಿ ಹೇಳಿದ್ದೀರಿ. ಆದೇ ರೀತಿ ತಾವು ಪಕ್ಷಭೇದವಿಲ್ಲದೆ ನಡೆದುಕೊಳ್ಳಬೇಕು. ನಮ್ಮದು ಅತ್ಯಂತ ಹಿಂದುಳಿದ ಜಿಲ್ಲೆ, ಡಾ: ನಂಜುಂಡಪ್ಪ ವರದಿಯ ಆಧಾರದಂತೆ ಚಾಮರಾಜನಗರ ಜಿಲ್ಲೆ ಹಿಂದುಳಿದ ಜಿಲ್ಲೆ ಜೊತೆಗೆ ಅದು ಗಡಿ ಜಿಲ್ಲೆಯಾಗಿದೆ. ದಯಮಾಡಿ, ಹೆಚ್ಚಿನ ಒತ್ತನ್ನು ನಮ್ಮ ಚಾಮರಾಜನಗರ ಜಿಲ್ಲೆಗೆ

ಕೊಡಬೇಕು. ಮತ್ತೆ 6 ವಿಶೇಷ ಆರ್ಥಿಕ ವಲಯವೆಂದು ಮಾಡಿದ್ದಾರೆ. ಅದರಲ್ಲಿ ಸಿಮೆಂಟ್ ವಲಯ, ಉಡುಪುಗಳ ವಲಯವೆಂದು ಈ ರೀತಿ ಇದೆ, ಎಲ್ಲೂ ಕೂಡ ನಮ್ಮ ಚಾಮರಾಜನಗರ ಜಿಲ್ಲೆಯನ್ನು ಉಲ್ಲೇಖಿಸಿಲ್ಲ, ದಯಮಾಡಿ, ನಮ್ಮ ಜಿಲ್ಲೆಯಾದ ಚಾಮರಾಜನಗರ ಜಿಲ್ಲೆಯನ್ನು ಈ ಒಂದು ವಿಶೇಷ ಕೈಗಾರಿಕಾ ವಲಯಕ್ಕೆ ಸೇರಿಸಬೇಕೆಂಬ ಒತ್ತಾಯ ಮಾಡುತ್ತೇನೆ. ಮಾನ್ಯ ಮಂತ್ರಿಗಳಾದ ಈಶ್ವರಪ್ಪನವರು ಇಲ್ಲ. ಕಬಿನಿ 2ನೇ ಹಂತದ ಬಗ್ಗೆ ಹೇಳುವುದಾದರೆ..

ಅಧ್ಯಕ್ಷರು: ನೋಡಿ ಎಲ್ಲಾ ವಿಷಯವನ್ನು ಕವರ್ ಮಾಡುವುದಕ್ಕಾಗುವುದಿಲ್ಲ, ಯಾವುದಾದರು ಒಂದು ವಿಷಯದ ಮೇಲೆ ಸ್ಟ್ರೆಸ್ ಮಾಡಿ, ನೀವು ಎಲ್ಲವನ್ನು ಕವರ ಮಾಡುವುದಕ್ಕೆ ಸಾಧ್ಯವಿಲ್ಲ ಅದು ಆಗುವುದೂ ಇಲ್ಲ. ಟೈಂ ಲಿಮಿಟ್ ಇದೆ. ಇಲ್ಲದಿದ್ದರೆ, ನಿಮಗೆ ಇನ್ನೂ ಅರ್ಧಗಂಟೆ ಕೊಡುತ್ತಿದ್ದೆ, ಈ ರೀತಿ ನೀವು ಮಾಡುವುದಾದರೆ ಬೇರಿಯವರಿಗೆ ಅವಕಾಶ ಸಿಗುವುದಿಲ್ಲ.

ಶ್ರೀ ಆರ್. ಧ್ರುವನಾರಾಯಣ್: ಸರ್. ಎರಡೇ ನಿಮಿಷ ಸಾಕು, ನಾನು 5-6 ದಿವಸಗಳಿಂದ ಕಾಯುತ್ತಿದ್ದೇನೆ.

ಅಧ್ಯಕ್ಷರು: ಮೊದಲು ನೀವು ಐದೇ ನಿಮಿಷ ಸಾಕೆಂದು ಹೇಳುತ್ತೀರಿ, ಆಮೇಲೆ 10 ನಿಮಿಷದವರೆಗೆ ಮಾತನಾಡುತ್ತೀರಿ, ನಾನು ಒಪ್ಪಿಕೊಳ್ಳುತ್ತೇನೆ. ಆದರೆ ಅನಿವಾರ್ಯ ಇವತ್ತು ಈ ರೀತಿಯ ಪರಿಸ್ಥಿತಿ ಬಂದಿದೆ. ಎಲ್ಲಾ ವಿಷಯವನ್ನು ಮಾತನಾಡುವ ಬದಲು ಒಬ್ಬೊಬ್ಬರು ಯಾವುದಾದರೂ ಒಂದು ವಿಷಯದ ಮೇಲೆ, ನಿಮ್ಮ ಜಿಲ್ಲೆ ಬಗ್ಗೆ ಸ್ಟ್ರೆಸ್ ಮಾಡಿ, ಎಲ್ಲಾ ಇಲಾಖೆಯ ಮೇಲೆ ಮಾತನಾಡುವುದಕ್ಕಾಗುವುದಿಲ್ಲ.

ಶ್ರೀ ಆರ್.ಧ್ರುವನಾರಾಯಣ್: ಕಬಿನಿ 2ನೇ ಹಂತದಿಂದ 1,25,000 ಎಕರೆಗೆ ನೀರಾವರಿಯಾಗುವಂಥದ್ದು, ಈಗಾಗಲೇ ಸರ್ವೆ ಕಾರ್ಯ ಮುಗಿದಿದೆ, ಮಾನ್ಯ ಉಪಮುಖ್ಯಮಂತ್ರಿಗಳಾಗಿದ್ದ ಸಿದ್ದರಾಮಯ್ಯನವರು, ಮಾನ್ಯ ಮಲ್ಲಿಕಾರ್ಜುನ ಖರ್ಗೆಯವರು ಆಗಲೇ 1200 ಕೋಟಿಗಳಿಗೆ ಆಡಳಿತಾತ್ಮಕ ಮಂಜೂರಾತಿಯನ್ನು ನೀಡಿದ್ದರು. ಈ ಬಜೆಟ್‌ನಲ್ಲಿ ಹಣವನ್ನು ಒದಗಿಸಿ ಆ ಒಂದು ಕಾರ್ಯವನ್ನು ತ್ವರಿತಗತಿಯಲ್ಲಿ ಮಾಡಬೇಕಾದ ಒತ್ತಾಯವನ್ನು ನಾನು ಮಾಡುತ್ತೇನೆ. ಅದೇ ರೀತಿ ಈ ಕೊಳ್ಳೇಗಾಲ, ಯಳಂದೂರು ಈ ಭಾಗದಲ್ಲಿ ಕೆರೆಗಳು ಹೆಚ್ಚಿವೆ, ಹಾಗಾಗಿ ಕೆರೆಗಳಿಗೆ ಅನುದಾನವನ್ನು ಸರಿಯಾಗಿ ಬಿಡುಗಡೆ ಮಾಡಬೇಕೆನ್ನುವ ಒತ್ತಾಯವನ್ನು ಮಾಡುತ್ತೇನೆ. ಕೊನೆಯದಾಗಿ, ಕಬ್ಬಿಗೆ ಎಲ್ಲಾ ತಾಲ್ಲುಕುಗಳಿಗೂ ಅನುದಾನ ಬಂದಿದೆ, ನಮ್ಮ ಕೊಳ್ಳೇಗಾಲ ತಾಲ್ಲೂಕಿನಲ್ಲಿ ರೈತರಿಂದ ತೆಗೆದುಕೊಂಡಿರುವ ಕಬ್ಬಿಗೆ ಇನ್ನೂ ಅನುದಾನ ಬಿಡುಗಡೆಯಾಗಿಲ್ಲ, ಆ ಒಂದು ಸಬ್ಸಿಡಿ ಹಣವನ್ನು ತಕ್ಷಣ ಬಿಡುಗಡೆ

ಮಾಡಬೇಕೆನ್ನುವ ಒತ್ತಾಯವನ್ನು ಮಾಡುತ್ತೇನೆ. ಶಾಸಕರ ನಿಧಿಯನ್ನು 2 ಕೋಟಿ ರೂಪಾಯಿಗಳಿಗೆ ಹೆಚ್ಚಿಸಬೇಕೆನ್ನುವ ಒತ್ತಾಯವನ್ನು ಮಾಡುತ್ತಾ ನನಗೆ ಮಾತನಾಡಲು ಅವಕಾಶ ಮಾಡಿಕೊಟ್ಟ ತಮಗೆ ವಂದಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

ಶ್ರೀ ಇ. ತುಕಾರಾಂ [ಸಂಡೂರು]: ಮಾನ್ಯ ಅಧ್ಯಕ್ಷರೆ, ನನಗೆ ಮಾತನಾಡಲು ಅನುಮತಿಯನ್ನು ಕೊಟ್ಟಿದ್ದಕ್ಕೆ ಮೊದಲನೆಯದಾಗಿ ನಾನು ತಮಗೆ ಅಭಿನಂದನೆಗಳನ್ನು ಸಲ್ಲಿಸುತ್ತೇನೆ. ನನ್ನ ಕ್ಷೇತ್ರವು ಗಣಿಗಾರಿಕೆಯಿಂದ ಕೂಡಿದ್ದು, ಆ ಪ್ರದೇಶದಲ್ಲಿ ಗಣಿಯಿಂದ ಸಾಗಾಣಿಕೆ ಮಾಡುವ ಕಾರ್ಯಕ್ರಮ ಸಾಕಷ್ಟು ಇರುವುದರಿಂದ ರಸ್ತೆಗಳು ದುರಸ್ತಿ ಕಾಣದೆ, ದುಃಸ್ಥಿತಿಗೆ ಬಂದಿರುತ್ತವೆ. ಅದರಲ್ಲೂ ಮುಖ್ಯವಾಗಿ ಹೊಸಪೇಟೆ-ಸಂಡೂರು ರಸ್ತೆಯು ತೀರಾ ದುಃಸ್ಥಿತಿಯನ್ನು ಕಂಡು ಇತಿಹಾಸ ಪುಟಗಳನ್ನು ಸೇರಿದೆ. ಅದಕ್ಕಾಗಿ ಈ ಒಂದು ರಸ್ತೆಗೆ ಆಗಲೇ 7 ಕೋಟಿ 14 ಲಕ್ಷ ರೂಪಾಯಿಗಳ ಅಂದಾಜನ್ನು ಕೆಎಲ್‌ಡಿಸಿಗೆ ಸಲ್ಲಿಸಿರುತ್ತೇವೆ. ಅದನ್ನು ಈ ಆಯವ್ಯಯದಲ್ಲಿ ತೆಗೆದುಕೊಂಡು ಅನುಮತಿ ಕೊಡಬೇಕೆಂದು ಮಾನ್ಯ ಲೋಕೋಪಯೋಗಿ ಸಚಿವರಲ್ಲಿ ಕೇಳಿಕೊಳ್ಳುತ್ತಿದ್ದೇನೆ. ಎರಡನೆಯದಾಗಿ ಆ ರಸ್ತೆಯು ಆ ದುಃಸ್ಥಿತಿಯಲ್ಲಿರುವುದರಿಂದ ಸಂಡೂರಿನಿಂದ ಹೊಸಪೇಟೆಗೆ 28 ಕಿ.ಮೀ. ರಸ್ತೆಯಲ್ಲಿ ಹೋಗಬೇಕಾದರೆ 2 ತಾಸು ಬೇಕಾಗುತ್ತದೆ. ಅದಕ್ಕಾಗಿ ಜನರೆಲ್ಲರೂ ತೋರಣಗಲ್ ರಸ್ತೆ ಮುಖಾಂತರ ಸುಮಾರು 50-60 ಕಿ.ಮೀ. ರಸ್ತೆಯಲ್ಲಿ ಹೋಗಬೇಕಾಗಿದೆ. ಇದರಿಂದ, ಆರ್ಥಿಕ ದೃಷ್ಟಿಯಿಂದ ನೋಡಿದಾಗ ಮೂರು ತಾಸಿನ ಪ್ರಯಾಣವನ್ನು ತೋರಣಗಲ್ಲಿನ ಮುಖಾಂತರ ಮಾಡುತ್ತಿದ್ದಾರೆ. ಇದೇ 28 ಕಿ.ಮೀ.ಗಳಲ್ಲಿ 2 ತಾಸಿನ ಪ್ರಯಾಣವನ್ನು ಮಾಡಿ ಅಲ್ಲಿನ ಪ್ರಯಾಣಿಕರು ಎಲ್ಲಾ ರೀತಿಯ ತೊಂದರೆಗಳನ್ನು ಅನುಭವಿಸುತ್ತಿದ್ದಾರೆ. ಅಲ್ಲಿರುವ ವಿದ್ಯಾರ್ಥಿಗಳು ಕೂಡ ಶಾಲೆಗೆ ಬರುವ ಸ್ಥಿತಿಯಲ್ಲಿಲ್ಲ. ಅದೇ ರೀತಿಯಾಗಿ ಸಂಡೂರಿನಲ್ಲಿರುವ ಉಳಿದ ರಸ್ತೆಗಳೆಲ್ಲವು ಹದಗೆಟ್ಟು ಹೋಗಿವೆ. ಅವುಗಳ ಬಗ್ಗೆ ಒಟ್ಟು 18 ಕೋಟಿ ರೂಪಾಯಿಗಳ ಒಂದು ಪ್ರಸ್ತಾವನೆಯನ್ನು ಕೂಡ ನಾನು ಲೋಕೋಪಯೋಗಿ ಸಚಿವರಿಗೆ ಸಲ್ಲಿಸಿದ್ದೇನೆ. ದಯಮಾಡಿ ಅಲ್ಲಿ ಗಣಿಗಾರಿಕೆ ಹೆಚ್ಚಾಗಿ ನಡೆಯುವುದರಿಂದ ರಸ್ತೆಗಳಿಗೆ ಆಯವ್ಯಯದಲ್ಲಿ ಪ್ರಾಮುಖ್ಯತೆಯನ್ನು ಕೊಡಬೇಕೆಂದು ನಾನು ಮೊದಲನೆಯದಾಗಿ ಕೇಳಿಕೊಳ್ಳುತ್ತಿದ್ದೇನೆ. ಸಂಡೂರು ತಾಲ್ಲೂಕಿನಲ್ಲಿ ಕಾರ್ಮಿಕ ವರ್ಗದವರು ಜಾಸ್ತಿ ಇರುವುದರಿಂದ ಆರೋಗ್ಯ ಇಲಾಖೆಯಲ್ಲಿ 50 ಬೆಡ್ ನಿಂದ 100 ಬೆಡ್ ಆಸ್ಪತ್ರೆಗೆ ಅಪ್ರೂವಲ್ ಆಗಿದೆ, ಅಲ್ಲಿ ಸಿಬ್ಬಂದಿಗಳ ಕೊರತೆ ಎದ್ದು ಕಾಣಿತ್ತಿದೆ. ಅದರಲ್ಲೂ ಮುಖ್ಯವಾಗಿ ಕಾರ್ಮಿಕರ ಅಪಘಾತಗಳು, ಸಾಮಾನ್ಯ ರೈತಾಪಿವರ್ಗ ಕೂಡ ಚಿಕಿತ್ಸೆ ತೆಗೆದುಕೊಳ್ಳುವುದಕ್ಕೆ ಸಿಬ್ಬಂದಿಯ ಕೊರತೆಯಿಂದ ತುಂಬಾ ತೊಂದರೆಯಾಗಿದೆ. ಇದರಿಂದ ಸಿಬ್ಬಂದಿ ಕೊರತೆಯನ್ನು ಮತ್ತು ಚಿಕಿತ್ಸೆಗೆ

ಬೇಕಾದ ಎಲ್ಲಾ ಆಧುನೀಕರಣವಾದ ಸಲಕರಣೆಗಳನ್ನು ಒದಗಿಸಿ, ಆ ಒಂದು ಆಸ್ಪತ್ರೆಯನ್ನು ಆಧುನಿಕ ಆಸ್ಪತ್ರೆಯನ್ನಾಗಿ ಮಾಡಬೇಕೆಂದು ನಾನು ಕೇಳಿಕೊಳ್ಳುತ್ತಿದ್ದೇನೆ. ಇನ್ನು ಕುಡುತಿನಿ ಗ್ರಾಮದಲ್ಲಿ ಕುಡಿಯುವ ನೀರಿಗಾಗಿ 2002–2003 ರಲ್ಲಿ ಭೂಸೇನಾ ನಿಗಮದಿಂದ ಅಪ್ರೂವಲ್ ಆಗಿ ಕೆಲಸ ಪ್ರಾರಂಭವಾಗಿತ್ತು. ಕಾರಣಾಂತರಗಳಿಂದ ಆ ಒಂದು ಕಾಮಗಾರಿಯು ಸ್ಥಗಿತಗೊಂಡಿರುತ್ತದೆ. ಆ ರೀತಿ ಒಂದು ಅಂದಾಜು, ರೀ ಸ್ಟಾರ್ಟ್ ಮಾಡಿ ಕುಡಿಯುವ ನೀರನ್ನು ಕುಡುತಿನಿ ಗ್ರಾಮಕ್ಕೆ ಕೊಡಬೇಕಾದಾಗ 2 ಕೋಟಿ 94 ಲಕ್ಷದ ಒಂದು ಅಂದಾಜುಪಟ್ಟಿಯನ್ನು ಮಾನ್ಯ ಗ್ರಾಮೀಣಾಭಿವೃದ್ಧಿ ಸಚಿವರಿಗೆ ಸಲ್ಲಿಸಿದ್ದೇವೆ.ದಯಮಾಡಿ ಈ ಆಯವ್ಯಯದಲ್ಲಿ ಅದನ್ನು ಪರಿಗಣಿಸಿ ಕುಡುತಿನಿ ಗ್ರಾಮಕ್ಕೆ ಕುಡಿಯುವ ನೀರಿನ ವ್ಯವಸ್ಥೆಯನ್ನು ಕಲ್ಪಿಸಿಕೊಡಬೇಕೆಂದು ಕೇಳಿಕೊಳ್ಳುತ್ತೇನೆ. ಅದೇ ರೀತಿಯಿಂದ ಗಣಿಗಾರಿಕೆ ಪ್ರದೇಶವಾಗಿರುವುದರಿಂದ ಅಲ್ಲಿ ಕುಡಿಯುವ ನೀರಿನ ಅವಶ್ಯಕತೆ ಬಹಳ ಇದೆ. ಹಳ್ಳಿಗಳಲ್ಲಿ 60% ಗಣಿಗಾರಿಕೆ ನಡೆಯುತ್ತಿದೆ. 40% ರೈತಾಪಿ ವರ್ಗ ಇದೆ. ಹಳ್ಳಿಗಳಲ್ಲಿ ಕುಡಿಯುವ ನೀರಿನ ಅವ್ಯವಸ್ಥೆ ಎದ್ದು ಕಾಣುತ್ತಿದೆ. ಜಲಾನಯನ ಅಭಿವೃದ್ದಿಗೆ estimate ಸಲ್ಲಿಸಿದ್ದೇನೆ. ದಯಮಾಡಿ ಈ ಆಯವ್ಯಯದಲ್ಲಿ consider ಮಾಡಿ ನಮ್ಮ ವಿಧಾನಸಭಾ ಕ್ಷೇತ್ರಕ್ಕೆ ತಾವು ಕಾಯಕಲ್ಪ ಕಲ್ಪಿಸಿಕೊಡಬೇಕೆಂದು ಕೇಳಿಕೊಳ್ಳುತ್ತಾ, ಕೊನೆಯದಾಗಿ ಸಾರ್ವಜನಿಕ ಸಮಾರಂಭಗಳಲ್ಲಿ ಸ್ಥಳೀಯ ಶಾಸಕರನ್ನು ಆಹ್ವಾನಿಸಿದೆ ಶಿಷ್ಟಾಚಾರವನ್ನು ಉಲ್ಲಂಘನೆ ಮಾಡಿರುವ ಅಧಿಕಾರಿಗಳ ವಿರುದ್ಧ ಕಾನೂನು ಚ್ಯುತಿ ನಿರ್ಣಯವನ್ನು ಮಂಡಿಸುವುದರ ಕುರಿತು ದಿನಾಂಕ 15–07–2008 ರಂದು ನನ್ನ ಕ್ಷೇತ್ರವಾದ...

ಅಧ್ಯಕ್ಷರು: ಮಾನ್ಯ ತುಕಾರಾಂರವರೇ, ಅದನ್ನು ಪ್ರತ್ಯೇಕವಾಗಿ ತೆಗೆದುಕೊಳ್ಳೋಣ ಇದರಲ್ಲಿ ಬೇಡ . ಅದಕ್ಕೆ ನಾಳೆ ಅವಕಾಶ ಕೊಡುತ್ತೇನೆ.

ಶ್ರೀ ಇ. ತುಕಾರಾಂ: ಇದಕ್ಕೆ ತಮ್ಮ ಅನುಮತಿ ತೆಗೆದುಕೊಂಡಿದ್ದೇನೆ.

ಶ್ರೀ ಮಲ್ಲಿಕಾರ್ಜುನ ಖರ್ಗೆ: ಮಾನ್ಯ ಅಧ್ಯಕ್ಷರೆ, ಅವರು ಹೊಸ ಸದಸ್ಯರು. ಮೊದಲನೇ ಸಲ ಮಾತನಾಡುತ್ತಿದ್ದಾರೆ. It is a maiden speech. ಎರಡನೆಯದು ಏನೆಂದರೆ, ಈ ಸದನದಲ್ಲಿ ಅನೇಕ ಸಾರಿ discussion ಆಗಿದೆ. ಯಾವುದೇ ಮತ ಕ್ಷೇತ್ರದಲ್ಲಿ ಸರ್ಕಾರದ ಕಾರ್ಯಕ್ರಮಗಳು ಇದ್ದರೆ, ಮಂತ್ರಿಗಳು ಹೋಗುವಾಗ ಆ ಮತ ಕ್ಷೇತ್ರಕ್ಕೆ ಸಂಬಂಧಪಟ್ಟಂತಹ ಶಾಸಕರಿಗೆ ಅಧ್ಯಕ್ಷತೆ ವಹಿಸುವುದಕ್ಕೆ, ಅಥವಾ ಅವರನ್ನು involve ಮಾಡುವುದಕ್ಕೆ ವ್ಯವಸ್ಥೆ ಮಾಡಬೇಕೆಂದು ಸುತ್ತೋಲೆ ಇದೆ. ಅವರ ಮತಕ್ಷೇತ್ರದಲ್ಲಿ ಆಗುವಂತಹ ಕಾರ್ಯಕ್ರಮಗಳಿಗೆ ಅವರನ್ನು ಬಿಟ್ಟು ಕಾರ್ಯಕ್ರಮ ಮಾಡುವುದು ಎಂದರೆ, ಅವರು ಶಾಸಕರು ಏಕೆ ಆಗಿರಬೇಕು? ಅದೇ ರೀತಿಯಾಗಿ ಬೇರೆಯವರು ಕೂಡ ಮಾಡಬಹುದು ನಾವು ಇಲ್ಲಿ ಎಲ್ಲರಿಗೂ

circular ಕಳುಹಿಸಿದ್ದೇವೆ. ದಯವಿಟ್ಟು ಹೇಳಿ.. ಈ ರೀತಿ ಶಾಸಕರನ್ನು ಬಿಟ್ಟು ಮಾಡುವುದೆಂದರೆ ಅದು ಚೆನ್ನಾಗಿರುವುದಿಲ್ಲ. ನಾಳೆ ಅವರಿಗೂ ಅದು ಅನ್ವಯಿಸುತ್ತದೆ.

ಅಧ್ಯಕ್ಷರು: ಈ ಬಜೆಟ್‌ನಲ್ಲಿ ಬೇಡ. ಅವರು ಸೆಪರೇಟಾಗಿ ನೋಟಿಸ್ ಕೊಟ್ಟಿದ್ದಾರೆ. ನಾನು ತೆಗೆದುಕೊಳ್ಳುತ್ತೇನೆ. ಅವರು ನೋಟಿಸ್ ಕೊಟ್ಟಿದ್ದಾರೆ, ನಾನು ಪ್ರತ್ಯೇಕವಾಗಿ ತೆಗೆದುಕೊಳ್ಳುತ್ತೇನೆ.

ಶ್ರೀ ಸಿದ್ದರಾಮಯ್ಯ: ಹೊಸದಾಗಿ ಆಯ್ಕೆಯಾಗಿದ್ದಾರೆ. circularಗಳು ಅನೇಕ ಇವೆ. ನೀವೇ direction ಕೊಟ್ಟು ಬಿಡಿ.

ಅಧ್ಯಕ್ಷರು: ಸಿದ್ದರಾಮಯ್ಯನವರೆ, ಏನು ಕಾರ್ಯಕ್ರಮ ಯಾವುದು ಮಾಡಿದ್ದಾರೆ, ಶಾಸಕರನ್ನು ಬಿಟ್ಟು ಯಾವುದೇ ಕಾಯಾಕ್ರಮಗಳನ್ನು ಮಾಡಬಾರದು. ಸಾಕಷ್ಟು circular ಗಳಿವೆ. ಅದರ ಬಗ್ಗೆ ನಾವು ಪದೇ ಪದೇ direction ಕೊಟ್ಟಿದ್ದೇವೆ. ಯಾವ ಕಾರ್ಯಕ್ರಮದಲ್ಲಿ ಹಾಗಾಗಿದೆ ಎಂದು details ಹೇಳಿದಾಗ ಅದಕ್ಕೆ ಒಂದು direction ಕೊಡುವುದಕ್ಕಾಗುತ್ತದೆ.

ಶ್ರೀ ಜಿ. ಜನಾರ್ಧನ ರೆಡ್ಡಿ: ಮಾನ್ಯ ಅಧ್ಯಕ್ಷರೆ, ಯಾವ ಕಾರ್ಯಕ್ರಮದಲ್ಲಿ ನಾವು ಅವರನ್ನು ಬಿಟ್ಟು ಮಾಡಿದ್ದೇವೆ ಎಂಬ ಮಾಹಿತಿ ಇಲ್ಲ.

ಅಧ್ಯಕ್ಷರು: ನಾಳೆ ಪ್ರಸ್ತಾಪ ಮಾಡುವಾಗ ವಿವರವಾಗಿ ಹೇಳುತ್ತಾರೆ. ಪ್ರತ್ಯೇಕವಾಗಿ ನೋಟಿಸ್ ಕೊಟ್ಟಿದ್ದಾರೆ ಅದನ್ನು ನಾಳೆ ತೆಗೆದುಕೊಳ್ಳುತ್ತೇನೆ. ನಾಳೆ ಉತ್ತರ ಕೊಡಿ.

ಶ್ರೀ ಇ. ತುಕಾರಾಂ: ಸರ್ಕಾರಿ ಸಮಾರಂಭವಾಗಿದೆ. ಇದರಲ್ಲಿ ಬಳ್ಳಾರಿ ಜಿಲ್ಲೆ ಪೋಲಿಸ್ ವರಿಷ್ಠಾಧಿಕಾರಿಯಾದ ಶ್ರೀಮಂತಕುಮಾರ ಸಿಂಗ್‌ರವರೂ ಕೂಡ ಹಾಜರಿರುತ್ತಾರೆ. ಆಹ್ವಾನ ಪತ್ರಿಕೆಯಲ್ಲಿ ನನ್ನ ಹೆಸರನ್ನು ಮುದ್ರಿಸದೆ ಶಿಷ್ಟಾಚಾರವನ್ನು ಉಲ್ಲಂಘನೆ ಮಾಡಿರುತ್ತಾರೆ. ನಾನು ಸದರಿ ದಿನಾಂಕದಂದು ಸಂಡೂರಿನಲ್ಲಿಯೇ ವಾಸ್ತವ್ಯ ಹೂಡಿದ್ದರೂ ಸಹ ಸಂಬಂಧಿಸಿದ ಅಧಿಕಾರಿಗಳು ನನಗೆ ಯಾವುದೇ ಸಮಾರಂಭದ ಬಗ್ಗೆ ಮೌಖಿಕವಾಗಿ ಅಥವಾ ಖುದ್ದಾಗಿ ಸಹ ತಿಳಿಸಿರುವುದಿಲ್ಲ. ಸದರಿ ದಿನಾಂಕದಂದು ನಾನು ಸಂಡೂರಿನ ಸಾರ್ವಜನಿಕ ಆಸ್ಪತ್ರೆಯಲ್ಲಿ ಏರ್ಪಡಿಸಿದ್ದ ಆರೋಗ್ಯ ಶಿಬಿರದಲ್ಲಿ ಭಾಗವಹಿಸಿದ್ದ ಸಂದರ್ಭದಲ್ಲಿ ಕ್ಷೇತ್ರದ ಜನರು ಈ ವಿಷಯವನ್ನು ನನ್ನ ಗಮನಕ್ಕೆ ತಂದಿರುತ್ತಾರೆ. ಮರುದಿನ ಪತ್ರಿಕೆಯಲ್ಲಿ ಈ ವಿಷಯ ಪ್ರಕಟವಾಗಿದ್ದು ಪತ್ರಿಕೆಯ ತುಣುಕನ್ನು ಇದರೊಂದಿಗೆ ಲಗತ್ತಿಸಿರುತ್ತೇನೆ. ನನ್ನನ್ನು ಕಡೆಗಣಿಸಿ ಕಾರ್ಯಕ್ರಮವನ್ನು ಏರ್ಪಡಿಸಿರುವುದು ಶಿಷ್ಟಾಚಾರದ ಸ್ಪಷ್ಟ ಉಲ್ಲಂಘನೆ ತೋರಿಸುತ್ತದೆ. ಈ ವಿಷಯವನ್ನು ನಾನು ಬಹಳ ಮುಂಚಿತವಾಗಿ ತಮ್ಮ ಗಮನಕ್ಕೆ ತಂದಿರುತ್ತೇನೆ. ಆದರೂ ನನಗೆ ಯಾವುದೇ ರೀತಿಯ ನ್ಯಾಯ ಸಿಗದೆ ಇರುವ

ಪ್ರಯುಕ್ತ ಈ ವಿಷಯದಲ್ಲಿ ಶಾಸಕರನ್ನು ಅಪಮಾನಿಸಿದ ಸರ್ಕಾರಿ ಅಧಿಕಾರಿಗಳ ನಿರ್ಲಕ್ಷ್ಯತನ ಹಾಗೂ ಕರ್ತವ್ಯನಿರ್ಲಕ್ಷ್ಯತೆ ಬಗ್ಗೆ ಸದನದ ಗಮನಕ್ಕೆ ತರುವುದಕ್ಕಾಗಿ ತಮ್ಮ ಅನುಮತಿಯನ್ನು ಕೋರುತ್ತೇನೆ. ಹೊಸದಾಗಿ ಬಂದ ಶಾಸಕನಾಗಿ ಎರಡು ಮಾತನಾಡಲು ಅವಕಾಶ ಕೊಟ್ಟಿದ್ದಕ್ಕಾಗಿ ಸಭಾಧ್ಯಕ್ಷರನ್ನು ವಂದಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

ಅಧ್ಯಕ್ಷರು: ಜನಾರ್ಧನ ರೆಡ್ಡಿಯವರೆ, ತಾವು ಬಳ್ಳಾರಿ ಜಿಲ್ಲೆಯ ಉಸ್ತುವಾರಿ ಮಂತ್ರಿಗಳಿದ್ದೀರಿ. ಶಾಸಕರು ಅವರ ಕ್ಷೇತ್ರದಲ್ಲಿ ನಡೆದಂತಹ ಯಾವುದೋ ಸರ್ಕಾರಿ ಕಾರ್ಯಕ್ರಮದಲ್ಲಿ ಆಮಂತ್ರಣ ಪತ್ರಿಕೆಯಲ್ಲಿ ಶಾಸಕರ ಹೆಸರು ಇಲ್ಲದೇ ಶಿಷ್ಟಾಚಾರ ಉಲ್ಲಂಘನೆ ಆಗಿದೆ ಎನ್ನುವ ವಿಷಯವನ್ನು ಪ್ರಸ್ತಾಪ ಮಾಡಿದ್ದಾರೆ. ಹಿಂದೆ ಈ ಸದನದಲ್ಲಿ ಸಾಕಷ್ಟು ಚರ್ಚೆಗಳಾಗಿವೆ. ಪ್ರತಿ ಹಂತದಲ್ಲಿ direction ಗಳಿವೆ. ಯಾವುದೇ ಸರ್ಕಾರಿ ಕಾರ್ಯಕ್ರಮದಲ್ಲಿ ಶಾಸಕರನ್ನು invite ಮಾಡಬೇಕು, ಆಮಂತ್ರಣ ಪತ್ರಿಕೆಯಲ್ಲಿ ಅವರ ಹೆಸರಿರಬೇಕು, ಅವರನ್ನು ಕರೆಯಬೇಕೆಂದು ಇದೆ. ಆ ಶಿಷ್ಟಾಚಾರ ಉಲ್ಲಂಘನೆ ಆಗಬಾರದು. ಅಲ್ಲಿ ಏನಾದರೂ ನಿಮ್ಮಲ್ಲಿ ಲೋಪ ಆಗಿದ್ದರೆ ಅದನ್ನು ಸರಿ ಮಾಡುವಂತಹ ಕೆಲಸ ಮಾಡಿ.

ಶ್ರೀ ಸಿ.ಎಸ್. ಪುಟ್ಟೇಗೌಡ: (ಶ್ರವಣಬೆಳಗೊಳ): ಮಾನ್ಯ ಅಧ್ಯಕ್ಷರೆ, 2008-09ನೇ ಸಾಲಿನ ಆಯವ್ಯಯದ ಮೇಲೆ ಮಾತನಾಡುವುದಕ್ಕೆ ಅವಕಾಶ ಮಾಡಿಕೊಟ್ಟಿದ್ದಕ್ಕೆ ನಾನು ತಮಗೆ ಅಭಿನಂದನೆಯನ್ನು ಸಲ್ಲಿಸುತ್ತಾ, ಎರಡು ಸಲ ಶಾಸಕನಾಗಿ ಆಯ್ಕೆಯಾಗಿ ಬಂದಂತಹ ಸಂದರ್ಭದಲ್ಲಿ ಅಧಿಕಾರರೂಢ ಪಕ್ಷದಲ್ಲಿದ್ದವನು, ಈ ಸಲ ವಿರೋಧ ಪಕ್ಷದಲ್ಲಿ ಕೂರತಕ್ಕಂತಹ ಸನ್ನಿವೇಶದಲ್ಲಿ ನಾವು ಇಲ್ಲಿ ವಿರೋಧ ಪಕ್ಷದಲ್ಲಿ ಕುಳಿತು ಆಡಳಿತ ಪಕ್ಷದವರನ್ನು ಬೈಯುವುದಕ್ಕೋ ಅಥವಾ ನಾವು ಹೇಳಿದಂತಹ ಸಲಹೆಯನ್ನು ತಿರಸ್ಕಾರ ಮಾಡುವುದಕ್ಕೋ ಅವರು ಇಲ್ಲವೆಂದು ನಾನು ಭಾವಿಸಿದ್ದೇನೆ. ಈ ಸದನದಲ್ಲಿ ನಮಗೆ ಬಹಳ ಮುಖ್ಯವಾಗಿ ಯಾರು ಏನು ಮಾತನಾಡುತ್ತಾರೆನ್ನುವುದನ್ನು ಕೇಳುವಂತಹ ಅವಕಾಶ ಮಾಡಿಕೊಡಬೇಕೆಂದು ಮೊದಲು ನಾನು ಅಧ್ಯಕ್ಷರಿಗೆ ಕೇಳಿಕೊಳ್ಳುತ್ತೇನೆ. ಏಕೆಂದರೆ ನಮ್ಮ ಮಾತುಗಳ ಗೊಂದಲದಿಂದ ಇಲ್ಲಿ ಕೂರಬೇಕೋ ಇಲ್ಲ ಊರಿಗೆ ಹೋಗಬೇಕೋ ಎನ್ನುವಷ್ಟು ಬೇಸರವಾಗುತ್ತದೆ. ದಯಮಾಡಿ ಯಾರು ಏನೇ ಅಧಿಕಾರರೂಢ ಪಕ್ಷದಲ್ಲಿ ಮಾತನಾಡಲಿ, ವಿರೋಧ ಪಕ್ಷದಲ್ಲಿ ಮಾತನಾಡಲಿ ಯಾರು ಏನು ಹೇಳಿದರು ಎಂದು ಕೇಳಿ, ಈ ರಾಜ್ಯದ ಜನರಿಗೆ ತಿಳಿಯುವಂತಹ ಕೆಲಸ ಮಾಡಬೇಕು ಎನ್ನತಕ್ಕಂಥದ್ದು ನನ್ನ ಮೊದಲ ವಿನಂತಿ ಎನ್ನತಕ್ಕಂತಹ ಮಾತನ್ನು ಹೇಳಿ, ಈ ಬಜೆಟನ್ನು ಮಂಡನೆ ಮಾಡುವಂತಹ ಸಂದರ್ಭದಲ್ಲಿ ಮಾನ್ಯ ಯಡಿಯೂರಪ್ಪನವರ

ಬಹಳ ದಿನಗಳ ಕನಸು ಇತ್ತು. ಅವರೂ ಕೂಡ ಬಹಳ ದಿವಸಗಳ ಕಾಲ ಶಾಸಕರಾಗಿ ಕೆಲಸ ಮಾಡಿದ್ದಾರೆ. ಎಲ್ಲರಿಗೂ ಸಹಜವಾಗಿ ಇದ್ದ ಹಾಗೆ ಈ ರಾಜ್ಯದ ಅಧಿಕಾರ ಸೂತ್ರವನ್ನು ಹಿಡಿಯಬೇಕೆಂಬ ಬಹಳ ದಿನಗಳ ಬಯಕೆ ಏನಿತ್ತು, ಅದು ಈಡೇರಿ ಇವತ್ತು ಆ ಭಾಗದಲ್ಲಿ ಅಧಿಕಾರ ಹಿಡಿದು 110 ಜನ ಶಾಸಕರನ್ನು ಹೊಂದಿ ಅಧಿಕಾರ ನಡಿಸುತ್ತಿರತಕ್ಕಂತಹ ಸಂದರ್ಭದಲ್ಲಿ ನಾನು ಅವರಿಗೆ ನನ್ನ ವಿನಂತಿ ಮಾಡುವುದು, ಹಿಂದಿನ ಕಾಲದಲ್ಲಿ ಜನ ಸರ್ಕಾರದಿಂದ ನಿರೀಕ್ಷೆ ಮಾಡುತ್ತಿದ್ದುದೇ ಬೇರೆ. ಅಂದಿನ ಮಂತ್ರಿಗಳಿಂದ ನಿರೀಕ್ಷೆ ಮಾಡುತ್ತಿದ್ದುದೇ ಬೇರೆ. ಅಂದಿನ ಶಾಸಕರಿಂದ ಬಯಸುತ್ತಿದ್ದುದೇ ಬೇರೆ. ಇವತ್ತಿನ ಜನರ ಆಶೋತ್ತರಗಳೇ ಬೇರೆ, ಬಯಕೆಗಳೇ ಬೇರೆ. ಆವತ್ತಿನ ಕಾಲಕ್ಕೆ ಗ್ರಾಮಾಂತರ ಪ್ರದೇಶಗಳಲ್ಲಿ ನಮ್ಮ ಹಳ್ಳಿಗಳಲ್ಲಿ ನಾವು ಕಂಡ ಹಾಗೆ ಹೇಗಿತ್ತೆಂದರೆ, ಒಬ್ಬ, ಶಾಸಕನೋ, ಮಂತ್ರಿಯೋ ಅವರ ಮನೆಯಲ್ಲಿ ಕೋಳಿ ಕೊಯ್ದಾಗ ಅವರ ಮನೆಗೆ ಊಟಕ್ಕೆ ಬಂದರೆ ಖುಷಿ ಪಡುತ್ತಿದ್ದರು. ಒಳ್ಳೆಯ ಮಳೆ ಆಗುತ್ತಿತ್ತು, ಬೆಳೆ ಆಗುತ್ತಿತ್ತು. ಕಣದಲ್ಲಿ ತುಂಬಿಕೊಂಡು ಸಮಾಧಾನದಿಂದ ಇರುವವರು. ಊರ ಪಟೇಲರೋ, ಛೇರ್ಮನ್‌ರೋ ಹೇಳಿದ ಹಾಗೆ ಓಟು ಹಾಕಿ ಬಿಟ್ಟು ಒಳ್ಳೆಯ ಮನುಷ್ಯನಂತೆ ಈ ಸಾರಿ ಮತ ಹಾಕಿ ತಾಳಿ ಮಾರಿಕೊಂಡಿದ್ದಾನಂತೆ, ಈ ಸಾರಿ ಮನೆ ಮಾರಿಕೊಂಡಿದ್ದಾನಂತೆ, ಎನ್ನುತ್ತಿದ್ದ ಕಾಲ ಇತ್ತು. ಇವತ್ತು ಖಂಡಿತ ಹಾಗೆ ಇಲ್ಲ. ಜನಪರವಾದ ಬಯಕೆಯೇ ಬೇರೆ ಇದೆ. ಎಲ್ಲವೂ ಸರ್ಕಾರದ ಮೇಲೆ ಅವಲಂಬಿತವಾಗಿರುತ್ತದೆ. ನಾವು ಕುಡಿಯುವ ನೀರಿನಿಂದ ಹಿಡಿದು ನಮ್ಮ ಮಕ್ಕಳಿಗೆ ಕಲಿಸತಕ್ಕಂತಹ ಶಾಲೆ, ನಾವು ಬಳಸತಕ್ಕಂತಹ ವಿದ್ಯುಚ್ಛಕ್ತಿ ಎಲ್ಲವೂ ಕೂಡ ಸರ್ಕಾರದ ಮೇಲೆ ಅವಲಂಬಿತವಾಗಿರುತ್ತದೆ. ಅದರಲ್ಲಿಯೂ ಶಾಸಕರಿಗಂತೂ ಬಹುಶಃ ಯಾರಿಗೂ ಇಲ್ಲದ ಕಮಿಟ್‌ಮೆಂಟ್ ಇರುತ್ತದೆ. ಜನರು ಕೇಳುತ್ತಾರೆ. ಒಬ್ಬ ಪಾರ್ಲಿಮೆಂಟ್ ಸದಸ್ಯನಿಗೂ ಕೂಡ ಅಷ್ಟು ಒತ್ತಡ ಇರುವುದಿಲ್ಲ. ಅಧಿಕಾರ ವಿಕೇಂದ್ರೀಕರಣ ಮಾಡಿದಂತಹ ಸಂದರ್ಭದಲ್ಲಿ ಜಿಲ್ಲಾ ಪಂಚಾಯಿತಿ, ತಾಲ್ಲೂಕು ಪಂಚಾಯಿತಿ ಮತ್ತು ಮಂಡಲ ಪಂಚಾಯಿತಿಯವರಿಗೆ ನಾವೇ ಒತ್ತಾಯ ಮಾಡಿ ಗೆಲ್ಲಿಸಿದರೂ ಕೂಡ ಕೊನೆಗೆ ಅವರು ಮಾಡದೇ ಇದ್ದುದು ಬಂದು ನಮ್ಮ ಹತ್ತಿರ ದೂರು ಹೇಳುತ್ತಾರೆ, ಅವರು ರೂಲಿಂಗ್ ಪಾರ್ಟಿಯವರೇ ಆಗಿರಲಿ ಅಥವಾ ವಿರೋಧ ಪಕ್ಷದವರೇ ಆಗಿರಲಿ. ಇಂತಹ ಸಂದರ್ಭದಲ್ಲಿ ದಯಮಾಡಿ ಸರ್ಕಾರ ನಡೆಸತಕ್ಕಂತಹವರು ನಮ್ಮೆಲ್ಲರ ಬಯಕೆಗಳನ್ನು ಮತ್ತು ಭಾವನೆಗಳನ್ನು ಅರ್ಥ ಮಾಡಿಕೊಂಡು ಎಲ್ಲಾ ಮಾಡುವುದಕ್ಕಾಗದೇ ಇದ್ದರೂ ಕೂಡ ಕಿಂಚಿತ್ತಾದರೂ ಮಾಡಿ ನಮ್ಮ ಶಾಸಕಗಿರಿಯ ಮಾನ ಮರ್ಯಾದೆ ಉಳಿಸಬೇಕನ್ನತಕ್ಕಂತಹ ವಿನಂತಿಯನ್ನು ಮಾಡುತ್ತಾ ಇವತ್ತು ಜನರ ಬಯಕೆ ಏನಿದೆ ಎಂದರೆ, ವಿದ್ಯೆ ಕೇಳುತ್ತಾರೆ, Education

ಅಂದ ತಕ್ಷಣ ನಮ್ಮ ಮಕ್ಕಳನ್ನು ಯಾರೂ ಹಳ್ಳಿಗಳಲ್ಲಿ ಓದಿಸುವುದಿಲ್ಲ. ಎಲ್ಲರೂ ಆಳಿಕೆ, ಬೆಂಗಳೂರು, ಊಟಿಗೆ ಕಳುಹಿಸುತ್ತಾರೆ. ಇಲ್ಲಿ ನಾವೆಲ್ಲಾ ಚರ್ಚೆ ಮಾಡುವಾಗ ಏನು ಮಾಡುತ್ತೇವೆ, ಕನ್ನಡಕ್ಕೆ ಆದ್ಯತೆ ಕೊಡಬೇಕೆಂದು ಹೇಳುತ್ತೇವೆ. ಕನ್ನಡಕ್ಕೆ ಆದ್ಯತೆ ಕೊಡಬೇಡಿ ಎಂದು ನಾವು ಹೇಳುವುದಿಲ್ಲ. ಇಲ್ಲ, ಬೆಂಗಳೂರಿನಲ್ಲಿರುವಂತಹ ಎಲ್ಲಾ English Medium ಶಾಲೆಗಳನ್ನು ರದ್ದು ಮಾಡಿ. ಇಲ್ಲಿರುವವರೆಲ್ಲ ಕೈ ಎತ್ತಿ ಯಾರ್ಯಾರು ನಮ್ಮ ಮಕ್ಕಳನ್ನು ನಾವು ಕನ್ನಡ ಮೀಡಿಯಂನಲ್ಲಿ ಓದಿಸುವುದಕ್ಕೆ ಸಿದ್ಧರಿದ್ದೇವೆಂದು ಹೇಳಿ. ನಾವೆಲ್ಲರೂ ಯಾರು ಕನ್ನಡದ ಬಗ್ಗೆ ಮಾತನಾಡುತ್ತೇವೆ, ಅವರ ಮಕ್ಕಳೆಲ್ಲಾ English Medium ನಲ್ಲಿ ಓದುವುದು, ಗ್ರಾಮಾಂತರ ಪ್ರದೇಶಗಲ್ಲಿರುವಂತಹ ಮಕ್ಕಳನ್ನು ನಿಮ್ಮ ಮಕ್ಕಳಿಗೆ ಕನ್ನಡ ಮೀಡಿಯಂ ಶಾಲೆಗೆ ಕಳುಹಿಸಿ ಎಂದರೆ ಯಾವ ನ್ಯಾಯ ಇದು?

ನಾನು ಹೇಳುವುದೇನೆಂದರೆ, ನೀವು ಕನ್ನಡ ಶಾಲೆಗಳನ್ನು ಮುಚ್ಚಿ ಎಂದು ನಾನು ಹೇಳುವುದಿಲ್ಲ, ಬೆಂಗಳೂರಿನಲ್ಲಿರುವ ಎಲ್ಲ ಇಂಗ್ಲೀಷ್ ಶಾಲೆಗಳನ್ನು ಮುಚ್ಚಿಸಿ ಎಲ್ಲರಿಗೂ ಒಂದೇ ರೀತಿಯ ವಿದ್ಯಾಭ್ಯಾಸವಾಗಲಿ. ಇಲ್ಲಿ ಬೆಂಗಳೂರಿನಲ್ಲಿ ಕುಮಾರನ್ಸ್ ಶಾಲೆಯಲ್ಲೋ, ಎಂ.ಇ.ಎಸ್. ಶಾಲೆಯಲ್ಲೋ ನಮ್ಮ ಮಕ್ಕಳನ್ನು ಓದಿಸಿ ದೊಡ್ಡದಾಗಿ ಮೈಕ್ ಹಿಡಿದುಕೊಂಡು ಗ್ರಾಮಗಳಲ್ಲಿ ಹಾಗೂ ನಮ್ಮ ಊರುಗಳಲ್ಲಿ ಭಾಷಣ ಮಾಡಿ ಕನ್ನಡಕ್ಕೆ ಆದ್ಯತೆ ಕೊಡಿ, ಕನ್ನಡಕ್ಕೆ ಕೈ ಎತ್ತಿ, ಕನ್ನಡಕ್ಕಾಗಿ ಹೊಡೆದಾಡಿ ಎಂದು ಹೇಳಿಬಿಟ್ಟರೆ, ನೀವು ಇಲ್ಲಿ ಇಂಗ್ಲೀಷ್ ಬರದೇ ಇದ್ದವರನ್ನು ವಿಧಾನಸೌಧ ಗೇಟ್‌ನಲ್ಲಿ ಒಳಗೆ ಬಿಡಿಸಿಕೊಳ್ಳುವುದೇ ಕಷ್ಟ. ನಾವು ಎಲ್ಲವನ್ನೂ ನೋಡಿದ್ದೇವೆ. ಆದುದರಿಂದ ದಯಮಾಡಿ ನೀವು ಕನ್ನಡಕ್ಕೆ ಆದ್ಯತೆ ಕೊಡಬೇಡಿ ಎಂದು ನಾನು ಹೇಳುವುದಿಲ್ಲ. ಇಲ್ಲಿರುವ ಇಂಗ್ಲೀಷ್ ಶಾಲೆಗಳನ್ನು ಮುಚ್ಚಿಸಿಬಿಡಿ ಎಲ್ಲರಿಗೂ ಒಂದೇ ರೀತಿಯ ವಿದ್ಯೆ ಇರಲಿ. ಹಳ್ಳಿಯಲ್ಲಿ ಓದುವ ಮಕ್ಕಳಿಗೆ 200 ಮಾರ್ಕ್ಸ್‌ದು ಸಿಲಬಸ್ ಇದ್ದರೆ, ನಗರದಲ್ಲಿರುವವರಿಗೂ 200 ಮಾರ್ಕ್ಸ್‌ದು ಸಿಲಬಸ್ ಇರಲಿ. ಕನ್ನಡದ್ದು 200 ಅಂಕಗಳದ್ದು ಅಲ್ಲಿದ್ದರೆ ಇಲ್ಲಿಯೂ ಹಾಗೆಯೇ ಇರಲಿ. ದಯಮಾಡಿ ಅದನ್ನು ಮಾಡಬೇಕು. ಈ ರೀತಿ ಮಾಡುವುದಕ್ಕಾಗುವುದಿಲ್ಲವೆಂದರೆ ತಾಲ್ಲೂಕು ಹೆಡ್‌ಕ್ವಾರ್ಟರ್‌ನಲ್ಲಿ ಒಂದೊಂದು ಇಂಗ್ಲೀಷ್ ಶಾಲೆಯನ್ನು ಪ್ರಾರಂಭ ಮಾಡಿ ನಮ್ಮ ಮಕ್ಕಳೂ ಕೂಡ ಸ್ವಲ್ಪ A,B,C,D ಕಲಿತುಕೊಳ್ಳಲಿ. ಲಂಡನ್‌ಗೋ, ಅಮೆರಿಕಾಕ್ಕೋ ನಮ್ಮ ಮಕ್ಕಳನ್ನು ಕಳುಹಿಸಬೇಡಿ. ಕನಿಷ್ಠ A,B,C,Dಕಲಿತುಕೊಂಡು ಇಲ್ಲಿ ವಾಚ್‌ಮೆನ್ ಹತ್ತಿರ is, was, that ಎಂದು ಹೇಳುವುದನ್ನಾದರೂ ಕಲಿತುಕೊಳ್ಳಲಿ. ಅದನ್ನು ಬಿಟ್ಟು ಇಲ್ಲಿ ಕನ್ನಡಕ್ಕೆ ಆದ್ಯತೆ ಕೊಡಿ ಎಂದು ಹೇಳುವವರ ಮಕ್ಕಳನ್ನೆಲ್ಲಾ ಒಳ್ಳೊಳ್ಳೆ ಇಂಗ್ಲೀಷ್ ಶಾಲೆಗೆ ಕಳುಹಿಸಿರುತ್ತಾರೆ. ನಾನಂತೂ ನನ್ನ ಮಕ್ಕಳನ್ನು ಇಂಗ್ಲೀಷ್ ಮೀಡಿಯಂ

ಸ್ಕೂಲ್‌ಗೆ ಕಳುಹಿಸಿದ್ದೇನೆ, ಸ್ವಾಮಿ. ಕಳುಹಿಸದಿದ್ದರೆ ನನ್ನ ಹೆಂಡತಿ ಬಿಡುತ್ತಿರಲಿಲ್ಲ. "ಏ, ನಿನ್ನ ಮುಖಕ್ಕೆ ಬೆಂಕಿ ಹಾಕ ಎಲ್ಲರೂ ತಮ್ಮ ಮಕ್ಕಳನ್ನು ಇಂಗ್ಲೀಷ್ ಸ್ಕೂಲ್‌ಗೆ ಕಳುಹಿಸುತ್ತಾರೆ ಹೀಗಿರುವಾಗ ನೀನು ಶಾಸಕನಾಗಿ ಇಂಗ್ಲೀಷ್ ಶಾಲೆಗೆ ಕಳುಹಿಸಲು ಸಿದ್ಧವಿಲ್ಲವೆ?" ಎಂದುಬಿಡುತ್ತಿದ್ದರು. ಅದು ಸತ್ಯ. ನಾನು ಅದನ್ನು ಒಪ್ಪಿಕೊಳ್ಳುತ್ತೇನೆ. ಸರ್ಕಾರದವರು ಎಲ್ಲರಿಗೂ ಕಟ್ಟುನಿಟ್ಟಾಗಿ ಒಂದೇ ರೀತಿಯ ವಿದ್ಯೆಯನ್ನು ಕಲಿಸಬೇಕು ಎನ್ನುವುದು ನನ್ನ ಮೊದಲನೆಯ ಅಭಿಪ್ರಾಯ. ಇನ್ನು ಆಸ್ಪತ್ರೆಗೆ ಸಂಬಂಧಪಟ್ಟಂತೆ ಹೇಳಬಯಸುತ್ತೇನೆ. ಯಾವ ಊರಿನಲ್ಲೂ ಕೂಡ ಎಂ.ಬಿ.ಬಿ.ಎಸ್. ಡಾಕ್ಟರ್‌ಗೆ 40 ಲಕ್ಷ 50 ಲಕ್ಷ ಎನ್ನುತ್ತಾರೆ. ನೀವೇನು ಎಲ್ಲ ಮಕ್ಕಳಿಗೂ ಮೆಡಿಕಲ್ ಕಾಲೇಜಿನಲ್ಲಿ ಓದುವುದಕ್ಕೆ ಫ್ರೀಯಾಗಿ ಸೀಟ್‌ನ್ನು ಕೊಡಿಸಿದ್ದೀರಿ? 40 ಲಕ್ಷ, 50 ಲಕ್ಷ ಕೊಟ್ಟು ಬಂದವರು ಅವರ ಮಕ್ಕಳನ್ನು ಹಳ್ಳಿಯಲ್ಲಿ 10 ಸಾವಿರ, 12 ಸಾವಿರ ಕೊಟ್ಟರೆ ಯಾವ ಡಾಕ್ಟರ್ ಹಳ್ಳಿಯಲ್ಲಿ ಇರುತ್ತಾನೆ? ಅಂಥ ಯಾವ ಡಾಕ್ಟರ್ ಕೂಡ ಹಳ್ಳಿಯಲ್ಲಿ ಒಬ್ಬರೂ ಇಲ್ಲ. ಪಾಸ್ ಆದವರೆಲ್ಲರೂ, ಏನು ಮಾಡುತ್ತಾರೆಂದರೆ ಇಲ್ಲೇ ಎಲ್ಲೋ ಬೆಂಗಳೂರಿನಲ್ಲಿ ಸೇಂಟ್ ಜಾನ್ಸ್‌ನಲ್ಲೋ ಅಥವಾ ಇಲ್ಲಿ ನಮ್ಮ ಆರೋಗ್ಯ ಸಚಿವರನ್ನೋ, ಖರ್ಗೆ ಸಾಹೇಬರನ್ನೋ, ದೇಶಪಾಂಡೆಯವರನ್ನೋ, ಒಟ್ಟಿನಲ್ಲಿ ಯಾರನ್ನೋ ಇಲ್ಲಿರುವ ಸಚಿವ ಮುಖಂಡರನ್ನು ಹಿಡಿದುಕೊಂಡು ಇಲ್ಲಿಯೇ ಕೆಲಸಕ್ಕೆ ಸೇರುತ್ತಾರೆ. ಇಲ್ಲಿಯೇ 50 ಸಾವಿರ, 60 ಸಾವಿರ ಸಂಬಳ ಕೊಡುವಾಗ ಹಳ್ಳಿಯಲ್ಲಿ 12 ಸಾವಿರ ಸಂಬಳಕ್ಕೆ ಯಾರು ಕೆಲಸಕ್ಕೆ ಹೋಗುತ್ತಾರೆ? ಈಗ ಹಳ್ಳಿಯಲ್ಲಿಯೂ ಡಾಕ್ಟರ್ ಕೆಲಸ ಮಾಡುವುದು ಪುಗಸಟ್ಟೆಯೇನಲ್ಲ. ಸತ್ತ ಹೆಣಾನೂ ತಂದು ಕಲ್ಲು ಹೊಡೆದು ಡಾಕ್ಟರ್‌ಗೆ ದಂಡ ಹಾಕುತ್ತಾರೆ. ಬಹಳ ಕಷ್ಟವಿದೆ. ಆದುದರಿಂದ ಡಾಕ್ಟರ್ ಸಂಬಳ ಸಾರಿಗೆಯನ್ನು ಜಾಸ್ತಿ ಮಾಡಿ. ಹೊಸ ಆಸ್ಪತ್ರೆಗಳನ್ನು ಕಟ್ಟುವುದಕ್ಕೆ ತಕ್ಕಂತೆ ಅಲ್ಲಿ ಡಾಕ್ಟರ್ ಇಲ್ಲದೇ ಇದ್ದರೆ ಜನರಿಗೆ ತೊಂದರೆಯಾಗುತ್ತದೆ. ದಯಮಾಡಿ ಡಾಕ್ಟರ್‌ಗಳನ್ನು ನೇಮಕ ಮಾಡಿಕೊಡಿ ಎನ್ನತಕ್ಕಂಥ ಮಾತನ್ನು ಹೇಳುತ್ತೇನೆ. ಇನ್ನು ಪಡಿತರ ಕಾರ್ಡ್ ಬಗ್ಗೆ ಹೇಳುವುದಾದರೆ ಈ ಕಾರ್ಡ್‌ನಲ್ಲಿ ನೀವು ಎ.ಬಿ.ಸಿ.ಡಿ. ಎಂದು ಮಾಡುತ್ತೀರೋ ಅಥವಾ ಬಡವ, ಮಧ್ಯಮ ವರ್ಗ, ಶ್ರೀಮಂತ ಎಂದು ಮಾಡುತ್ತೀರೋ ಗೊತ್ತಿಲ್ಲ. ಒಟ್ಟಿನಲ್ಲಿ ಎಲ್ಲರಿಗೂ ಕೂಡ ಕಾರ್ಡ್ ಇರುವಂತೆ ನೀವು ಮಾಡಬೇಕು. ಆದರೆ ಇದೇನಾಗಿದೆಯೆಂದರೆ, ಖರ್ಗೆ ಸಾಹೇಬರ ಸರ್ಕಾರ ಬಂದಾಗ ಅವರ ಬಡವರೇ ಬೇರೆ, ನಮ್ಮ ರೇವಣ್ಣನವರ ಸರ್ಕಾರ ಬಂದಾಗ ರೇವಣ್ಣನವರ ಬಡವರೇ ಬೇರೆ, ಯಡಿಯೂರಪ್ಪನವರ ಸರ್ಕಾರ ಬಂದಾಗ ಯಡಿಯೂರಪ್ಪನವಿಗೆ ಇರುವ ಬಡವರೇ ಬೇರೆ. ನಿಜವಾದ ಬಡವರ ಬಗ್ಗೆ ಹಳ್ಳಿಯಲ್ಲಿ ಏನಾಗಿದೆಯೆಂದರೆ, ಹಳ್ಳಿಯಲ್ಲಿ ಕೂಲಿ ಮಾಡಿಸುವವರಿಗೆಲ್ಲಾ ಕಾರ್ಡ್ ಇದೆ, ಆದರೆ ಕೂಲಿ

ಮಾಡುವವರಿಗೆ ಕಾರ್ಡ್ ಇಲ್ಲ. ಮಂಕ್ರಿ ಹೊತ್ತುಕೊಂಡು ಗುದ್ದಲಿ ಹಿಡಿದುಕೊಂಡು ಹೋಗುತ್ತಾರಲ್ಲಾ ಕೂಲಿಗೋಸ್ಕರ ಅವರ ಹತ್ತಿರ ಕಾರ್ಡ್ ಇಲ್ಲ. ಆದರೆ ಕೂಲಿ ಮಾಡಿಸುವವರ ಮನೆಯಲ್ಲಿ ಹಸಿರು ಕಾರ್ಡ್ ಇದೆ. ಇಂದು ಸರ್ಕಾರ ಬದಲಾವಣೆಯಾದಂತೆ ನಮ್ಮ ನಮ್ಮ ಹಿತಕ್ಕೆ ನಮ್ಮ ಬಾಲ ಹಿಡಿದವರಿಗೆ ನಮ್ಮ ಹಿತೈಷಿ ಎಂದುಕೊಳ್ಳುತ್ತೇವೆ. ದಯಮಾಡಿ ಈ ಬಗ್ಗೆ ಸಮಗ್ರವಾಗಿ ಚಿಂತನೆ ಮಾಡಿ ನಿಜವಾದ ಬಡವರಿಗೆ ಕಾರ್ಡ್ ಸಿಗಬೇಕು. ಬಡವರು ಯಾವ ಪಾರ್ಟಿಯವರೂ ಅಲ್ಲ. ಈ ಬಡವರಿಗೆ ನಿಜವಾಗಿ ಕಾರ್ಡ್ ಸಿಗುವಂಥ ಒಂದು ಕಾರ್ಯಕ್ರಮವನ್ನು ಮಾಡಿ. ಇದನ್ನು ಹಳ್ಳಿಯಲ್ಲಿರುವ ಬಹಳ ಜನರು ಬಯಸುತ್ತಾರೆ. ಇನ್ನು ಸಂಧ್ಯಾ ಸುರಕ್ಷಾ ಯೋಜನೆ ಏನಿದೆ ಆ ಯೋಜನೆ ಬೆನಿಫಿಟ್ ನಿಜವಾದ ಬಡವರಿಗೆ ಸಿಗಬೇಕು ಎನ್ನತಕ್ಕಂಥ ಮಾತನ್ನು ಹೇಳುತ್ತೇನೆ. ಇನ್ನು ಸೂರಿನ ಬಗ್ಗೆ ಹೇಳಬೇಕಾದರೆ, ಕೆಲವರು ಈ ಭಾಗದಲ್ಲಿ ಬೇಲೂರು ಘೋಷಣೆಯಾಗಿದೆ, ನಾವೆಲ್ಲರೂ ಒಪ್ಪಿಕೊಂಡಿದ್ದೇವೆ, ಕೋರ್ಟ್ ಒಪ್ಪುತ್ತಿಲ್ಲ ಎಂದು ಹೇಳುತ್ತಾರೆ. ಮನೆ ಕಟ್ಟುವ ಸಮಿತಿಯಲ್ಲಿ ಫಲಾನುಭವಿ ಆಯ್ಕೆಯ ಅಧಿಕಾರವನ್ನು ಕೆಲವರು ಶಾಸಕರಿಗೆ ಅವಕಾಶ ಕೊಡಿ ಎನ್ನುತ್ತಾರೆ, ಕೆಲವರು ಪಂಚಾಯತಿಗೆ ಆ ಅಧಿಕಾರವನ್ನು ಕೊಡಿ ಎನ್ನುತ್ತಿದ್ದಾರೆ. ನೀವು ಈ ಅಧಿಕಾರವನ್ನು ಪಂಚಾಯತಿಯವರಿಗಾದರೂ ಕೊಡಿ ಅಥವಾ ಶಾಸಕರಿಗಾದರೂ ಕೊಡಿ. ಈಗ 40 ಸಾವಿರ ಎಂದು ಏನು ನಿಗದಿ ಮಾಡಿದ್ದೀರಿ ಅದನ್ನು ಜಾಸ್ತಿ ಮಾಡಿ. ಪ್ರಧಾನರಿಗೆ ಒಂದು, ಪ್ರಧಾನರ ಚಿಕ್ಕವನ ಮಗನಿಗೆ ಒಂದು ಎಂದು ಬರೆದುಕೊಂಡರೆ, ಏಕೆ ಗೊತ್ತೆ? ಹರಿಜನರ ಹೆಸರು ಹೇಳಿ ಕಟ್ಟಿರುವ ದುಡ್ಡು ಇದೆಯಲ್ಲಾ, ಖರ್ಚು ಮಾಡಿರುವ ದುಡ್ಡು ಇದೆಯಲ್ಲಾ ಕೇಂದ್ರ ಸರ್ಕಾರ ಮತ್ತು ರಾಜ್ಯ ಸರ್ಕಾರದ್ದು ಆ ದುಡ್ಡನ್ನು ತೆಗೆಯಿರಿ, ಆಗ ನೋಡಿ ಒಬ್ಬರೂ ಮನೆ ಇಲ್ಲದವರು ಇರುವುದಿಲ್ಲ. ಆದರೂ ಮನೆ ಇಲ್ಲದ ಬೇರೆಯವರೂ ಇನ್ನೂ ಕೂಡ ಬೇಕಾದಷ್ಟು ಜನರಿದ್ದಾರೆ. ಬಡವರ ಹೆಸರು ಹೇಳಿ ದುಡ್ಡನ್ನು ಖರ್ಚು ಮಾಡುವುದೇ ಮುಖ್ಯವಲ್ಲ, ಪ್ರಾಕ್ಟಿಕಲ್ ಆಗಿ ಎಷ್ಟು ಎಕ್ಸ್‌ಪೀರಿಯನ್ಸ್ ಆಯಿತು ಎಂಬುದನ್ನು ನೋಡಬೇಕು. ನೀವು ಯಾರನ್ನಾದರೂ ಅಧ್ಯಕ್ಷರನ್ನಾಗಿ ಮಾಡಿ ನಾನು ಕೇಳುವುದಿಲ್ಲ, ಇದಕ್ಕೆ ಹದ್ದುಬಸ್ತು ಹಾಕಬೇಕು. ದಯಮಾಡಿ ಈ ಬಗ್ಗೆ ಚಿಂತನೆ ಮಾಡಿ ಎನ್ನತಕ್ಕಂಥದ್ದನ್ನು ಈ ಸಂದರ್ಭದಲ್ಲಿ ಹೇಳಬಯಸುತ್ತೇನೆ. ಇನ್ನು ಬಹಳ ಜನ ನಾವೆಲ್ಲರೂ ಚುನಾವಣಾ ಸಂದರ್ಭದಲ್ಲಿ ಸಾಲ ಮನ್ನಾ ಬಗ್ಗೆ ರೈತರಿಗೆ ಹೇಳಿರುತ್ತೇವೆ. ನಾನೊಬ್ಬನೇ ಅಂತಲ್ಲ, ಎಲ್ಲರೂ ಈ ರೀತಿ ಹೇಳಿರುತ್ತಾರೆ. ಈಗೇನಾಗಿಬಿಟ್ಟಿದೆಯೆಂದರೆ ಈಗ ಶಾಸಕರಾಗುವವರು ಪೂರ್ಣ ಅವಧಿ 5 ವರ್ಷ ಇರುತ್ತೇವೆ ಅಥವಾ 15 ವರ್ಷ ಶಾಸಕರಾಗಿಯೇ ಗೆದ್ದು ಬರುತ್ತೇವೆ ಎನ್ನುವ ದೂರದ

ಕಲ್ಪನೆಯನ್ನು ಯಾರೂ ಇಟ್ಟುಕೊಳ್ಳುವುದಿಲ್ಲ. ಈಗ ಹೇಗಾದರೂ ಒಂದು ಆಟ ಹೊಡೆದುಕೊಂಡರೆ ಇನ್ನು ಐದು ವರ್ಷ ಇರುತ್ತದೆ, ಆಮೇಲೆ ನೋಡೋಣ ಎನ್ನುವವರೇ ಹೆಚ್ಚು. ಸರ್ಕಾರ ಮಾಡಬೇಕು ಎಂದು ಹಿಡಿಯುವವರದ್ದೂ ಅಷ್ಟೇ, ಶಾಸಕಗಿರಿ ಹಿಡಿಯುವವರದ್ದೂ ಅಷ್ಟೇ. ಈ ರೀತಿಯಾಗಿಯೇ ಚುನಾವಣಾ ಪೂರ್ವದಲ್ಲಿ ನಾವು ಸಾಲ ಮನ್ನಾ ಮಾಡುತ್ತೇವೆ, ಅದನ್ನು ಮಾಡುತ್ತೇವೆ, ಇದನ್ನು ಮಾಡುತ್ತೇವೆ ಎಂದಿರುತ್ತೇವೆ. ಈಗ ಸಾಲವೇ ಹುಟ್ಟುತ್ತಿಲ್ಲ. ಗಂಭೀರವಾಗಿ ಈ ಬಗ್ಗೆ ಚಿಂತನೆ ಮಾಡಬೇಕು. ನೀವು ಭಂಡನ ಸಾಲ ಮನ್ನಾ ಮಾಡುತ್ತೀರಿ. ಆದರೆ ಮರ್ಯಾದೆಯಾಗಿ ಸಾಲ ಮರುಪಾವತಿಯನ್ನು ಸಕಾಲದಲ್ಲಿ ಕಟ್ಟಿರುತ್ತಾನೆ ಅವನಿಗೆ ಯಾವ ತರಹದ ಸವಲತ್ತೂ ಸಿಗುವುದಿಲ್ಲ. ಸಾಲ ಮನ್ನಾ ಮಾಡಿದ್ದೀರಿ. ಆದರೆ ಈ ವರ್ಷ ಸಾಲ ಕೊಡುತ್ತಿಲ್ಲ. ದಯಮಾಡಿ ಇದರ ಬಗ್ಗೆ ನೀವು ಗಂಭೀರವಾಗಿ ಚಿಂತನೆ ಮಾಡಬೇಕೆಂದು ಹೇಳುತ್ತೇನೆ. ಇನ್ನೂ ಕೃಷಿ ಮತ್ತು ತೋಟಗಾರಿಕೆ ಮತ್ತು ಜಲಾನಯನ ಅಭಿವೃದ್ಧಿ ಬಗ್ಗೆ ಹೇಳುವುದಾದರೆ, ಇದರ ಬಗ್ಗೆ ದಿವಂಗತ ಬೈರೇಗೌಡರು ಕೂಡ ಚಿಂತನೆಯನ್ನು ಮಾಡಿದ್ದರು. ಇವು ಮೂರೂ ಕೂಡ ರೈತರಿಗೆ ಸಂಬಂಧಪಟ್ಟಿದ್ದು. ಆದರೆ ಯಾರೋ ಬಿಳಿಯಾನೆಗಳನ್ನು ಸಾಕುವುದಕ್ಕೋಸ್ಕರ ಈ ಮೂರು ಇಲಾಖೆಗಳನ್ನು ಪ್ರತ್ಯೇಕವಾಗಿ ಮಾನ್ಯ ಯಡಿಯೂರಪ್ಪನವರು ಇಟ್ಟುಕೊಳ್ಳಬಾರದು. ಈ ಮೂರು ಇಲಾಖೆಗಳನ್ನೂ ಸೇರಿಸಿ ಒಂದೇ ಇಲಾಖೆಯನ್ನಾಗಿ ಮಾಡಿ. ಇದಕ್ಕೆ ಕೊಡುವಂಥ ಹಣ ನೇರವಾಗಿ ರೈತರಿಗೆ ತಲುಪಬೇಕು. ಆ ರೀತಿಯಲ್ಲಿ ಕಾರ್ಯಕ್ರಮವನ್ನು ಮಾಡಿದರೆ ತುಂಬ ಒಳ್ಳೆಯದು. ಅದನ್ನು ಬಿಟ್ಟು ಮೂರು ಇಲಾಖೆ, ಮೂರು ಸೆಕ್ರೆಟರಿಗಳು, ಇವರು ಮೂರು ಕಾರ್‌ಗಳಲ್ಲಿ ಎಲ್ಲಾ ಕಡೆ ಓಡಾಡಿದರೆ ಒಳ್ಳೆಯದಾಗುವುದಿಲ್ಲ. ಇದರಿಂದ ಬಹಳ ಹಣ ಪೋಲಾಗುತ್ತದೆ. ಏಕೆಂದರೆ, ನಾವೆಲ್ಲರೂ ಭಾಷಣ ಮಾಡುವಾಗ ರೈತರ ಪರವಾಗಿದ್ದೇವೆಂದು ಹೇಳುತ್ತೇವೆ. ಇವೊತ್ತು ಕೇವಲ ವ್ಯವಸಾಯ ಮಾಡುವ ರೈತರು ಬಹಳ ಚೆನ್ನಾಗಿ ಜೀವನ ನಡೆಸುತ್ತಿದ್ದೇವೆಂದು ಹೇಳುವುದು ಬಹಳ ಕಷ್ಟವಾಗಿದೆ. ಇವೊತ್ತು ವ್ಯವಸಾಯಗಾರನೂ ಕೂಡ ತನ್ನ ಮಗನಿಗೆ ನಾನು ಕಸ ಹೊರುತ್ತಿದ್ದೇನೆ, ಆದರೆ ನೀನು ಕಸ ಹೊರಬೇಡಪ್ಪಾ, ನೀನು ಬೇಕಾದರೆ ಗಾರ್ಮೆಂಟ್‌ನಲ್ಲಿ ಕೆಲಸ ಮಾಡು, ನೀನು ಬೆಂಗಳೂರಿಗೆ ಹೋಗು, ಈ ವ್ಯವಸಾಯದಿಂದ ಜೀವನ ಮಾಡುವುದಕ್ಕಾಗುವುದಿಲ್ಲವೆಂದು ಹೇಳುವ ಸ್ಥಿತಿ ಗ್ರಾಮಾಂತರ ಪ್ರದೇಶದಲ್ಲಿದೆ. ರೈತನಿಗೆ ಏನು ಧಾರೆ ಎರೆದರೂ ಕೂಡ ಅದು ವಾಪಸ್ ಬರದಂಥ ಸ್ಥಿತಿ ಇದೆ. ದಯಮಾಡಿ ನೀವು ಈ ಮೂರು ಇಲಾಖೆಗಳನ್ನು ಒಂದು ಮಾಡಿ ಒಂದು ಒಳ್ಳೆಯ ಕಾರ್ಯಕ್ರಮವನ್ನು ಮಾಡಬೇಕೆಂದು ಹೇಳಬಯಸುತ್ತೇನೆ. ಇನ್ನು ಬೃಹತ್

ಬೆಂಗಳೂರಿಗೆ ಮೂಲಭೂತ ಸೌಕರ್ಯಗಳನ್ನು ಕಲ್ಪಿಸುವುದಕ್ಕಾಗಿ ನೀವು 1800 ಕೋಟಿ ಕೊಟ್ಟಿದ್ದೀರಿ. ನೀವು ನೀರಾವರಿಗೆ ಕೃಷ್ಣಾ, ಕಾವೇರಿ, ಗೋದಾವರಿ ಜಲಾನಯನ ಅಭಿವೃದ್ಧಿಗೋಸ್ಕರ ಕೇವಲ 3394 ಕೋಟಿ ರೂಪಾಯಿಗಳನ್ನು ಕೊಟ್ಟಿದ್ದೀರಿ. ಇದು ಯಾವ ನ್ಯಾಯ? ಇದು ಚಿನ್ನದ ಮೊಟ್ಟೆ ಇಡುವುದು ಬೆಂಗಳೂರು. ಇಲ್ಲಿ ರೆವಿನ್ಯೂ ಕಲೆಕ್ಟ್ ಮಾಡುವುದಕ್ಕೆ ಹಲವಾರು ಮೂಲಗಳಿವೆ. ಒಂದು ಹಳ್ಳಿಯನ್ನೇ ಮಾರಿದರೂ ಈ ಬೆಂಗಳೂರಿನಲ್ಲಿ ಒಂದು ಸೈಟ್‌ನ್ನು ತೆಗೆದುಕೊಳ್ಳುವುದಕ್ಕೆ ಆಗುವುದಿಲ್ಲ. ಇಂಥದ್ದರಲ್ಲಿ 1800 ಕೋಟಿ ರೂಪಾಯಿಗಳನ್ನು ಬೆಂಗಳೂರು ಅಭಿವೃದ್ಧಿಗೆ ಕೊಡುತ್ತೇವೆಂದು ಹೇಳಿ 3394 ಕೋಟಿ ರೂಪಾಯಿಗಳನ್ನು ಇಡೀ ರಾಜ್ಯದ ನೀರಾವರಿಗೆ ಕೊಡುತ್ತೇವೆಂದು ಹೇಳಿದರೆ ಇದನ್ನು ಯಾವ ರೈತರಿಗೆ ಕೊಟ್ಟಿದ್ದಾಯಿತು ಯಡಿಯೂರಪ್ಪನವರೆ ನೀವು? ದಯಮಾಡಿ ಇದರ ಬಗ್ಗೆ ಮರುಚಿಂತನೆ ಮಾಡಬೇಕು. ನೀರಾವರಿ ಬಹಳ ಅತ್ಯಂತ ಅವಶ್ಯಕವಾದುದು. ನೀರಾವರಿ ವಿಚಾರದಲ್ಲಿ ಹೇಳುವಾಗ ಇವೊತ್ತು ಏನಾಗಿದೆ ನೀವು ನಮಗೆ ಹೊಲಕ್ಕೆ ನೀರು ಕೊಡುವುದು ಬೇಡ. ಬಹುಶಃ ಈ ದೇಶದಲ್ಲಿ ಮೂರನೇ World War ಆದರೆ ಕುಡಿಯುವ ನೀರಿಗಾಗಿ ಆಗುತ್ತದೆ. ಇವೊತ್ತು ಹಳ್ಳಿಯಲ್ಲಿ 400 ಅಡಿ, 800 ಅಡಿ ಬೋರ್ ಕೊರೆದರೂ ನೀರು ಬರುತ್ತಿಲ್ಲ. ನಮಗೇನು ಕೊಡಬೇಡಿಪ್ಪಾ, ನಮ್ಮ ಹಳ್ಳಿಯ ಕೆರೆಗೆ ನೀರು ತುಂಬಿಸಿ ಎಂದು ಹಳ್ಳಿಗೆ ಹೋದರೆ ಕೇಳಿಕೊಳ್ಳುತ್ತಾರೆ. ಇದರ ಬಗ್ಗೆ ಚಿಂತನೆಯನ್ನು ಮಾಡಿ. ಏಕೆಂದರೆ ಇದು ವಿವಾದ ಇರತಕ್ಕಂಥ ಸಂದರ್ಭ. ನೀವು ಒಂದು ಪದವನ್ನು ಬಜೆಟ್ ಪುಸ್ತಕದಲ್ಲಿ ಬಳಸಿದ್ದೀರಿ. ನದಿ ಮತ್ತು ಎಲ್ಲೆಲ್ಲಿ ನೀರು ವೇಸ್ಟ್ ಆಗುತ್ತದೆ ಅಂಥ ನೀರನ್ನು ಸರಿಯಾಗಿ ಬಳಕೆ ಮಾಡುವಂತೆ ಕೆರೆ ತುಂಬುವಂಥ ಕೆಲಸವನ್ನು ಮಾಡುತ್ತೇವೆ ಎಂದು ಹೇಳಿದ್ದೀರಿ. ಇದಕ್ಕೂ ಕೂಡ ನೀವು ಅತ್ಯಂತ ಹೆಚ್ಚಿನ ಆದ್ಯತೆ ಕೊಟ್ಟು ನೀರಾವರಿಗೆ ಹೆಚ್ಚಿನ ಹಣವನ್ನು ಕೊಡಬೇಕೆನ್ನುವ ನನ್ನ ಭಾವನೆಯನ್ನು ವ್ಯಕ್ತಪಡಿಸುತ್ತೇನೆ. ಇನ್ನು ರೈತರ ಪಂಪ್‌ಸೆಟ್‌ಗೆ ಪುಕ್ಕಟೆ ವಿದ್ಯುತ್ ಕೊಡುತ್ತೇವೆಂದು ಹೇಳಿದ್ದೀರಿ. ಇದು ಒಂದು ರೀತಿಯಲ್ಲಿ ಹಸಿ ಸುಳ್ಳು ಎಂದು ಕಾಣುತ್ತದೆ. ಏಕೆಂದರೆ ಬಂಗಾರಪ್ಪನವರ ಕಾಲದಲ್ಲಿ ವಿದ್ಯುತ್ ಬಿಲ್ ಮನ್ನಾ ಮಾಡುತ್ತೇವೆಂದು ಹೇಳಿದಾಗ ಯಾರೂ ಬಿಲ್ ಕಟ್ಟಿಲ್ಲ ಕಟ್ಟಿಸುವುದಕ್ಕೆ ಆಗುವುದೂ ಇಲ್ಲ. ಇದ್ರೆ ತಾನೆ ಕಟ್ಟಿಸುವುದು ನೀವು. ಆದುದರಿಂದ ನೀವು ದಯಮಾಡಿ ನಿರಂತರವಾಗಿ ಸಮರ್ಪಕವಾದ ವಿದ್ಯುತ್ತನ್ನು ಕೊಡುವುದಕ್ಕೆ ಹೊಸ ವಿದ್ಯುತ್ ಘಟಕಗಳನ್ನು ಪ್ರಾರಂಭ ಮಾಡುವುದಕ್ಕೆ ನೀವೆಲ್ಲೋ ಒಂದು ಕಡೆ 1000 ಮೆಗಾವ್ಯಾಟ್ ವಿದ್ಯುತ್ ಘಟಕ ಮಾಡುತ್ತೇವೆಂದು ಹೇಳಿದ್ದೀರಿ. ಅದು ಸಾಲದು. ಇನ್ನು ನಿಮ್ಮ ಚೀಪ್ ಪಾಪ್ಯುಲಾರಿಟಿಯನ್ನು ಬಿಟ್ಟುಬಿಡಿ ಸ್ವಾಮಿ. ಜನರು ಎಷ್ಟು ದಿನ

ಮರುಳಾಗುತ್ತಾರೆ. ಎಲ್ಲ ಜನರು ತಿರುಗಿ ನಮ್ಮ ಮೇಲೆ ಬೀಳುತ್ತಾರೆ. ಚೀಪ್ ಪಾಪ್ಯುಲಾರಿಟಿ ಸರ್ಕಾರದಲ್ಲಿ ನಿಲ್ಲಬೇಕು. ಅದು ಯಾವುದೇ ಸರ್ಕಾರವಾಗಿರಲಿ. ಅಗತ್ಯವಿರತಕ್ಕಂಥ ಕನಿಷ್ಠ ಕಾರ್ಯಕ್ರಮಗಳನ್ನು ಹತ್ತೋ, ಹನ್ನೆರಡೋ ಕಾರ್ಯಕ್ರಮಗಳನ್ನಷ್ಟೇ ಇಟ್ಟುಕೊಂಡು ಕೆಲಸ ಮಾಡಿ. ಜನರು ನಿಮ್ಮನ್ನು ಮೆಚ್ಚಿಕೊಳ್ಳುತ್ತಾರೆ. ಈ ದೇಶದ ಜನಗಳಿಗೆ ರಾಜಕಾರಣಿಗಳ ಮೇಲೆ ಗೌರವ ಏಕೆ ಕಡಿಮೆಯಾಗಿದೆಯೆಂದರೆ, ಈ ರಾಜಕಾರಣಿಗಳೆಂದರೆ ಒಂದು ರೀತಿಯ ಸುಳ್ಳಿನ ಮುದ್ದೆ, ಇವರ ಮನೆಯುಲ್ಲಿಯೇ ಸುಳ್ಳು ಹುಟ್ಟಿದೆ ಎನ್ನತಕ್ಕಂಥ ಭಾವನೆ ಈ ದೇಶದ ಜನರಲ್ಲಿ ಬಂದಿದೆ. ಚೀಪ್ ಪಾಪ್ಯುಲಾರಿಟಿ ಕಡಿಮೆಯಾಗಿ ಗಂಭೀರವಾಗಿ ಜನಗಳಿಗೆ ಬೇಕಾದಂಥ ಕಾರ್ಯಕ್ರಮವನ್ನು ಮಾಡಿದರೆ ಒಳ್ಳೆಯದಾಗುತ್ತದೆ ಎನ್ನತಕ್ಕಂಥ ಮಾತನ್ನು ಹೇಳುತ್ತೇನೆ. ಇನ್ನು ಕೊನೆಯದಾಗಿ ಎರಡು ಪಾರ್ಟಿ ನಮ್ಮ ಕೆಲಸವನ್ನು ನಾವು ಮಾಡುತ್ತಿದ್ದೇವೆ. ಪಕ್ಷಾಂತರ ಎನ್ನತಕ್ಕಂಥದ್ದು ಪಾಪ ನಿಮಗೆ 110 ಸೀಟ್ ಬಂದು ಇನ್ನು ಮೂರು ಜನ ಸಾಲದೆ ಸರ್ಕಸ್ ಏನೇನೋ ನಡೆದಿದೆ. ನಿಮ್ಮ ಹಿಂದೆ ಮುಂದೆ ಓಡಾಡುವವರು ಅತಿಯಾದರೆ ಇದರಿಂದಲೇ ಮತ್ತೆ ಇನ್ನು ಆರು ತಿಂಗಳಲ್ಲಿಯೇ ಬೈ-ಎಲೆಕ್ಷನ್ ಆದಾಗ ಇದು ನಿಮಗೆ ಮುಳುವಾಗುತ್ತದೆ. ನಿಜ, ನಿಮಗೆ ಸರ್ಕಾರ ನಡೆಸುವುದಕ್ಕೆ,. ನಿಮ್ಮ ಬಯಕೆ ಈಡೇರಿದೆ, ಈ ರಾಜ್ಯದ ಜನ ಗಂಭೀರವಾಗಿ ಸರ್ಟಿಫಿಕೇಟ್‌ನ್ನು ಈ ಮೂರು ತಿಂಗಳಿಗೆ ಕೊಟ್ಟಿಲ್ಲ. ಒಂದು ವರ್ಷ, ಒಂದೂವರೆ ವರ್ಷದಲ್ಲಿ ಈ ಜನ ಕರೆಕ್ಟಾಗಿ ಮಾರ್ಕ್ಸ್ ಹಾಕಿಬಿಡುತ್ತಾರೆ. ಖರ್ಗೆ ಸಾಹೇಬರ ಕಡೆಗೆ ಎಷ್ಟು ಹಾಕಬೇಕು,. ಯಡಿಯೂರಪ್ಪನವರ ಕಡೆಗೆ ಎಷ್ಟು, ಕುಮಾರಸ್ವಾಮಿಯವರ ಕಡೆಗೆ ಎಷ್ಟು ಎಂದು ಮಾರ್ಕ್ಸ್ ಹಾಕಿಬಿಡುತ್ತಾರೆ. ಅಷ್ಟರೊಳಗೆ ನೀವು ನಾನು ಹೇಳಿದೆಲ್ಲದರ ಬಗ್ಗೆ ಚಿಂತನೆ ಮಾಡಬೇಕು. ಯಾವುದೇ ಒಬ್ಬ ಮುಖ್ಯಮಂತ್ರಿ ನೇತೃತ್ವದ ಸರ್ಕಾರ ಮುಳುಗಿದರೆ ಅದು ವಿರೋಧಿಗಳಿಂದ ಮುಳುಗಿರುವುದಿಲ್ಲ. ದಿನಾ ನಮ್ಮ ಕಾರ್‌ನಲ್ಲಿಯೇ ಓಡಾಡುತ್ತಾರಲ್ಲ, ದಿನಾ ನಮ್ಮ ಕಾರ್‌ನಲ್ಲಿಯೇ ಓಡಾಡಿ ಈ ಮಲ್ಲಿಗೆ ಹೂ ಚೆನ್ನಾಗಿದೆ, ಈ ಸ್ವೀಟ್ ಚೆನ್ನಾಗಿದೆ ಈ ಮೈಸೂರ್ ಪಾಕ್ ಚೆನ್ನಾಗಿದೆ, ಸಾರ್ ಈ ಪೀಸ್ ಚೆನ್ನಾಗಿದೆ, ಮಟನ್ ಪೀಸ್ ಚೆನ್ನಾಗಿದೆ ಎಂದು ಹೇಳುತ್ತಾರಲ್ಲಾ ಇವರಿಂದಲೇ ಯಾರೇ ಒಬ್ಬ ಈ ದೇಶದ ರಾಜಕಾರಣಿ ಅಥವಾ ಈ ರಾಜ್ಯದ ಮುಖ್ಯಮಂತ್ರಿ ಅಥವಾ ಈ ರಾಜ್ಯದ ಸರ್ಕಾರ ಹಾಳಾಗಿರುವುದು . ಅವರ ಬಗ್ಗೆ ನಿಮಗೆ ನೂರು ಸಲ ಎಚ್ಚರಿಕೆ ಇರಲಿ. ನಿಮ್ಮ ಹಿತವನ್ನು ಬಯಸುವವರು ಎಲ್ಲೆಲ್ಲಿ ವಿರೋಧಿಗಳಿದ್ದಾರೋ, ನಿಮ್ಮ ವಿರೋಧಿಗಳು ಎಷ್ಟೆಷ್ಟು ಜನ.......

ಅಧ್ಯಕ್ಷರು:– ಪುಟ್ಟೇಗೌಡರೆ ಬೇಗ ಮುಗಿಸಿ. ಇನ್ನೂ ಸರ್ಕಾರದ ಉತ್ತರ ಪ್ರಾರಂಭವಾಗಬೇಕಿದೆ.

ಶ್ರೀ ಮಲ್ಲಿಕಾರ್ಜುನ ಖರ್ಗೆ: ಮಾನ್ಯ ಅಧ್ಯಕ್ಷರೆ, ಅವರು ಎರಡು ಮಾತು ಹೇಳಿದರು. ಒಂದು ಮಟನ್ ಪೀಸ್, ಇನ್ನೊಂದು ಮೈಸೂರ್ ಪಾಕು ಎಂದು.

ಶ್ರೀ ಸಿ.ಎಸ್. ಪುಟ್ಟೇಗೌಡ: ಏಕೆಂದರೆ ನಾನು ಅದನ್ನು ಕಣ್ಣಲ್ಲಿ ಕಂಡಿದ್ದೇನೆ.

ಶ್ರೀ ಮಲ್ಲಿಕಾರ್ಜುನ ಖರ್ಗೆ: ಈ ಮುಖ್ಯಮಂತ್ರಿಗಳಿಗೆ ಸಕ್ಕರೆ ಖಾಯಿಲೆ, ಅವರು ಮೈಸೂರ್ ಪಾಕು ತಿನ್ನುವ ಹಾಗೆ ಇಲ್ಲ, ಮಟನ್ ಕೂಡ ಮುಟ್ಟುವುದಿಲ್ಲ. ಮತ್ತೆ ಅವರು ಏನು ಮಾಡಬೇಕು?

ಶ್ರೀ ಸಿ.ಎಸ್. ಪುಟ್ಟೇಗೌಡ: ನಾನು ಈ ಮಾತನ್ನು ಮಾನ್ಯ ಯಡಿಯೂರಪ್ಪನವರಿಗೆ ಅಷ್ಟೇ ಹೇಳಲಿಲ್ಲ, ಇಲ್ಲಿರತಕ್ಕಂಥ ಎಲ್ಲರಿಗೂ ಈ ಮಾತನ್ನು ಹೇಳಿದ್ದು. ಏಕೆಂದರೆ ಇವತ್ತು ಅಧಿಕಾರ ಸೂತ್ರ ಹಿಡಿದಿದ್ದಾರೆ. ಏಕೆಂದರೆ ಯಾರೋ ವಿರೋಧಿಗಳ ಮೇಲೆ ತಮ್ಮ ದಮನಕಾರಿಯಾದ ಶಕ್ತಿಯನ್ನು ಬಳಕೆ ಮಾಡುವುದರಿಂದ ತಾವು ನಾಶವಾಗುತ್ತೀರಿ, ಒಳ್ಳೆಯದಾಗುವುದಿಲ್ಲ ಎನ್ನುವ ಎಚ್ಚರಿಕೆ ಮಾತನ್ನು ಹೇಳಿ, ನನಗೆ ಮಾತನಾಡುವುದಕ್ಕೆ ಅವಕಾಶ ಕೊಟ್ಟ ತಮಗೆ ಧನ್ಯವಾದಗಳು. ಶಾಸನಸಭೆಯಲ್ಲಿ ಮಾತನಾಡುವುದಕ್ಕೆ ಎಲ್ಲರಿಗೂ ಅವಕಾಶ ಕೊಡಬೇಕು.

ಶ್ರೀ ಬಿ.ಸಿ. ಪಾಟೀಲ್: ಮಾನ್ಯ ಅಧ್ಯಕ್ಷರೆ, ಯಾರಿಗೆ ಅವಕಾಶ ಕೊಡುತ್ತೀರಿ ಎಂದು ಹೇಳಿ. ನಾವು ಸುಮ್ಮನೆ ಕಾದುಕೊಂಡು ಕುಳಿತುಕೊಳ್ಳುವುದು ಬೇಡ.

ಅಧ್ಯಕ್ಷರು: ನಿಮ್ಮಲ್ಲಿ ಇನ್ನೊಬ್ಬರಿಗೆ ಅವಕಾಶ ಇದೆ, ಇಲ್ಲ ಆಗುವುದಿಲ್ಲ. ನಾನು close ಮಾಡುತ್ತೇನೆ.

ಒಬ್ಬರು ಮಾನ್ಯ ಸದಸ್ಯರು: ನಿನ್ನೆ ಒಬ್ಬೊಬ್ಬರಿಗೆ ಮೂರು ಗಂಟೆ time ಕೊಟ್ಟಿದ್ದೀರಿ.

ಶ್ರೀ ಮಲ್ಲಿಕಾರ್ಜುನ ಖರ್ಗೆ: ಹಾವೇರಿ ಜಿಲ್ಲೆಯ ಬಿ.ಸಿ. ಪಾಟೀಲ್, ಡಾ: ಶರಣ ಪ್ರಕಾಶ್, ಮೂರು ಜನರಿದ್ದಾರೆ ಅಷ್ಟೇ....

ಅಧ್ಯಕ್ಷರು: ಬಿ.ಸಿ. ಪಾಟೀಲ್ ಮತ್ತು ಡಾ: ಶರಣ ಪ್ರಕಾಶ್‌ರವರಿಗೆ last ನಲ್ಲಿ ಕೊಟ್ಟುಬಿಡುತ್ತೇನೆ. ಉಳಿದವರು ಯಾರೂ wait ಮಾಡುವುದಕ್ಕೆ ಹೋಗಬೇಡಿ. Reply ಆದಮೇಲೆ Clarification ಕೇಳುವಿರಂತೆ.

ಶ್ರೀ ನೆ.ಲ. ನರೇಂದ್ರಬಾಬು: ಮಾನ್ಯ ಅಧ್ಯಕ್ಷರೆ, ದಯಮಾಡಿ ತಾರತಮ್ಯ ಮಾಡಬೇಡಿ.

(ಗೊಂದಲ)

ಅಧ್ಯಕ್ಷರು: ಈಗಾಗಲೇ ನಿಮ್ಮ ನಾಯಕರು ಸಾಕಷ್ಟು ಮಾತನಾಡಿದ್ದಾರೆ, 3–4 ತಾಸು ಆಗಿದೆ. ಈಗ ಏನೂ ಮಾಡುವುದಕ್ಕೆ ಆಗುವುದಿಲ್ಲ. ಸಂಗಣ್ಣನವರೆ ಬೇಡ, ನಿಮ್ಮದು ನಿಲುವಳಿ ಸೂಚನೆ ಇದೆ, ಇನ್ನು ಸಾಕಷ್ಟು ವಿಷಯಗಳು ಮಾತನಾಡುವುದಿದೆ. ಈಗ ಅಶೋಕ್ ಮಾತನಾಡಿ.

ಶ್ರೀ ಸಂಗಣ್ಣ ಕರಡಿ ಅಮರಪ್ಪ: ಮಾನ್ಯ ಅಧ್ಯಕ್ಷರೆ, ಐದು ನಿಮಿಷ...

ಅಧ್ಯಕ್ಷರು: ಬೇಡ, ನಿಲುವಳಿ ಸೂಚನೆ ಇದೆ, ದಯವಿಟ್ಟು ಆಗ ಮಾತನಾಡುವಿರಂತೆ, ಈಗ ಸಾಕು. ಈಗ ಒಂದು ಗಂಟೆಗೆ ಮಾನ್ಯ ಮುಖ್ಯಮಂತ್ರಿಗಳು reply start ಮಾಡುತ್ತಾರೆ. ಸಂಗಣ್ಣ ಕರಡಿಯವರು, ಕುಳಿತುಕೊಳ್ಳಿ.

ಶ್ರೀ ಸಂಗಣ್ಣ ಕರಡಿ ಅಮರಪ್ಪ: ಮಾನ್ಯ ಅಧ್ಯಕ್ಷರೆ, ತಾವು ಅವಕಾಶ ಕೊಡಬೇಕು.

ಶ್ರೀ ಪಿ.ಎಂ. ಅಶೋಕ್ (ರಾಮದುರ್ಗ): ಮಾನ್ಯ ಅಧ್ಯಕ್ಷರೆ, ಆರ್ಥಿಕವಾಗಿ ನಮ್ಮ ರಾಜ್ಯ ಹಿಂದುಳಿದಿದೆ. ಶೇಕಡ 80 ರಷ್ಟು ಪ್ರದೇಶ ಒಣ ಬೇಸಾಯ ಆಗಿರುತ್ತಿದೆ. ಸಕಾಲದಲ್ಲಿ ಮಳೆ ಆಗಲಿಲ್ಲ, ಆದ್ದರಿಂದ ರೈತರು ಬಹಳ ಸಂಕಷ್ಟದಲ್ಲಿ ಇದ್ದಾರೆ. ರೈತರಿಗೆ ಮತ್ತು ನೇಕಾರರಿಗೆ ಮತ್ತು ಬೇರೆ ಉದ್ಯೋಗ ಮಾಡುವವರಿಗೆ ಬ್ಯಾಂಕಿನಿಂದ ಸಾಲ ಸಿಗುತ್ತಿಲ್ಲ. ನೇಕಾರ ಜನರಿಗೆ electricity ವಿಚಾರದಲ್ಲಿ ಬಹಳ ತೊಂದರೆಯಾಗಿದೆ, ಕರೆಂಟ್ ಕೊಡುವುದಕ್ಕೆ ಒಂದು time fix ಆಗಿಲ್ಲ, ಯಾವಾಗ ಎಂದರೆ ಆಗ ಕರೆಂಟ್ ತೆಗೆಯುತ್ತಾರೆ. ವಿದ್ಯುಚ್ಛಕ್ತಿ ಇಲಾಖೆಯವರು ಒಂದು time fix ಮಾಡಿದರೆ ಅವರಿಗೂ ಒಳ್ಳೆಯದಾಗುತ್ತದೆ. ನಮ್ಮ ತಾಲ್ಲೂಕಿನಲ್ಲಿರುವಂತಹ ನೇಕಾರರು ಬಹಳ ಸಂಕಷ್ಟದಲ್ಲಿದ್ದಾರೆ. ಅದಕ್ಕೆ ನಾನು ಮಾನ್ಯ ಮುಖ್ಯಮಂತ್ರಿಗಳಲ್ಲಿ ಕೇಳುವುದೇನೆಂದರೆ ಈ ಬಜೆಟ್‌ನಲ್ಲಿ ಹಣಕಾಸನ್ನು ರೈತರಿಗಾಗಿ ಜಾಸ್ತಿ ಇಡಬೇಕೆಂದು ಕೇಳಿಕೊಳ್ಳುತ್ತೇನೆ. ನನ್ನ ಕ್ಷೇತ್ರದಲ್ಲಿ ಶೇಕಡ 80 ರಷ್ಟು ಜನ ಕೃಷಿಯನ್ನು ಅವಲಂಬಿಸಿ ಜೀವನ ಸಾಗಿಸುತ್ತಿದ್ದಾರೆ. ಶೇಕಡ 20 ರಷ್ಟು ಜನರಿಗೆ ಮಾತ್ರ ನೀರಾವರಿ ಸೌಲಭ್ಯ ಇದೆ. ಇದರಿಂದ ಸಹ ವರ್ಷದಲ್ಲಿ ಒಂದೇ ಒಂದು ಬೆಳೆ ಬೆಳೆಯುವುದಕ್ಕೆ ಸಾಧ್ಯವಾಗುತ್ತದೆ. ಭೂಮಿಯ ಅಂತರ್ಜಲ ಮಟ್ಟ ಕೂಡ ಬಹಳ ಕಡಿಮೆ ಆಗಿದೆ. ಅದನ್ನು ಸುಧಾರಿಸಲು ಸಣ್ಣ ನೀರಾವರಿ ಕೆರೆಗಳ ನಿರ್ಮಾಣ ಅವಶ್ಯಕತೆ ಇದೆ. ಇದಕ್ಕೆ ಸಂಬಂಧಪಟ್ಟ ಹಾಗೆ ಇನ್ನೂ ಹೆಚ್ಚಿನ ಅನುದಾನವನ್ನು ಕಾಯ್ದಿರಿಸಬೇಕು ಎಂದು ನಾನು ಕೇಳಿಕೊಳ್ಳುತ್ತೇನೆ. ರೈತರಿಗೆ ಸಕಾಲದಲ್ಲಿ ಬಿತ್ತನೆ ಬೀಜಗಳನ್ನು ರಿಯಾಯಿತಿ ದರದಲ್ಲಿ ಸಮರ್ಪಕವಾಗಿ ವಿತರಣೆ ಮಾಡಬೇಕು ಎಂದು ಕೇಳುತ್ತಿದ್ದೇನೆ. ರೈತರು ತಮ್ಮ ಹೊಲದಲ್ಲಿ ಕೃಷಿ ಹೊಂಡವನ್ನು ಮಾಡುತ್ತಿದ್ದಾರೆ. ಅದರಲ್ಲಿ ಬಹಳ

ಅವ್ಯವಹಾರ ನಡೆಯುತ್ತಿದೆ. ಅದನ್ನು enquiry ಮಾಡುವುದಕ್ಕೆ ಉನ್ನತ ಸಭೆ ಮಾಡಿದರೆ ಒಳ್ಳೆಯದು. ಏಕೆಂದರೆ ಬಡ ರೈತರಿಗೆ ಹೊಂಡ ಸಿಗುತ್ತಿಲ್ಲ, ಶ್ರೀಮಂತ ರೈತರಿಗೆ ಮಾತ್ರ ಹೊಂಡ ಸಿಗುತ್ತಿದೆ. ಅದಕ್ಕೆ enquiry committee ಮಾಡಬೇಕೆಂದು ಸಲಹೆ ಮಾಡುತ್ತಿದ್ದೇನೆ. ನಮ್ಮ ತಾಲ್ಲೂಕಿನಲ್ಲಿ Transformerಗಳು ಸುಟ್ಟುಹೋದರೆ 24 ಗಂಟೆಯೊಳಗೆ replace ಮಾಡಬೇಕೆಂದು ಒಂದು ಕಾನೂನು ಇದೆ. ಆದರೆ 2-3 ತಿಂಗಳಾದರೂ ಕೂಡ Transformer replace ಮಾಡುತ್ತಿಲ್ಲ. ಅದನ್ನು replacement ಮಾಡಿಕೊಡುವುಕ್ಕೋಸ್ಕರ 10 ರಿಂದ 15 ಸಾವಿರ ರೂಪಾಯಿ ಲಂಚ ತೆಗೆದುಕೊಳ್ಳುತ್ತಿದ್ದಾರೆ. ಅದರ ಬಗ್ಗೆ ತಾವು enquiry ಮಾಡಿದರೆ ತಮಗೆ ಗೊತ್ತಾಗುತ್ತದೆ. ನಾವು ಶಾಸಕರು ಕೇಳಿದರೆ 15-20 ಜನ queue ನಲ್ಲಿ ಇದ್ದಾರೆ ಎಂದು ಹೇಳುತ್ತಾರೆ, ಯಾರು 10-15 ಸಾವಿರ ರೂಪಾಯಿ ಕೊಡುತ್ತಾರೋ ಅವರಿಗೆ ರಾತ್ರೋರಾತ್ರಿ Transformer ಕೊಡುತ್ತಿದ್ದಾರೆ. ಆದುದರಿಂದ ಎಲ್ಲಾ ಹಳ್ಳಿಗಳಲ್ಲಿ Rural Load Management System ಹಾಕಿದರೆ ಬಹಳ ಒಳ್ಳೆಯದು. ಏಕೆಂದರೆ ರೈತರು ಸ್ವಲ್ಪ misuse ಮಾಡುವುದಿಲ್ಲ. ಬಹಳ ಜನ Current ಕೂಡ ಕದಿಯುತ್ತಾರೆ ಆದರಿಂದ TCಸುಟ್ಟು ಹೋಗುತ್ತದೆಂದು officers ಹೇಳುತ್ತಾರೆ. ಆದರೆ ಈ unit ಹಾಕಿದರೆ, trip ಆಗಿ ಕರೆಂಟ್ ಕೂಡ ಹೋಗುವುದಿಲ್ಲ, ಆ ರೈತರಿಗೂ ತೊಂದರೆಯಾಗುವುದಿಲ್ಲವೆಂದು ನನಗೆ ಅನಿಸುತ್ತದೆ.

ಇನ್ನು ಮಧ್ಯಾಹ್ನದ ಹೊತ್ತು ಮಕ್ಕಳಿಗೆ ಬಿಸಿ ಊಟ ಕೊಡುತ್ತಿದ್ದಾರೆ. ಆ ಊಟ ಕೊಡುವ scheme ಅನ್ನು ನಮ್ಮ ಸರ್ಕಾರದವರು ತಂದರು. ಕುಡಿಯುವ ನೀರಿನ ಸೌಲಭ್ಯ ಮಕ್ಕಳಿಗೆ ಇಲ್ಲ. ಶಾಲೆಗಳಲ್ಲಿ ಕುಡಿಯುವ ನೀರು ಇಲ್ಲ, ಅಲ್ಲಿ ಶುದ್ಧವಾದ ಕುಡಿಯುವ ನೀರು ಕೊಡಿಸಬೇಕೆಂದು ನಾನು ಕಳಕಳಿಯಿಂದ ಮನವಿ ಮಾಡಿಕೊಳ್ಳುತ್ತೇನೆ.

ನಮ್ಮ ಸ್ನೇಹಿತರು ಈಗಾಗಲೇ ಹೇಳಿದ ಹಾಗೆ ಡಾಕ್ಟರುಗಳಿಗೆ ಜಾಸ್ತಿ ಸಂಬಳ ಕೊಡಬೇಕು, ಇಲ್ಲದೆ ಇದ್ದರೆ ಹಳ್ಳಿಗಳಿಗೆ ಯಾವ ಡಾಕ್ಟರುಗಳು ಬರುವುದಿಲ್ಲ. ಡಾಕ್ಟರುಗಳು ಅಷ್ಟೇ ಅಲ್ಲ, staff ಕೂಡ ಕಡಿಮೆ ಇದ್ದಾರೆ. ಹಳ್ಳಿಗಳ ಕಡೆ ಯಾರೂ ಬರುವುದಿಲ್ಲ. ತಾವು ಅದನ್ನೂ ಕೂಡ ಮಾಡಿಕೊಡಬೇಕು. ನಮ್ಮ ರಾಮದುರ್ಗ ತಾಲ್ಲೂಕಿನಲ್ಲಿ, ರಾಮದುರ್ಗ ಊರಿಗೆ ಹೋಗಬೇಕಾದರೆ ಒಂದು ಕಡೆ ಮುಳ್ಳೂರು ಘಾಟ್ ಎಂದು ಬಹಳ ದೊಡ್ಡ ಘಾಟ್ ಇದೆ. ಮಾನ್ಯ ಮುಖ್ಯಮಂತ್ರಿಗಳು ಚುನಾವಣಾ ಸಮಯದಲ್ಲಿ ಬಂದಾಗ ಅವರ ಪಕ್ಷದ ಪರವಾಗಿ ಮಾತನಾಡಿದಂತಹ ಸಂದರ್ಭದಲ್ಲಿ ಕೂಡ ಆ ಘಾಟ್ ಒಡೆದು ರಸ್ತೆಯನ್ನು ಸರಿ ಮಾಡುತ್ತೇವೆಂದು ಆಶ್ವಾಸನೆಯನ್ನು ಕೊಟ್ಟಿದ್ದಾರೆ. ನಮ್ಮ ರಾಮದುರ್ಗ ತಾಲ್ಲೂಕಿನಲ್ಲಿ ವ್ಯಾಪಾರಾ

ವಹಿವಾಟು ಯಾವುದಕ್ಕೂ ಕೂಡ ಸರಿ ಆಗಲಿಲ್ಲ. ಆದುದರಿಂದ ಮುಳ್ಳೂರು ಘಾಟ್ ಒಡೆದು ರಸ್ತೆ ಸುಧಾರಣೆ ಮಾಡಿದರೆ ಬಹಳ ಒಳ್ಳೆಯದಾಗುತ್ತದೆ ಎಂದು ಹೇಳುತ್ತೇನೆ.

ಸಂಪೂರ್ಣ ಸ್ವಚ್ಛ ಆಂದೋಲನಾ ಕಾರ್ಯಕ್ರಮ ಕೇಂದ್ರ ಸರ್ಕಾರದ ಯೋಜನೆ ಇದೆ. ಒಂದು ಶೌಚಾಲಯ ನಿರ್ಮಾಣ ಮಾಡುವುದಕ್ಕೆ 2,00,000 ರೂಪಾಯಿ ಕೊಡುತ್ತಿದ್ದಾರೆ. ಎರಡು ಸರ್ಕಾರದಿಂದ 1,60,000 ಕೊಡಬೇಕಾಗಿದ್ದು, ಅದರಲ್ಲಿ 1,20,000 ಕೇಂದ್ರ ಸರ್ಕಾರ ಕೊಡುತ್ತಿದ್ದಾರೆ, ಇನ್ನು ರಾಜ್ಯ ಸರ್ಕಾರ 40,000 ಸಾವಿರ ರೂಪಾಯಿ ಕೊಟ್ಟು ಕಟ್ಟಬೇಕು, ಇನ್ನು 40,000 ರೂಪಾಯಿಯನ್ನು ಗ್ರಾಮಸ್ಥರು ಹಾಗೂ ಪಂಚಾಯಿತಿಯವರು ಕೊಡಬೇಕೆಂದು ಇದೆ.ನಮ್ಮ ತಾಲ್ಲೂಕಿನಲ್ಲಿ ಗ್ರಾಮಸ್ಥರು ಹಾಗೂ ಪಂಚಾಯಿತಿಯವರು ಬಹಳ ಬಡವರಿದ್ದಾರೆ ಅವರು ಯಾರೂ ಕೊಡುವುದಕ್ಕಾಗುವುದಿಲ್ಲ. ಆದುದರಿಂದ ಆ 40,000 ರೂಪಾಯಿಯನ್ನು ಸರ್ಕಾರವೇ ಭರಿಸಿ ಶೌಚಾಲಯ ನಿರ್ಮಿಸಬೇಕೆಂದು ಹೇಳುತ್ತಿದ್ದೇನೆ.

ತಮಗೆಲ್ಲ ಗೊತ್ತಿರುವ ಹಾಗೆ ಮಾನ್ಯ ನಜೀರ್‌ಸಾಬ್‌ರವರು ಇದ್ದಾಗ ಗ್ರಾಮ ಪಂಚಾಯಿತಿಯಲ್ಲಿ de-centralisation of power ಎಂದು ಮಾಡಿದರು. ಈಗ ಏನಾಗಿದೆ ಎಂದರೆ de-centralisation of corruption ಆಗಿಬಿಟ್ಟಿದೆ. ಎಲ್ಲಾ ತಾಲ್ಲೂಕು ಪಂಚಾಯಿತಿಗಳಲ್ಲಿ ಮತ್ತು ಹಳ್ಳಿಗಳಲ್ಲಿ ಈಗ ಮನೆಗಳನ್ನು ಕೊಡುತ್ತಿದ್ದೀರಿ. ಯಾವುದೇ ಪಕ್ಷದ ಬೆಂಬಲಿತರಾಗಿರಲಿ 5–10 ಸಾವಿರ ಲಂಚ ಇಲ್ಲದೆ ಬಡವರಿಗೆ ಮನೆಗಳು ಸಿಗುತ್ತಿಲ್ಲ. ಅದನ್ನು ತಪ್ಪಿಸುವುದಕ್ಕೋಸ್ಕರ ಒಂದು ಕಮಿಟಿ ಮಾಡಬೇಕು ಎಂದು ನಾನು ಸದನದ ಮುಖಾಂತರ ವಿನಂತಿಸುತ್ತೇನೆ.

ನಮ್ಮ ಶಾಸಕರಿಗೆ ನಿಧಿಯನ್ನು ಕೊಡಬೇಕು. MPಯವರಿಗೆ ಏನು ಕಾರನ್ನು ಕೊಡುತ್ತಾರೆ, ತಮ್ಮ ಕೈಯಲ್ಲಿ ಆದರೆ ಅದೇ ರೀತಿ ಒಂದು ವಾಹನವನ್ನು ಕೊಟ್ಟರೆ ನಮಗೆ ಬಹಳ ಒಳ್ಳೆಯದಾಗುತ್ತದೆ. ನಾವೂ ಬಹಳ ದೂರದಿಂದ ಬರುತ್ತೇವೆ, TA-DA ಅದನ್ನೂ ಕೂಡ ಜಾಸ್ತಿ ಮಾಡಿದರೆ ಅನುಕೂಲವಾಗುತ್ತದೆಂದು ಹೇಳಿ ನನಗೆ ಮಾತನಾಡುವುದಕ್ಕೆ ಅವಕಾಶ ಕೊಟ್ಟ ತಮಗೆ ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

ಶ್ರೀ ಬಿ.ಸಿ. ಪಾಟೀಲ್ (ಹಿರೇಕೆರೂರು): ಸನ್ಮಾನ್ಯ ಅಧ್ಯಕ್ಷರೆ, 2008–09ನೇ ಸಾಲಿನ ಆಯವ್ಯಯದ ಮೇಲೆ ಚರ್ಚೆಯಲ್ಲಿ ಭಾಗವಹಿಸುವುದಕ್ಕೆ ಅವಕಾಶ ಮಾಡಿಕೊಟ್ಟಿದ್ದಕ್ಕಾಗಿ ಮೊದಲನೆಯದಾಗಿ ನಾನು ತಮಗೆ ಅಭಿನಂದಿಸುತ್ತೇನೆ. ಮನೆಗೆ ಹಿರಿ ಮಗ ಆಗಿ ಹುಟ್ಟಬಾರದಂತೆ, ಭಾಷಣದಲ್ಲಿ ಕೊನೆ ಭಾಷಣಕಾರ ಆಗಬಾರದು ಎಂದು ಹೇಳುತ್ತಾರೆ. ಹಾಗೆ ಈ ಆಯವ್ಯಯದ ಮೇಲೆ ಚರ್ಚೆ ಮಾಡುವ

ಸಂದರ್ಭದಲ್ಲಿ ಕೊನೇ ದಿವಸ ನಮಗೆ ಏನು ಅವಕಾಶ ಕೊಟ್ಟಿದ್ದೀರಿ, ಇಲ್ಲಿ ಪರಿಸ್ಥಿತಿ ಏನಾಗಿದೆ ಎಂದರೆ ನಾವು ಯಾವ್ಯಾವ ವಿಷಯಗಳ ಬಗ್ಗೆ ಚರ್ಚೆ ಮಾಡಬೇಕು ಎಂದು ವಿಷಯಗಳನ್ನು ಸಂಗ್ರಹ ಮಾಡಿ ಇಟ್ಟುಕೊಂಡಿದ್ದೆವು, ಆ ವಿಷಯಗಳನ್ನು ಈಗಾಗಲೇ ಮಾತನಾಡಿದಂತಹ ಸದಸ್ಯರು ಹೇಳಿದ್ದಾರೆ. ಇವತ್ತು 2008–09ನೇ ಸಾಲಿನ ಆಯವ್ಯಯವನ್ನು ಮಾನ್ಯ ಮುಖ್ಯಮಂತ್ರಿಗಳು ಮಂಡಿಸಿದ್ದಾರೆ. ಇವತ್ತು ತಾವು ಕೊಟ್ಟಂತಹ ಪ್ರಣಾಳಿಕೆ ಏನಿದೆ, ಎಂಟು ಹತ್ತು ವಿಷಯಗಳನ್ನು ಬಿಟ್ಟು ಪ್ರಣಾಳಿಕೆಯಲ್ಲಿ ಇರುವಂತಹ ವಿಷಯಗಳೆಲ್ಲಾ ಬಜೆಟ್ ಪುಸ್ತಕದಲ್ಲಿ ಬಂದಿವೆ.

ಒಬ್ಬರು ಮಾನ್ಯ ಸದಸ್ಯರು: ಉತ್ತರ ನಾಳೆ ಕೊಡಿ, ಬಜೆಟ್ ಮೇಲೆ ಮಾತನಾಡುವುದಕ್ಕೆ ಅವಕಾಶ ಮಾಡಿಕೊಡಿ. ಸದನವನ್ನು ರಾತ್ರಿಯವರೆಗೆ ನಡೆಸಿ ಯಾರು ಬೇಡ ಎಂದವರು? ಏಕೆ ಇಷ್ಟೊಂದು ತರಾತುರಿ?

ಅಧ್ಯಕ್ಷರು: ಇಲ್ಲ, ಬೇಡ ರೂಲಿಂಗ್ ಪಾರ್ಟಿಯವರು 4–5 ಜನ ಮಾತನಾಡುವುದಕ್ಕೆ ರೆಡಿಯಿದ್ದರು, ನಾನು ಎಲ್ಲರಿಗೂ ಅವಕಾಶ ಕೊಡಲಿಲ್ಲ. ಮಾನ್ಯ ಸಿದ್ದರಾಮಯ್ಯನವರೇ, ಮಾನ್ಯ ವಿರೋಧ ಪಕ್ಷದ ನಾಯಕರು ಬೆಳಿಗ್ಗೆ ನನ್ನ ಛೇಂಬರಿಗೆ ಬಂದಾಗ ಏನು understanding ಆಗಿತ್ತು ಎಂದರೆ ನಾಲ್ಕು ಜನರಿಗೆ ಮಾತ್ರ ಮಾತನಾಡುವುದಕ್ಕೆ ಅವಕಾಶ ಕೊಡುತ್ತೇನೆಂದು ಹೇಳಿದ್ದೆ, ಅವರು ಒಪ್ಪಿಕೊಂಡಿದ್ದರು.

ಶ್ರೀ ಸಿದ್ದರಾಮಯ್ಯ: ಐದೈದು ನಿಮಿಷದಂತೆ ಎರಡು ಗಂಟೆಯವರಿಗೆ ಮಾತ್ರ ಅವಕಾಶ ಕೊಡಿ.

ಅಧ್ಯಕ್ಷರು: ಇಲ್ಲ, ನಾನು 12.30ಕ್ಕೆ reply ಪ್ರಾರಂಭ ಮಾಡಬೇಕೆಂದು fix ಮಾಡಿದೆ. ಬೆಳಿಗ್ಗೆ understanding ಆದ ಪ್ರಕಾರ ನಡೆದುಕೊಳ್ಳಬೇಕು. ಬೆಳಿಗ್ಗೆ understanding ಏನಾಗಿತ್ತು? ನಾಲ್ಕು ಜನರಿಗೆ ಅವಕಾಶ ಕೊಡುತ್ತೇನೆಂದು ಹೇಳಿದ್ದೆ, ಮಾನ್ಯ ವಿರೋಧ ಪಕ್ಷದ ನಾಯಕರನ್ನು ಕರೆದು ಕೇಳಿ.

ನಾಲ್ಕು ಜನರಿಗೆ ಬೆಳಿಗ್ಗೆ ಅವಕಾಶವನ್ನು ಕೊಡುತ್ತೇವೆಂದು ಹೇಳಿದ್ದೆವು. ಈ ರೀತಿ ಮಾಡಿದರೆ ಒಳ್ಳೆಯದಾಗುವುದಿಲ್ಲ. ನಾವು ಬೆಳಗ್ಗೆ reply start ಮಾಡಬೇಕಾಗಿತ್ತು. ಆದರೆ ನಾಲ್ಕು ಜನ ಮಾತನಾಡುತ್ತೇವೆ ಎಂದು ಹೇಳಿದ್ದರು, ಅದಕ್ಕೆ ನಾನು ಅವಕಾಶ ಕೊಟ್ಟಿದ್ದೇನೆ. ಆ ರೀತಿಯಲ್ಲಿ ನಾಲ್ಕೈದು ಜನರು ಮಾತನಾಡಿದ್ದಾರೆ. ಈಗ ಕೊನೆಯದಾಗಿ ಮಾನ್ಯ ಬಿ.ಸಿ.ಪಾಟೀಲ್‌ರವರು ಒಂದು ಹತ್ತು ನಿಮಿಷ ಮಾತನಾಡಬೇಕು.

ಶ್ರೀ ಹೆಚ್.ಸಿ. ಬಾಲಕೃಷ್ಣ: ಮಾನ್ಯ ಅಧ್ಯಕ್ಷರೆ, ನಮ್ಮಲ್ಲಿ ಒಬ್ಬರೇ ಮಾತನಾಡಿರುವುದು. ದಯಮಾಡಿ ಇನ್ನು ಇಬ್ಬರಿಗೆ ಐದೈದು ನಿಮಿಷ ಮಾತನಾಡಲು ಅವಕಾಶ ಕೊಡಿ. ನೀವೇ ನಮ್ಮ ನೆರವಿಗೆ ಬರದಿದ್ದರೆ ಹೇಗೆ?

ಅಧ್ಯಕ್ಷರು:ಆಗುವುದಿಲ್ಲ,ನಾನುಇಲ್ಲಿಗೆcloseಮಾಡಿಬಿಡುತ್ತೇನೆ.ಈಗ 1.00ಗಂಟೆಯಾಗಿದೆ, ಮುಕ್ತಾಯ ಮಾಡುತ್ತೇನೆ.

ಶ್ರೀ ಕೆ.ಎಂ. ಕೃಷ್ಣಮೂರ್ತಿ: ಮಾನ್ಯ ಅಧ್ಯಕ್ಷರೆ, ನಾಳೆಯವರೆಗೂ ಸಮಯ ಇದೆ.

ಅಧ್ಯಕ್ಷರು: ಇಲ್ಲ, ಆಗಲ್ಲ, ನಾವು time fix ಮಾಡಿರುತ್ತೇವೆ, B.A.C. meetingನಲ್ಲಿ proceedings ಆಗಿರುತ್ತದೆ. ಅದರ ಪ್ರಕಾರವೇ ನಡೆಯಬೇಕಾಗುತ್ತದೆ. ಏನು ನಿಯಮಾವಳಿಗಳಿರುತ್ತವೆ ಅದರ ಪ್ರಕಾರ ನಡೆಯಬೇಕಾಗುತ್ತದೆ. ನೀವು ನಾಳೆ ಎಂದರೆ, ನಾಳೆ ಸಾಯಂಕಾಲದವರೆಗೂ ನಡೆಸಿ ಎನ್ನುವವರು.

ಶ್ರೀ ಹೆಚ್.ಸಿ. ಬಾಲಕೃಷ್ಣ: ಮಾನ್ಯ ಅಧ್ಯಕ್ಷರೆ, ಐದು ನಿಮಿಷ ಕೊಡಿ, ಅವರವರ ಭಾವನೆಗಳನ್ನು ವ್ಯಕ್ತಪಡಿಸುವುದಕ್ಕೆ ಅವಕಾಶವನ್ನು ಕೊಡಲಿಲ್ಲವೆಂದರೆ ಇದರಲ್ಲಿ ಅರ್ಥವೇನು?

ಅಧ್ಯಕ್ಷರು: ಇಲ್ಲ ಆಗುವುದಿಲ್ಲ ಯಾರೂ ಒತ್ತಾಯ ಮಾಡಬೇಡಿ. ನಾಳೆ ನೀವು ಪೂರ್ತಿ ದಿವಸ ಚರ್ಚೆ ಮಾಡಿ. ಈಗ ತಾವು ಏನಾದರೂ ಕೇಳುವುದಿದ್ದರೆ reply ಆದ ಮೇಲೆ ಸ್ಪಷ್ಟೀಕರಣ ಕೇಳುವುದಕ್ಕೆ ನಿಮಗೆ ಅವಕಾಶ ಕೊಡುತ್ತೇನೆ. ಈಗ ಮಾನ್ಯ ಬಿ.ಸಿ. ಪಾಟೀಲ್‌ರವರೆ, ನೀವು ನಿಮ್ಮ ಭಾಷಣವನ್ನು ಪ್ರಾರಂಭಿಸಿ, ನೀವೇ ಕಡೆಯವರು, ನೀವು ಪ್ರಾರಂಭ ಮಾಡಿ. ಈಗ time ಮುಗಿಯಿತು. ಮಾನ್ಯ ಶರಣ ಪ್ರಕಾಶ್ ರುದ್ರಪ್ಪ ಪಾಟೀಲ್‌ರವರೇ ತಾವು ಬೇರೆ ಬೇರೆ ವಿಷಯಗಳಲ್ಲಿ ಸಾಕಷ್ಟು ಮಾತನಾಡುತ್ತೀರಿ, ಸಾಕು.

ಶ್ರೀ ಬಿ. ರಮಾನಾಥ ರೈ: ಮಾನ್ಯ ಗೋಪಾಲ ಭಂಡಾರಿಯವರಿಗೆ ಮಾತನಾಡುವುದಕ್ಕೆ ಅವಕಾಶ ಕೊಡಿ.

ಅಧ್ಯಕ್ಷರು: ಆಗುವುದಿಲ್ಲ. ಒಬ್ಬೊಬ್ಬರು ಮೂರು ನಾಲ್ಕು ತಾಸು ಮಾತನಾಡಿದರೆ ಹೇಗೆ ಅವಕಾಶ ಕೊಡುವುದಕ್ಕೆ ಆಗುತ್ತದೆ? ಒಬ್ಬಬ್ಬರೂ ಮೂರು ಮೂರು ತಾಸು ಮಾತನಾಡಿದ್ದಾರೆ. ಏನು ಮಾಡುವುದಕ್ಕಾಗುತ್ತದೆ? ಎಲ್ಲರೂ ಹತ್ತು ನಿಮಿಷ ಮಾತನಾಡಿದರೆ ಆಗುತ್ತದೆ. ಈಗ ಜೆ.ಡಿ.(ಎಸ್) ನವರಿಗೆ ಎಷ್ಟು time ಕೊಟ್ಟಿದ್ದೆವು? ಆ time fix ಮಾಡಿದ್ದನ್ನುನೋಡಿದರೆ,ಅವರುಬಹಳಷ್ಟು ಮಾತನಾಡಿದ್ದಾರೆ.

ಶ್ರೀ ಬಿ. ರಮಾನಾಥ ರೈ: ಮಾನ್ಯ ಗೋಪಾಲಭಂಡಾರಿಯವರು ಹೊಸಬರು, ಅವರಿಗೆ ಅವಕಾಶ ಕೊಡಿ.

ಅಧ್ಯಕ್ಷರು: ಅದು ನಿಮಗೆ ಬಿಟ್ಟಿದ್ದು, ನಾನುreply start ಮಾಡುತ್ತೇನೆ.

ಶ್ರೀ ಹೆಚ್.ಸಿ. ಬಾಲಕೃಷ್ಣ: ಅವರಿಗೆ ಐದು ನಿಮಿಷ ಅವಕಾಶ ಕೊಡಿ.

ಅಧ್ಯಕ್ಷರು: ನಾಳೆ ಅವಕಾಶ ಕೊಡುತ್ತೇನೆ, ನಾಳೆ ಶೂನ್ಯ ವೇಳೆಯಲ್ಲಿ ಅವರಿಗೆ ಅವಕಾಶ ಕೊಡುತ್ತೇನೆ, ಈಗ ಆಗುವುದಿಲ್ಲ. ಮಾನ್ಯ ಪಾಟೀಲರೇ, ನೀವು ಪ್ರಾರಂಭ ಮಾಡಿ.

ಶ್ರೀ ಬಿ.ಸಿ.ಪಾಟೀಲ್ (ಹಿರೇಕೆರೂರು): ಮಾನ್ಯ ಅಧ್ಯಕ್ಷರೆ, ಇವತ್ತು ಬಜೆಟ್‌ನಲ್ಲಿ ಹೇಳಿರುವಂಥ ವಿಷಯಗಳು ಏನಿವೆ...

ಒಬ್ಬ ಮಾನ್ಯ ಸದಸ್ಯರು: ಮಾನ್ಯ ಅಧ್ಯಕ್ಷರೆ, ತಾವು ದಯಪಿಟ್ಟು ಹೆಚ್ಚು ಮಾತನಾಡುವಂಥಾದ್ದಕ್ಕೆ ಕಡಿವಾಣ ಹಾಕಿ, ಪದೇ ಪದೇ ಅವರೇ ಮಾತನಾಡುತ್ತಿರುತ್ತಾರೆ. ನಮಗೆ ಅವಕಾಶ ಸಿಗುವುದಿಲ್ಲ.

ಅಧ್ಯಕ್ಷರು: ನಾನು ಕಡಿವಾಣ ಹಾಕಿದ್ದೇನೆ. ಯಾರು Senior Leaders ಇರುತ್ತಾರೆ, ಅವರು ನಿಯಂತ್ರಣ ಹಾಕಿಕೊಳ್ಳಬೇಕು. ನಾನು controlಮಾಡುತ್ತಿದ್ದೇನೆ. ಬರುವ ದಿವಸಗಳಲ್ಲಿ ನಾನು definite ಆಗಿ ಇನ್ನೂ control ಮಾಡುತ್ತೇನೆ. ನಾನು ಹೊಸಬರಿಗೆ ಹೆಚ್ಚು ಅವಕಾಶ ಕೊಡಬೇಕೆಂದಿದ್ದೇನೆ. ಮುಂದಿನ ದಿವಸಗಳಲ್ಲಿ ಕಡಿವಾಣ ಹಾಕೋಣ. ಇನ್ನೂ ಮುಂದೆ ಬಹಳ ದಿವಸ ಅಧಿವೇಶನಗಳು ನಡೆಯುವಂಥದ್ದು ಇದೆ. ಆಗ ಕಡಿವಾಣ ಹಾಕೋಣ. ನಿಮ್ಮ ಸಲಹೆಯನ್ನು ನಾನು ಒಪ್ಪಿಕೊಳ್ಳುತ್ತೇನೆ.

ಶ್ರೀ ಬಿ. ರಮಾನಾಥ ರೈ: ಈಗ ಹೊಸದಾಗಿ ಆಯ್ಕೆಯಾಗಿ ಬಂದಿರುವವರು ಒಳ್ಳೆಯ ಮಾತುಗಳನ್ನು ಆಡುವವರಿದ್ದಾರೆ.

ಅಧ್ಯಕ್ಷರು: ಅವರು 90 ಜನ ಇದ್ದಾರೆ. ಇದೇ ರೀತಿ dicussion ಆದರೆ ನಾನು reply start ಮಾಡುತ್ತೇನೆ. ಒಬ್ಬೊಬ್ಬರೂ ಒಬ್ಬೊಬ್ಬರನ್ನು, recommendation ಮಾಡುತ್ತಾರೆ. ಅದಕ್ಕೆ ಕೊನೆಯೇ ಇಲ್ಲ. ಈಗ ಕೊನೆಯದಾಗಿ ಮಾನ್ಯ ಬಿ.ಸಿ. ಪಾಟೀಲ್‌ರವರು ಮಾತನಾಡುತ್ತಾರೆ.

ಶ್ರೀ ಬಿ.ಸಿ. ಪಾಟೀಲ್(ಹಿರೇಕೆರೂರು): ಮಾನ್ಯ ಅಧ್ಯಕ್ಷರೆ, ಇವತ್ತು ಆಯವ್ಯಯದಲ್ಲಿ ಕೊಟ್ಟಿರುವಂತಹ ಅಂಕಿ ಅಂಶಗಳು ಏನಿವೆ, ಅವನ್ನು ಸರ್ಕಾರ ಜಾರಿಗೆ ತರುತ್ತದೆಯೇ, ಅನುಷ್ಠಾನಗೊಳಿಸುತ್ತದೆಯೇ? ಎಂಬುದು ಒಂದು ದೊಡ್ಡ ಪ್ರಶ್ನೆಯಾಗಿದೆ, ಏಕೆಂದರೆ, ಇವತ್ತು ತಾವು ಯಾವ ಮಾತುಗಳನ್ನು ಹೇಳಿ ಅಧಿಕಾರಕ್ಕೆ ಬಂದಿದ್ದೀರಿ, ಆ ರೀತಿ ಯಾವ ಮಾತುಗಳಿಗೂ ಬದ್ಧರಾಗಿ ತಾವು ನಡೆದುಕೊಂಡಿಲ್ಲ.

ಮೊದಲನೆಯದಾಗಿ ಹೇಳುವುದಾದರೆ, ನಮ್ಮ ಮಾನ್ಯ ಮುಖ್ಯಮಂತ್ರಿಯವರು ರೈತರ ಹೆಸರಿನ ಮೇಲೆ ಪ್ರಮಾಣ ವಚನವನ್ನು ಸ್ವೀಕಾರ ಮಾಡಿ, ಹತ್ತು ದಿವಸಗಳೊಳಗೆ, ಆ ಹಸಿರು ಶಾಲನ್ನು ರೈತರ ಮೇಲೆ ಗೋಲಿಬಾರ್ ಮಾಡುವುದರ ಮೂಲಕ ರೈತರ ರಕ್ತದಲ್ಲಿ ಅದನ್ನು ಅದ್ದಿ ಮಸುಕನ್ನಾಗಿಸಿದ್ದಾರೆ. ಆದುದರಿಂದ ನಮಗೆ ಅನುಮಾನವಿದೆ, ಈ ಬಜೆಟ್‌ನಲ್ಲಿ ಕೊಟ್ಟಿರುವಂಥ...

ಶ್ರೀ ನೆಹರು ಓಲೇಕಾರ್ : ಮಾನ್ಯ ಅಧ್ಯಕ್ಷರೆ, ಅವರಿಗೆ ಬಜೆಟ್ ಮೇಲೆ ಮಾತನಾಡುವುದಕ್ಕೆ ಹೇಳಿ. ಬಜೆಟ್ ಮೇಲೆ ಮಾತನಾಡುವಾಗ ಅದನ್ನು ಬಿಟ್ಟು ಬೇರೆ ಏನೇನೋ ಮಾತನಾಡುವುದು ಬೇಡ. ಗೋಲಿಬಾರ್, ಅದೂ ಇದೂ ಮಾತನಾಡಿ ಕಾಲಹರಣ ಮಾಡುವ ಅವಶ್ಯಕತೆ ಇಲ್ಲ.

ಅಧ್ಯಕ್ಷರು: ನೆಹರು ಓಲೇಕಾರ್ ರವರೇ, ಈಗಾಗಲೇ ಸಮಯವಾಗಿದೆ, ತಾವು ಕುಳಿತುಕೊಳ್ಳಿ. ಸರ್ಕಾರ ಉತ್ತರ ಕೊಡುವಾಗ ಕೊಡುತ್ತದೆ.

ಶ್ರೀ ಬಿ.ಸಿ. ಪಾಟೀಲ್: ನಾನು yield ಆಗಿಲ್ಲ. ತಾವು ದಯಮಾಡಿ ಕುಳಿತುಕೊಳ್ಳಬೇಕು.

ಶ್ರೀ ನೆಹರ್ ಓಲೇಕಾರ್: ನೀವು ಸುಮ್ಮನೆ ಕುಳಿತುಕೊಳ್ಳಿ.

ಅಧ್ಯಕ್ಷರು: ನೆಹರು ಓಲೇಕಾರ್‌ರವರೇ please ಕುಳಿತುಕೊಳ್ಳಿ..

ಶ್ರೀ ನೆಹರು ಓಲೇಕಾರ್: ಮಾನ್ಯ ಅಧ್ಯಕ್ಷರೆ, ಅವರಿಗೆ ಬಜೆಟ್ ಮೇಲೆ ಮಾತನಾಡುವುದಕ್ಕೆ ಹೇಳಿ.

ಶ್ರೀ ಬಿ.ಸಿ. ಪಾಟೀಲ್: ನಾನು ಬಜೆಟ್ ಮೇಲೆಯೇ ಮಾತನಾಡುತ್ತಿದ್ದೇನೆ.

ಅಧ್ಯಕ್ಷರು: ನೆಹರು ಓಲೇಕಾರ್‌ರವರೇ, please ಕುಳಿತುಕೊಳ್ಳಿ. ಅವರು ಏನು ಮಾತನಾಡುತ್ತಾರೋ ಮಾತನಾಡಲಿ. ಅದಕ್ಕೆ ಸರ್ಕಾರ ಉತ್ತರ ಕೊಡುವುದಕ್ಕಿದೆ, ಸಚಿವರಿದ್ದಾರೆ, ಮುಖ್ಯಮಂತ್ರಿಯವರು ಇದ್ದಾರೆ, ತಾವು ಕುಳಿತುಕೊಳ್ಳಿ..

ಶ್ರೀ ಬಿ. ರಮಾನಾಥ ರೈ: ಹಳೆಯ ಕಡತಗಳನ್ನು ತೆಗೆಸಿ ನೋಡಿ. ನಿಮ್ಮ ಸಭಾನಾಯಕರು ಆಗ ಏನೆಲ್ಲಾ ಮಾತನಾಡಿದ್ದಾರೆ ಎಂದು ನೋಡಿ. ಅವರು ಏನೇನು ಮಾತನಾಡಿದ್ದಾರೆ ಎಂಬುದು ಕಡತವನ್ನು ತೆಗೆದು ನೋಡಿ.

ಅಧ್ಯಕ್ಷರು: ಮಾನ್ಯ ರಮಾನಾಥ ರೈರವರೇ, ತಾವು please ಕುಳಿತುಕೊಳ್ಳಿ. ನೀವು ನೀವೇ ಪರಸ್ಪರ ಮಾತನಾಡುವ ಹಾಗಿಲ್ಲ. ನನ್ನ permission ತೆಗೆದುಕೊಂಡು ಮಾತನಾಡಬೇಕು.

ಶ್ರೀ ಬಿ.ಸಿ. ಪಾಟೀಲ್: ಮಾನ್ಯ ಅಧ್ಯಕ್ಷರೆ, ಈಗಾಗಲೇ ಹಲವಾರು ವಿಷಯಗಳನ್ನು ಮಾನ್ಯ ಸದಸ್ಯರುಗಳು ಮಾತನಾಡಿದ್ದಾರೆ. ಈಗ ಒಂದು ಬಹಳ

ಶ್ಲಾಘನೀಯ ವಿಷಯ ಏನೆಂದರೆ 15 ಲಕ್ಷ ಜನ ರೈತರಿಗೆ ತಾವು ಉಚಿತವಾಗಿ ವಿದ್ಯುತ್ ಏನು ಕೊಡುತ್ತೇವೆಂದು ಹೇಳಿದ್ದೀರಿ ಅದು ಸ್ವಾಗತಾರ್ಹ. ತಾವು ಬಜೆಟ್‌ನ್ನು ಮಂಡನೆ ಮಾಡಿದ ದಿವಸ ನಮಗೆ ಆ ಬಗ್ಗೆ ಅನುಮಾನವಿತ್ತು. ಏಕೆಂದರೆ ಹೊಳೆಗಳಲ್ಲಿ ಮತ್ತು ಡ್ಯಾಂಗಳಲ್ಲಿ ನೀರು ಇರಲಿಲ್ಲ. ಆದರೆ ಇವತ್ತಿನ ಪರಿಸ್ಥಿತಿಯಲ್ಲಿ ಕೊಡಬಹುದೆಂಬ ಭರವಸೆ ಇದೆ. ಆದರೆ ಇದಕ್ಕಾಗಿ 750 ಕೋಟಿ ರೂಪಾಯಿಗಳ ಮೀಟರ್‌ಗಳನ್ನು ಅಳವಡಿಸುತ್ತೇವೆಂದು ಏನು ಹೇಳಿದ್ದೀರಿ, ಅದು ಸೂಕ್ತವಲ್ಲವೆಂದು ನಾನು ಹೇಳುತ್ತೇನೆ.

ಏಕೆಂದರೆ, ಹಿಂದೆ ಒಬ್ಬ ಮಂತ್ರಿಯವರು ಮೀಟರ್‌ನ್ನು ಅಳವಡಿಸುತ್ತೇವೆಂದು ಹೇಳಿ ಸರ್ಕಾರದ ಕೋಟ್ಯಾಂತರ ರೂಪಾಯಿಗಳನ್ನು ಖರ್ಚು ಮಾಡಿ ಇವತ್ತು ಸಹಿತ ಆ ಮೀಟರ್‌ಗಳನ್ನು ಅಳವಡಿಸುವುದಕ್ಕೆ ಸಾಧ್ಯವಾಗಿಲ್ಲ. ಇವತ್ತು ರೈತರ ಕೃಷಿ ಪಂಪ್‌ಸೆಟ್‌ಗಳಿಂದ ಮೀಟರ್‌ಗಳನ್ನು ಬಿಸಾಡಿದ್ದಾರೆ. ಏಕೆಂದರೆ, ರೈತರು ಯಾವ ಕಾರಣಕ್ಕೂ ಮೀಟರ್‌ನ್ನು ಅಳವಡಿಸುವುದಕ್ಕೆ ಬಿಡುವುದಿಲ್ಲ. ಆದುದರಿಂದ ಅಲ್ಲಿ ರೈತರಿಗೆ ಕೊಟ್ಟಿರುವಂಥ power ಏನಿದೆ ಅದನ್ನು gauge ಮಾಡುವುದಕ್ಕೆ ಮೀಟರ್‌ನ್ನು ಹಾಕುವಂತಹ ಅವಶ್ಯಕತೆ ಇಲ್ಲ. ನಿಮಗೆ ಆ power ಅನ್ನು ಅಳತೆ ಮಾಡಬೇಕೆಂಬ ಅವಶ್ಯಕತೆ ಇದ್ದರೆ ಅಲ್ಲಿ ಎಷ್ಟೆಷ್ಟು TC ಗಳು ಇದ್ದಾವೆ, ಆ TC ಗೆ ಬೇಕಾದರೆ ಒಂದು ಮೀಟರ್‌ನ್ನು ಹಾಕಿಕೊಳ್ಳಿ. ಆದರೆ ರೈತರ ಹೊಲಕ್ಕೆ ಹೋಗಿ ಮೀಟರ್‌ನ್ನು ಅಳವಡಿಸುವುದೆಂದರೆ, ಇದು ಯಾವುದೋ ಒಂದು ರೀತಿಯ ಸಂಶಯಕ್ಕೆ ಎಡೆ ಮಾಡಿಕೊಡುತ್ತದೆ. ಅದುದರಿಂದ ಆ ಮೀಟರ್‌ನ್ನು ಅಳವಡಿಕೆ ಮಾಡುವುದನ್ನು ಬಿಡಬೇಕೆಂದು ನಾನು ತಮ್ಮಲ್ಲಿ ಕೇಳಿಕೊಳ್ಳುತ್ತೇನೆ.

ಎರಡನೆಯದಾಗಿ, ಇವತ್ತಿನ ದಿವಸ ಸರ್ಕಾರಿ ನೌಕರರ ನಿವೃತ್ತಿ ವಯೋಮಿತಿಯನ್ನು 58 ರಿಂದ 60 ವರ್ಷಕ್ಕೆ ಏರಿಸಿದ್ದಾರೆ. ಕರ್ನಾಟಕ ರಾಜ್ಯದಲ್ಲಿ 5 ಲಕ್ಷ 25 ಸಾವಿರ ಸರ್ಕಾರಿ ನೌಕರರು ಇದ್ದಾರೆ. ಪ್ರತಿ ವರ್ಷ 12 ಸಾವಿರ ನೌಕರರು ನಿವೃತ್ತಿಯಾಗಬೇಕಾಗಿತ್ತು. ಆದರೆ ಇವತ್ತು ಯಾವ ತಂದೆ ತಾಯಿಗಳು ನನ್ನ ಮಗ ಈ ವರ್ಷ ನೌಕರಿಗೆ ಅರ್ಜಿ ಹಾಕುತ್ತಾನೆ, ಇಲ್ಲಿ ನನ್ನ ಮಗನಿಗೆ ನೌಕರಿ ಸಿಗುತ್ತದೆಯೋ, ವಯಸ್ಸು ಮೀರಿ ಹೋಗುತ್ತದೆಯೋ ಎಂದು ಕಾಯುತ್ತಾ ಕುಳಿತುಕೊಂಡಿದ್ದರು. ಅಂತಹ 12 ಸಾವಿರ ಜನ ಯುವಕರು ಇವತ್ತು ಉದ್ಯೋಗವನ್ನು ಪಡಯುವುದರಲ್ಲಿ ವಂಚಿತರಾಗುತ್ತಿದ್ದಾರೆ. ಅದೇ ರೀತಿಯಲ್ಲಿ ಎರಡು ವರ್ಷಗಳ ಕಾಲ ಯಾವುದೇ ರೀತಿಯ appointment ಆಗದೇ ಇರುವುದರಿಂದ 24 ಸಾವಿರ ಯುವಕರಿಗೆ ಇದರಿಂದ ಅನ್ಯಾಯವಾಗುತ್ತಿದೆ. ಇವತ್ತು ಈ ವಯಸ್ಸಾದವರಲ್ಲಿ ದಕ್ಷತೆ ಇರುತ್ತದೆ ಎಂದು ಮುಖ್ಯ ಮಂತ್ರಿಯವರು ಹೇಳಿದ್ದಾರೆ. ಇವತ್ತು ಅವರನ್ನು

ಇಟ್ಟುಕೊಳ್ಳುವುದರಿಂದ ಅವರಿಗೆ ಏನು ವೇತನ ಶ್ರೇಣಿ ಇರುತ್ತದೆ, ಅದರ highest point reach ಆಗಿರುತ್ತಾರೆ. ಇವತ್ತು ಅವರಿಗೆ ಎರಡು ವರ್ಷ ಜಾಸ್ತಿ ಮಾಡುವುದರಿಂದ ಹೆಚ್ಚಿನ ಹೊರೆ ಸರ್ಕಾರದ ಮೇಲೆ ಬೀಳುತ್ತದೆ. ಆದರೆ, ಅದೇ ಹಣದಲ್ಲಿ ಇನ್ನೂ ನಾಲ್ಕು ಜನ ಯುವಕರನ್ನು appointment ಮಾಡಿಕೊಳ್ಳಬಹುದಾಗಿತ್ತು. ಇದರಿಂದ ಯುವಶಕ್ತಿಗೆ ದೊಡ್ಡ ಅನ್ಯಾಯವಾಗಿದೆ. ಇದರ ಬಗ್ಗೆ ಈಗಾಗಲೇ ಗೆಜೆಟ್‌ನ್ನು ಹೊರಡಿಸಿದೆ. ಅಧಿವೇಶನದಲ್ಲಿ ಬಜೆಟ್‌ನಲ್ಲಿ ಮಂಡಿಸಿದಂತಹ ವಿಷಯ, ಬಜೆಟ್ ಮೇಲೆ ಇನ್ನೂ ಚರ್ಚೆ ನಡೆಯುತ್ತಿರುವಂತಹ ಸಂದರ್ಭದಲ್ಲಿ ಅದಕ್ಕೆ ಅನುಮೋದನೆ ಸಿಗುವುದಕ್ಕೆ ಮೊದಲೇ ಇದೇ ಜುಲೈ ಒಂದನೇ ತಾರೀಖಿನಿಂದ ಜಾರಿಗೆ ಬರುತ್ತದೆಂದು ಗೆಜೆಟ್‌ನಲ್ಲಿ ಈಗಾಗಲೇ ಹೊರಡಿಸಿದ್ದಾರೆ. ಇದು ಬಹಳ ತಪ್ಪಾಗುತ್ತದೆ, ಇದನ್ನು ನಾನು ಖಂಡಿಸುತ್ತೇನೆ.

ಮೂರನೆಯದಾಗಿ, ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಬಗ್ಗೆ ಹೇಳುವುದಾದರೆ ನಾನು ಸರ್ವಜ್ಞ ಹುಟ್ಟಿದಂತಹ ನಾಡಿನಿಂದ ಬಂದಂತಹವನು. ಇವತ್ತು, "ಆಡದೇ ಮಾಡುವವನು ರೂಢಿಯೊಳಗುತ್ತಮನು, ಆಡಿ ಮಾಡುವವನು ಮಧ್ಯಮನು, ಆಡಿಯೂ ಮಾಡದವ ಅಧಮ ತಾನಾದ ಸರ್ವಜ್ಞ" ಎಂದು ಸರ್ವಜ್ಞ ಒಂದು ಮಾತನ್ನು ಹೇಳಿದ್ದಾನೆ. ಹಿಂದೆ ಹಾವೇರಿ ಜಿಲ್ಲಾ ಉತ್ಸವ ನಡೆದಂತಹ ಸಂದರ್ಭದಲ್ಲಿ, ರಾಣಿಬೆನ್ನೂರಿನಲ್ಲಿ ಈಗಿನ ಮಾನ್ಯ ಮುಖ್ಯಮಂತ್ರಿಗಳು ಆವತ್ತು ಉಪ ಮುಖ್ಯಮಂತ್ರಿಗಳಾಗಿದ್ದರು. ಆವತ್ತು ಅವರೊಂದು ಆಶ್ವಾಸನೆಯನ್ನು ಕೊಟ್ಟಿದ್ದರು. ಸರ್ವಜ್ಞನ ಪ್ರಾಧಿಕಾರವನ್ನು ರಚನೆ ಮಾಡುತ್ತೇನೆ. ಇದಕ್ಕೋಸ್ಕರ ಬಜೆಟ್‌ನಲ್ಲಿ ಹಣವನ್ನು ಇಡುತ್ತೇನೆಂದು ಹೇಳಿ ಸನ್ಮಾನ್ಯ ಯಡಿಯೂರಪ್ಪನವರು ಕಳೆದ ವರ್ಷ ಹೇಳಿದ್ದರು. ಆದರೆ ಕಳೆದ ವರ್ಷ ಬಜೆಟ್‌ನಲ್ಲಿ ಸರ್ವಜ್ಞನ ಬಗ್ಗೆ ಯಾವುದೇ ಹಣವನ್ನು ಇಡಲಿಲ್ಲ. ಈ ವರ್ಷ ಬಸವಕಲ್ಯಾಣಕ್ಕೆ ಹಣ ಇಟ್ಟಿದ್ದೀರಿ, ಕಾಗಿನೆಲೆಗೆ ಹಣ ಇಟ್ಟಿದ್ದೀರಿ, ಬಂಜಾರ ಸಮುದಾಯ, ಪೂರ್ಣಚಂದ್ರ ತೇಜಸ್ವಿ ಮತ್ತು ಬಸವಣ್ಣನವರ ಬಗ್ಗೆ, ಎಲ್ಲದಕ್ಕೂ ಹಣ ಇಟ್ಟಿದ್ದೀರಿ. ಬಹಳ ಸಂತೋಷವಾಗಿದೆ. ಆದರೆ ಈ ವರ್ಷ ಕೂಡ ಸರ್ವಜ್ಞನನ್ನು ಮಾತ್ರ ಬಿಟ್ಟು ಬಿಟ್ಟಿದ್ದೀರಿ. ಸರ್ವಜ್ಞನ ತ್ರಿಪದಿಗಳೇನು ಇವೆ, ಎಲ್ಲರೂ ಕೇವಲ ಇವತ್ತು ವಚನಕ್ಕಾಗಿ ಬಳಸಿಕೊಳ್ಳುವಂತಹ ತ್ರಿಪದಿಗಳಾಗಿವೆ. ಸರ್ವಜ್ಞನ ಬಗ್ಗೆ ಯಾರೂ ಕಾಳಜಿಯನ್ನು ವಹಿಸುತ್ತಿಲ್ಲ. ಏಕೆ? ಸರ್ವಜ್ಞ ಏನಾದರೂ ಅಸ್ಪೃಶ್ಯನಾಗಿದ್ದಾನೆಯೇ? ಕಳೆದ ವರ್ಷ ಕೂಡ ಈ ಕಡೆಯಿಂದ ಎಲ್ಲರನ್ನೂ touch ಮಾಡಿಕೊಂಡು ಬೆಳಗಾವಿಯವರೆಗೂ ಉಪ ಮುಖ್ಯಮಂತ್ರಿಗಳು ಬಂದರು. ಈ ವರ್ಷ ಆ ಕಡೆಯಿಂದ ಬಂದಿರಿ. ಆದರೆ, ಪ್ರತಿ ವರ್ಷ ಸರ್ವಜ್ಞನನ್ನು ಏಕೆ ಕಡೆಗಾಣಿಸುತ್ತಿದ್ದೀರಿ? ಬಹುಶಃ ಸರ್ವಜ್ಞ ಹಿರೇಕೆರೂರಿನಲ್ಲಿ ಹುಟ್ಟಿದ ಎಂದೋ,

ಅಥವಾ ಬಿ.ಸಿ.ಪಾಟೀಲ್ ಕಾಂಗ್ರೆಸ್‌ನವರು ಎಂದು ಹೇಳಿ ಸರ್ವಜ್ಞನನ್ನು ಕಡೆಗಾಣಿಸುತ್ತಿದ್ದೀರೋ ಎಂದು ನನಗೆ ಗೊತ್ತಾಗುತ್ತಿಲ್ಲ. ದಯಮಾಡಿ, ಇವತ್ತು ಸರ್ವಜ್ಞನ ಬಗ್ಗೆ ಪ್ರಾಧಿಕಾರವನ್ನು ರಚನೆ ಮಾಡಬೇಕು, ಸರ್ವಜ್ಞ ಅಧ್ಯಯನ ಪೀಠವನ್ನು ಮಾಡಬೇಕೆಂದು ಈ ಮೂಲಕ ನಾನು ಮಾನ್ಯ ಮುಖ್ಯ ಮಂತ್ರಿಗಳನ್ನು ಒತ್ತಾಯಿಸುತ್ತಿದ್ದೇನೆ.

ಇನ್ನೊಂದು, ಪ್ರಾದೇಶಿಕ ಅಸಮತೋಲನದ ಬಗ್ಗೆ ಡಾ.ಡಿ.ಎಂ. ನಂಜುಂಡಪ್ಪನವರು ಏನು ವರದಿಯನ್ನು ಕೊಟ್ಟಿದ್ದಾರೆ, ಇವತ್ತು ಆ ವರದಿ ಒಂದು ಬೈಬಲ್ ಆಗಿದೆ. ಡಾ. ಡಿ.ಎಂ. ನಂಜುಂಡಪ್ಪನವರು ಭಾರತ ದೇಶದ ಆರ್ಥಿಕ ತಜ್ಞರಲ್ಲಿ ಒಬ್ಬರಾಗಿದ್ದಂಥವರು. ಇವತ್ತು ಈ ವರದಿಯನ್ನು ಏನು ಕೊಟ್ಟಿದ್ದಾರೆ, ಆ ವರದಿಯನ್ನು ನಾವೆಲ್ಲರೂ ಇಲ್ಲಿ ಪಠಿಸುತ್ತೇವೆ. ಆದರೆ, ಡಾ. ಡಿ.ಎಂ. ನಂಜುಂಡಪ್ಪನವರ ನೆನಪಿಗೋಸ್ಕರವಾಗಿ ಸರ್ಕಾರ ಈವರೆಗೂ ಯಾವುದೇ ಒಂದು ಕೆಲಸವನ್ನೂ ಕೂಡ ಮಾಡಿಲ್ಲ. ನಂಜುಂಡಪ್ಪನವರ ಹೆಸರಿನಲ್ಲಿ ಒಂದು ಅಧ್ಯಯನ ಪೀಠವನ್ನಾದರೂ ಮಾಡಬಹುದು. ಆ ಒಂದು ಸಲಹೆಯನ್ನು ನಾನು ಮಾನ್ಯ ಮುಖ್ಯಮಂತ್ರಿಗಳಿಗೆ ಕೊಡುತ್ತಾ, ಡಾ. ಡಿ.ಎಂ. ನಂಜುಂಡಪ್ಪ ಅಧ್ಯಯನ ಸಂಸ್ಥೆ ಎಂದು ಹೇಳಿ ಪ್ರಾರಂಭ ಮಾಡಬೇಕೆಂದು ನಾನು ಒತ್ತಾಯಿಸುತ್ತಿದ್ದೇನೆ.

ಇವತ್ತು "ಆಶ್ರಯ" ಮನೆಗಳಿಗೆ ನೀಡತಕ್ಕಂಥ ಹಣವನ್ನು 30 ಸಾವಿರ ರೂಪಾಯಿಗಳಿಂದ 40 ಸಾವಿರ ರೂಪಾಯಿಗಳಿಗೆ ಏರಿಸಿದ್ದೀರಿ, ಇದು ಬಹಳ ಸ್ವಾಗತಾರ್ಹವಾದುದು. ನಾವು ಈ ಕಡೆ ಕುಳಿತವರು, ಆ ಕಡೆ ಕುಳಿತವರು ಎನ್ನುವ ಬೇದಬಾವವನ್ನು ಇಟ್ಟುಕೊಳ್ಳುವುದಿಲ್ಲ. ಹಿಂದಿನ ವರ್ಷ ನಾವು ಆ ಕಡೆ ಕುಳಿತುಕೊಂಡಿದ್ದಾಗ, ಆಶ್ರಯ ಸಮಿತಿಗಳು ಆಗಬೇಕೆಂದು ಒತ್ತಾಯ ಮಾಡಿದ್ದೆವು. ಇವತ್ತೂ ಕೂಡ ಅದನ್ನು ಒತ್ತಾಯ ಮಾಡುತ್ತಿದ್ದೇವೆ. ಏಕೆಂದರೆ, ಪ್ರತಿ 500 ಮತದಾರರಿಗೆ ಒಬ್ಬ ಗ್ರಾಮಪಂಚಾಯಿತಿ ಸದಸ್ಯ ಆಯ್ಕೆಯಾಗುತ್ತಾನೆ. 500 ಮತದಾರರಿಗೆ 4 ಜನ ಸದಸ್ಯರು ಇದ್ದರು ಎಂದರೆ, ಸುಮಾರು 100–125 ಮತಗಳನ್ನು ಪಡೆದಂಥ ಗ್ರಾಮ ಪಂಚಾಯಿತಿ ಸದಸ್ಯ, ತನಗೆ ಯಾರಿಗೆ ಬೇಕೋ ಅವರಿಗೆ ಮನೆಗಳನ್ನು ಕೊಡುತ್ತಾನೆಯೇ ಹೊರತು ನಿಜವಾದ ಕಡುಬಡವರಿಗೆ ಆ ಮನೆಗಳು ಸಿಗುವುದಿಲ್ಲ. ಆ ಯೋಜನೆ ಸರಿಯಾಗಿ ಅನುಷ್ಠಾನಕ್ಕೆ ಬರುವುದಿಲ್ಲ. ಆದ್ದರಿಂದ ಈ ವಿಷಯದಲ್ಲಿ ನಿಷ್ಪಕ್ಷಪಾತವಾಗಿ ನ್ಯಾಯ ದೊರಕಬೇಕೆಂದರೆ, ಶಾಸಕರನ್ನು ಆಶ್ರಯ ಸಮಿತಿಗಳಿಗೆ ಅಧ್ಯಕ್ಷರನ್ನಾಗಿ ಮಾಡಬೇಕು ಎಂದು ನಾನು ಸರ್ಕಾರವನ್ನು ಒತ್ತಾಯಿಸುತ್ತಿದ್ದೇನೆ.

ಮೀನುಗಾರರಿಗೆ 70 ಸಾವಿರದಿಂದ 75 ಸಾವಿರ ಲೀಟರ್ ಡೀಸೆಲ್ ಅನ್ನು ತೆರಿಗೆ ರಹಿತವಾಗಿ ಕೊಡುತ್ತೇವೆ ಎಂದು ತಾವು ಹೇಳಿದ್ದೀರಿ. ಬಹಳ ಸಂತೋಷ, ನಮಗೇನು ಮೀನುಗಾರರ ಬಗ್ಗೆ ದ್ವೇಷವಿಲ್ಲ. ಆದರೆ ಇವತ್ತು ರೈತರ ಬಗ್ಗೆ ನಾವು ಹೇಳಬೇಕೆಂದರೆ, ಇವತ್ತು ಬಹುತೇಕ ರೈತರು ಅಂದರೆ 100ಕ್ಕೆ 75 ರಷ್ಟು ರೈತರು ಟ್ರಾಕ್ಟರ್‌ಗಳನ್ನು ಇಟ್ಟುಕೊಂಡು ಬೇಸಾಯವನ್ನು ಮಾಡುವಂಥ ಪದ್ಧತಿ ಬಂದಿದೆ. ಏಕೆಂದರೆ, ಇವತ್ತು 150 ರೂಪಾಯಿ ಕೊಟ್ಟರೂ ಕೂಲಿಯವರು ಸಿಗುವುದಿಲ್ಲ. ಇಂಥ ಸಂದರ್ಭದಲ್ಲಿ ಒಬ್ಬ ರೈತ ಟ್ರಾಕ್ಟರನ್ನು ಒಂದು ಗಂಟೆ ಭೂಮಿಯಲ್ಲಿ ಹೊಡೆಯಬೇಕೆಂದರೆ ಅದಕ್ಕೆ 6 ರಿಂದ 7 ಲೀಟರ್ ಡೀಸಲ್ ಬೇಕಾಗುತ್ತದೆ. ಒಂದು ಲೀಟರ್ ಡೀಸಲ್‌ಗೆ 40 ರೂಪಾಯಿ ಹೇಳಿದರೆ, 280 ರೂಪಾಯಿಗಳ ಡೀಸೆಲ್‌ಅನ್ನು ಒಂದು ಗಂಟೆ ಟ್ರಾಕ್ಟರ್ ಹೊಡೆಯುವ ರೈತ ಬಳಸುತ್ತಾನೆ. ಆದ್ದರಿಂದ, ಮೀನುಗಾರರಿಗೆ ಕೊಟ್ಟಂಥ ಈ ಸೌಲಭ್ಯವನ್ನು ರೈತರಿಗೂ ವಿಸ್ತರಿಸಿ, ರೈತರು ಟ್ರಾಕ್ಟರ್‌ಗೆ ಬಳಸುವಂಥ ಡೀಸಲ್‌ಗೆ ಸಬ್ಸಿಡಿಯನ್ನು ಕೊಡಬೇಕು ಮತ್ತು ತೆರಿಗೆಯನ್ನು ರದ್ದು ಮಾಡಬೇಕೆಂದು ನಾನು ಸರ್ಕಾರವನ್ನು ಒತ್ತಾಯಿಸುತ್ತಿದ್ದೇನೆ.

ಬಿ.ಪಿ.ಎಲ್. ಕಾರ್ಡ್‌ಗಳನ್ನು ಕೊಡಲು ಲಿಮಿಟ್ ಇದೆ. ಸಣ್ಣ ರೈತರು, ಅತಿ ಸಣ್ಣ ರೈತರು ಎಂದು ನಾವು ಮಾಡಿದ್ದೇವೆ. 5 ಎಕರೆಗಿಂತ ಕಡಿಮೆ ಜಮೀನು ಯಾರಿಗಿದೆ, ಅವರಿಗೆ ಬಿ.ಪಿ.ಎಲ್, ಕಾರ್ಡ್‌ನ್ನು ಕೊಡಲಾಗುತ್ತಿದೆ. ಇವತ್ತು ಬೆಂಗಳೂರಿನ ಸುತ್ತಮುತ್ತ ಒಂದು ಎಕರೆ ಜಮೀನು ಇದ್ದರೆ ಅದರ ಮೌಲ್ಯ ಒಂದು ಕೋಟಿ ರೂಪಾಯಿಗಳಿಂದ ಹದಿನೈದು ಕೋಟಿ ರೂಪಾಯಿಗಳವರೆಗಿದೆ. ಆದರೆ ಉತ್ತರ ಕರ್ನಾಟಕದಲ್ಲಿ ಅಂದರೆ, ಬಿಜಾಪುರ, ಬೆಳಗಾಂ ಮತ್ತು ಗುಲ್ಬರ್ಗಾ ಕಡೆಗಳಲ್ಲಿ 200 ಎಕರೆ ಇದ್ದರೂ 20 ಲಕ್ಷ ಸಿಗುವುದಿಲ್ಲ. ಪರಸ್ಥಿತಿ ಹೀಗಿರುವಾಗ, ಅಲ್ಲಿರುವವರಿಗೂ 5 ಎಕರೆ ಲಿಮಿಟ್, ಬೆಂಗಳೂರಿನಲ್ಲಿರುವವರಿಗೂ 5 ಎಕರೆ ಲಿಮಿಟ್ ಎಂದು ಮಾಡಿ, ಇವರನ್ನು ನೀವು ಬಿ.ಪಿ.ಎಲ್. ವ್ಯಾಪ್ತಿಯಲ್ಲಿ ತರುವುದು ಎಷ್ಟು ಸೂಕ್ತವಿದೆ? ಆದ್ದರಿಂದ, ಯಾವಯಾವ ಪ್ರಾಂತ್ಯದಲ್ಲಿ ಭೂಮಿ ಯಾವಯಾವ ಬೆಲೆಗೆ ಸಿಗುತ್ತದೆ ಎನ್ನುವುದನ್ನು ಪರಿಗಣಿಸಬೇಕೆ ಹೊರತು ಇವತ್ತು ಸಾರಾಸಗಟಾಗಿ 5 ಎಕರೆ ಒಳಗಿರುವಂಥವರು ಸಣ್ಣ ರೈತರು ಎಂದು ತಾವೇನು ಪರಿಗಣಿಸುತ್ತೀರಿ ಇದು ತಪ್ಪು ಎನ್ನುವುದನ್ನು ನಾನು ಸರ್ಕಾರದ ಗಮನಕ್ಕೆ ತರುತ್ತಿದ್ದೇನೆ.

ಇನ್ನು "ಭಾಗ್ಯಜ್ಯೋತಿ" ಯೋಜನೆ. ಇವತ್ತು ಗ್ರಾಮಪಂಚಾಯಿತಿ ಮಟ್ಟದಲ್ಲಿರುವಂಥ ಆಶ್ರಯ ಮನೆಗಳಿಗೆ, ಬಡವರ ಮನೆಗಳಿಗೆ ನಾವು ಭಾಗ್ಯಜ್ಯೋತಿ ಯೋಜನೆಯನ್ನು ಕೊಡುತ್ತಿದ್ದೇವೆ. ಆದರೆ ಪಟ್ಟಣ ಪ್ರದೇಶಗಳಲ್ಲಿರುವಂಥ ಆಶ್ರಯ ಮನೆಗಳನ್ನು ಹೊಂದಿರುವಂಥ ಬಡವರಿಗೆ ಭಾಗ್ಯಜ್ಯೋತಿ ಸೌಲಭ್ಯವನ್ನು ಸರ್ಕಾರ

ಕೊಡುತ್ತಿಲ್ಲ. ಆದ್ದರಿಂದ, ಸರ್ಕಾರವನ್ನು ನಾನು ಈ ಮೂಲಕ ಒತ್ತಾಯಿಸುತ್ತಿದ್ದೇನೆ, ಪಟ್ಟಣ ಪ್ರದೇಶಗಳಲ್ಲಿರುವಂಥ ಆಶ್ರಯ ಮನೆಗಳಿಗೆ ಮತ್ತು ಬಡವರಿಗೆ ಭಾಗ್ಯಜ್ಯೋತಿ ಸೌಲಭ್ಯವನ್ನು ವಿಸ್ತರಿಸಬೇಕು ಎಂದು ನಾನು ಸರ್ಕಾರವನ್ನು ಒತ್ತಾಯಿಸುತ್ತಿದ್ದೇನೆ.

ಹಿಂದೆ ನಾವು ಕಾಂಗ್ರೆಸ್‌ನವರ ಜೊತೆ ಸೇರಿಕೊಂಡು ಸರ್ಕಾರವನ್ನು ನಡೆಸುತ್ತಿರುವಂಥ ಸಂದರ್ಭದಲ್ಲಿ ಅಂದಿನ ವಿರೋಧ ಪಕ್ಷದ ನಾಯಕರಾಗಿದ್ದಂಥ ಯಡಿಯೂರಪ್ಪನವರು ಈ ಕಡೆ ಕುಳಿತುಕೊಂಡು, ಶಾಸಕರ ನಿಧಿ. ಬೇಕು ಎಂದು ಬಹಳ ಧರಣಿ, ಸತ್ಯಾಗ್ರಹವನ್ನೆಲ್ಲಾ ಮಾಡಿದರು. ಅಂದು ಹಣಕಾಸು ಮಂತ್ರಿಗಳಾಗಿದ್ದಂಥ ಸಿದ್ದರಾಮಯ್ಯನವರು, ಎಲ್ಲ ಹೋರಾಟವಾದ ನಂತರ ಕೊನೆಗೆ, 50 ಲಕ್ಷ ಶಾಸಕರ ನಿಧಿಯನ್ನು ಕೊಡುತ್ತೇವೆ ಎಂದು ಹೇಳಿದಾಗ ಯಡಿಯೂರಪ್ಪನವರು ಮೇಜು ತಟ್ಟಿ ಸ್ವಾಗತ ಮಾಡಿದರು. ಆಮೇಲೆ ಅವರು ಉಪಮುಖ್ಯಮಂತ್ರಿಗಳಾದ ಮೇಲೆ, ಹೋದ ಸಾರಿ ಬಜೆಟ್ಟನ್ನು ಮಂಡಿಸುವಂಥ ಸಂದರ್ಭದಲ್ಲಿ ಬಹಳ ಸಂತೋಷದಿಂದ, ನಾನು ಶಾಸಕರ ನಿಧಿಯನ್ನು ಒಂದು ಕೋಟಿ ರೂಪಾಯಿಗಳಿಗೆ ಏರಿಸಿದ್ದೇನೆ ಎಂದು ಹೇಳಿದಾಗ, ನಾವೆಲ್ಲರೂ ಎರಡೂ ಕೈಯಿಂದ ಮೇಜನ್ನು ಗುದ್ದಿ ಅದನ್ನು ಸ್ವಾಗತ ಮಾಡಿದ್ದೆವು. ಯಡಿಯೂರಪ್ಪನವರಿಗೆ ಅನ್ನಿಸಿರಬೇಕು, ನಾನು ಇಷ್ಟು ಹೋರಾಟ ಮಾಡಿ ಶಾಸಕರ ನಿಧಿಯನ್ನು ತಂದೆ. ಹಾಗೆ ಉಳಿದ ಶಾಸಕರೆಲ್ಲರೂ ಹೋರಾಟ ಮಾಡಿದ ಮೇಲೆ ಕೊಟ್ಟರೆ ಸೂಕ್ತ ಎಂದು ಅಂದುಕೊಂಡಿದ್ದಾರೇನೋ ಎಂದು ನನಗನ್ನಿಸುತ್ತಿದೆ. ಈ ಸಂದರ್ಭದಲ್ಲಿ ಇನ್ನೊಂದು ವಿಷಯವನ್ನು ತಮ್ಮ ಗಮನಕ್ಕೆ ತರುವುದೇನೆಂದರೆ, ಸರ್ಕಾರದಿಂದ ಬಂದಂಥ ಹಣದಲ್ಲಿ ಆದಂಥ ಹೈಸ್ಕೂಲೊಂದನ್ನು ನಾವು ಕಳೆದ ವರ್ಷ ಉದ್ಘಾಟನೆ ಮಾಡಲು ಹೋದೆವು. ಹೈಸ್ಕೂಲನ್ನು ಉದ್ಘಾಟನೆ ಮಾಡುತ್ತೇವೆ, ಅದಕ್ಕೆ ಕಟ್ಟಡವನ್ನು ಕಟ್ಟಿಕೊಡುತ್ತೇವೆ. ಆದರೆ ಅದರ ಪಕ್ಕ ಶೌಚಾಲಯ ಇರಲಿಲ್ಲ. ಆಗ ಅಲ್ಲಿಯ ಮೇಸ್ಟರು ಮತ್ತು ಮಕ್ಕಳು, ನಾವು ಶೌಚಾಲಯಕ್ಕೆ ಎಲ್ಲಿಗೆ ಹೋಗಬೇಕು ಎಂದು ಕೇಳಿದರು. ಗಂಡುಮಕ್ಕಳು ಎಲ್ಲೋ ಹೋಗುತ್ತಾರೆ. ಆದರೆ ಹೆಣ್ಣು ಮಕ್ಕಳು ಎಲ್ಲಿಗೆ ಹೋಗಬೇಕು ಎನ್ನುವ ಪರಸ್ಥಿತಿ ಇದ್ದಾಗ, ನಮ್ಮ ಹತ್ತಿರ ಇದ್ದಂಥ ವಿವೇಚನಾ ನಿಧಿಯಿಂದ, ಶಾಸಕರ ನಿಧಿಯಿಂದ 50 ಸಾವಿರ ರೂಪಾಯಿಗಳನ್ನು ಶೌಚಾಲಯಕ್ಕೆಂದು ಕೊಟ್ಟೆವು. ಆದ್ದರಿಂದ ಶಾಸಕ ನಿಧಿ ಅತ್ಯಂತ ಅವಶ್ಯಕವಿರುವುದರಿಂದ, ಇವತ್ತಿನ ದಿವಸ S.R ಎಲ್ಲವೂ ಜಾಸ್ತಿಯಾಗಿರುವುದರಿಂದ ಅದನ್ನು ಕನಿಷ್ಠ ಪಕ್ಷ 3 ಕೋಟಿ ರೂಪಾಯಿಗಳಿಗೆ ಏರಿಸಬೇಕು. ಮುಖ್ಯಮಂತ್ರಿಗಳು ಅದಕ್ಕೆ ಒಪ್ಪಿಗೆಯನ್ನು ಕೊಡಬೇಕು ಎಂದು ಹೇಳಿ ನಾನು ಮುಖ್ಯಮಂತ್ರಿಗಳನ್ನು ಒತ್ತಾಯಿಸುತ್ತಿದ್ದೇನೆ.

ಕಳೆದ ವರ್ಷದ ಬಜೆಟ್ಟನ್ನು ಮಂಡಿಸಿದಂಥ ಸಂದರ್ಭದಲ್ಲಿ ಅಂದಿನ ಉಪಮುಖ್ಯಮಂತ್ರಿಗಳು, ಇಂದಿನ ಮುಖ್ಯಮಂತ್ರಿಗಳು ಬಹಳ ಹರ್ಷೋದ್ಗಾರದಿಂದ ಹೇಳಿದರು, ಗಾಂಧೀಜಿ ಕಂಡಂಥ ಕನಸನ್ನು, ರಾಮರಾಜ್ಯ ಮಾಡಬೇಕು ಎಂದು ಗಾಂಧೀಜಿ ಏನು ಕನಸು ಕಂಡಿದ್ದರು ಆ ವಿಷಯದಲ್ಲಿ ನಾವು ಇವತ್ತು ಗ್ರಾಮರಾಜ್ಯವನ್ನು ಮಾಡುತ್ತಿದ್ದೇವೆ. ಸುವರ್ಣ ಕಾಯಕ ಯೋಜನೆ, ಸುವರ್ಣ ಗ್ರಾಮೋದಯ ಯೋಜನೆಯನ್ನು ಮಾಡುತ್ತೇವೆ ಎಂದು ಹೇಳಿದರು. ಅದು ಬಹಳ ಒಳ್ಳೆಯ ಕೆಲಸ. ಇವತ್ತು ಹಳ್ಳಿಗಳಲ್ಲಿ ಮಣ್ಣು ರಸ್ತೆಯನ್ನೇ ಮಾಡುವುದು ಕಷ್ಟ. ಅವರೆಂದೂ ಸಿಮೆಂಟ್ ರಸ್ತೆಯನ್ನು ಕಂಡಿರಲಿಲ್ಲ. ಅಂಥ ಪರಿಸ್ಥಿತಿಯಲ್ಲಿ ಇವತ್ತು ಹಳ್ಳಿಗಳಲ್ಲಿ ಸಿಮೆಂಟ್ -ರಸ್ತೆಗಳಾಗಿವೆ. ಆ ಯೋಜನೆಯನ್ನು ಈ ವರ್ಷ ಕೈಬಿಟ್ಟಿರುವುದನ್ನು ನೋಡಿದರೆ ಏಕೋ ಅನುಮಾನ ಬರುತ್ತಿದೆ. ಬಹುಶ: ಕುಮಾರಸ್ವಾಮಿಯವರು ಅದನ್ನು ಯೋಚನೆ ಮಾಡಿದ್ದರು ಎಂದು ಕೈಬಿಟ್ಟರೇನೋ ನನಗೆ ಗೊತ್ತಿಲ್ಲ. ಆದರೆ ಇಂಥಾದ್ದನ್ನು ಯಾರೇ ಯೋಚನೆ ಮಾಡಲಿ, ಕುಮಾರಸ್ವಾಮಿಯವರೇ ಮಾಡಲಿ, ಯಡಿಯೂರಪ್ಪನವರೇ ಮಾಡಲಿ, ಸಿದ್ದರಾಮಯ್ಯನವರೇ ಮಾಡಲಿ, ಯಾವ ಯೋಜನೆಗಳು ಒಳ್ಳೆಯವುಗಳಾಗಿವೆ, ಯಾವ ಯೋಜನೆಯಿಂದ ಗ್ರಾಮಾಂತರ ಪ್ರದೇಶದ ಜನರಿಗೆ ಅನುಕೂಲವಾಗುತ್ತದೆ, ಸರ್ವಾಂಗೀಣ ಅಭಿವೃದ್ಧಿಯಾಗುತ್ತದೆ, ಅಂಥ ಯೋಜನೆಗಳನ್ನು ಕೈಬಿಡುವುದರ ಬದಲಾಗಿ ಮುಂದುವರೆಸಿದರೆ ಬಹಳ ಸೂಕ್ತ ಎಂದು ಮುಖ್ಯಮಂತ್ರಿಗಳಲ್ಲಿ ವಿನಂತಿಸುತ್ತೇನೆ.

ಇವತ್ತು ಡೀಸೆಲ್ ತುಟ್ಟಿಯಾಗಿದೆ, ಎಲ್ಲ ವಸ್ತುಗಳೂ ತುಟ್ಟಿಯಾಗಿವೆ. ಆಗಲೇ ಪಿ.ಎಂ. ಅಶೋಕ್‌ರವರು ಹೇಳಿದರು. ಟಿ.ಎ., ಡಿ.ಎ., ಏನಿದೆ ಇದು ಹೆಚ್ಚಾಗುವುದು ಎಲ್ಲರಿಗೂ ಬೇಕು. ಆದರೆ ಕೇಳುವುದಕ್ಕೆ ಹಿಂದೆ ಮುಂದೆ ನೋಡುತ್ತಿದ್ದಾರೆ. ನಾವುಗಳು ಬಹಳ ದೂರದ ಪ್ರದೇಶಗಳಿಂದ ಬರುವಂಥವರು. ಇವತ್ತು ನೀವು ಕಿ.ಮೀ.ಗೆ 8 ರೂಪಾಯಿ ಏನು ಕೊಡುತ್ತಿದ್ದೀರಿ ಅದು ಸಾಕಾಗುವುದಿಲ್ಲ. ಆದ್ದರಿಂದ, ಮುಖ್ಯಮಂತ್ರಿಗಳಲ್ಲಿ ನಾನು ವಿನಂತಿಸುತ್ತಿದ್ದೇನೆ, ಶಾಸಕರ ಟಿ.ಎ., ಡಿ.ಎ., ಹೆಚ್ಚು ಮಾಡಬೇಕು. ಅದರ ಜೊತೆಗೆ, ಇವತ್ತು ಎಂ.ಪಿ.ಗಳಿಗೆ ಯಾವ ರೀತಿ ವಾಹನವನ್ನು ಕೊಟ್ಟಿದ್ದೀರಿ, ಅದೇ ರೀತಿ ನಮ್ಮ ಕ್ಷೇತ್ರಗಳಲ್ಲಿ ನಮಗೆ ಓಡಾಡಲಿಕ್ಕೆ ವಾಹನಗಳನ್ನು ಕೊಡಬೇಕು. ನೀವು 10 ದಿವಸ Taluk Executive Officerರವರ ವಾಹನವನ್ನು ಉಪಯೋಗಿಸಬಹುದು ಎಂದು ನಿಯಮಾವಳಿಯಲ್ಲಿ ಇದೆ. ಆದರೆ, ಪ್ರತ್ಯೇಕವಾಗಿ ಶಾಸಕರಿಗೆ, ಒಂದೊಂದು ಕ್ಷೇತ್ರಕ್ಕೆ ಒಂದೊಂದು ವಾಹನವನ್ನು ಕೊಡಬೇಕು. ಏಕೆಂದರೆ ಒಂದೊಂದು ಇಲಾಖೆಯ ಅಧಿಕಾರಿಗಳಿಗೆ ಒಂದೊಂದು ವಾಹನಗಳಿವೆ.

ಆದರೆ 38–40 ಇಲಾಖೆಗಳನ್ನು supervise ಮಾಡುವಂಥ ಶಾಸಕರಿಗೆ ಪ್ರತ್ಯೇಕ ವಾಹನವಿಲ್ಲ. ಆದ್ದರಿಂದ ಶಾಸಕರಿಗೆ ಒಂದು ವಾಹನವನ್ನು ಕ್ಷೇತ್ರದಲ್ಲಿ ಓಡಾಡಲಿಕ್ಕೆ ಕೊಟ್ಟರೆ ಬಹಳ ಸೂಕ್ತ ಎಂದು ಸರ್ಕಾರವನ್ನು ಒತ್ತಾಯಿಸುತ್ತೇನೆ.

ಇನ್ನು, ಗೃಹ ಇಲಾಖೆಯ ಬಗ್ಗೆ ಒಂದು ಮಾತನ್ನು ಹೇಳುತ್ತೇನೆ. ಏಕೆಂದರೆ ನಾನು ಪೊಲೀಸ್ ಇಲಾಖೆಯಿಂದ ಬಂದಂಥವನು.Sub Inspector Level ರವರೆಗೂ ಸರ್ಕಾರ 7 ವರ್ಷಕ್ಕೆ ಒಂದು ಸಾರಿ ಒಂದು ಜೊತೆ Uniformಅನ್ನು ಕೊಡುತ್ತಾರೆ. ಅವರಿಗೆ ಪ್ರತಿ ತಿಂಗಳೂ ಒಂದು ನೂರು ರೂಪಾಯಿಗಳನ್ನು washing allowance ಎಂದು Sub Inspectorಗೆ ಕೊಡುತ್ತಾರೆ, Constable, Head Constableಗಳಿಗೆ 50 ರೂಪಾಯಿಗಳನ್ನು ಕೊಡುತ್ತಾರೆ. 7 ವರ್ಷಕ್ಕೊಮ್ಮೆ ಎಂದರೆ, 7 ವರ್ಷದವರೆಗೂ ಅವರು uniform ಹಾಕದೇ civil dress ನಲ್ಲಿರಬೇಕೆ? ಪ್ರತಿವರ್ಷ ಕನಿಷ್ಠ ಪಕ್ಷ 4 ಜೊತೆ uniform ಆದರೂ ಪೊಲೀಸ್ ಅಧಿಕಾರಿಗಳಿಗೆ ಕೊಡಬೇಕು. ನಾವು ಪೊಲೀಸರಿಂದ ಬಹಳ ದಕ್ಷತೆಯನ್ನು ನಿರೀಕ್ಷಿಸುತ್ತೇವೆ. ಆದರೆ ಅವರಿಗೆ ಕೊಡುವಂಥ ಸೌಲಭ್ಯಗಳಿಂದ ಅವರನ್ನು ವಂಚಿತರನ್ನಾಗಿ ಮಾಡಿರುತ್ತೇವೆ. ಇವತ್ತು ಬ್ಯಾಂಕುಗಳಲ್ಲಿ ಒಬ್ಬ ಅಧಿಕಾರಿ 8 ಗಂಟೆಯ ಮೇಲೆ ಕೆಲಸ ಮಾಡಿದರೆ ಅವನಿಗೆ O.T. ಕೊಡುತ್ತಾರೆ, ಆದರೆ ಪೊಲೀಸಿನವರು 24 ಗಂಟೆಗಳ ಕಾಲ ಕೆಲಸ ಮಾಡಿದರೂ ಕೂಡ ಅವರಿಗೆ ಯಾವುದೇ ರೀತಿಯ O.T.ಇರುವುದಿಲ್ಲ. ಆದ್ದರಿಂದ, ಕನಿಷ್ಠ ಪಕ್ಷ 12 ಗಂಟೆಯ ಮೇಲೆ ಒಬ್ಬ constable ಅಥವಾ ಪೊಲೀಸ್ ಅಧಿಕಾರಿಗಳನ್ನು ಸರ್ಕಾರ ಉಪಯೋಗಿಸಿಕೊಂಡರೆ, ಪೊಲೀಸ್ ಇಲಾಖೆ ತನ್ನ ಕೆಲಸಕ್ಕೆ ಉಪಯೋಗಿಸಿಕೊಂಡರೆ, ಅವರಿಗೆ ಹೆಚ್ಚಿನ ಭತ್ಯೆಯನ್ನು ಕೊಡಬೇಕು ಎಂದು ನಾನು ಸರ್ಕಾರವನ್ನು ಒತಾಯಿಸುತ್ತಿದ್ದೇನೆ. ಅದರ ಜೊತೆಗೆ ಇವತ್ತು ಪೊಲೀಸ್ ಇಲಾಖೆಯಲ್ಲಿ Risk Allowanceಎಂದು ಇದೆ. I.P.S. Officersಗೆ ಮಾತ್ರ ಈ Risk Allowance ಇದೆ. ಇವತ್ತು ನಿಜವಾದ risk ಅನ್ನು ಎದುರಿಸುತ್ತಿರುವಂಥವರು, ಪೊಲೀಸ್ ಇಲಾಖೆಯಲ್ಲಿ ಹಗಲಿರುಳೂ ಶ್ರಮಿಸುತ್ತಿರುವವರು ಎಂದರೆ Constables, Head Constables and Sub Inspectors, are the Executive Officers. I.P.S. Officerಗಳಿಗೆ ಮಾತ್ರ ಸೀಮಿತವಾಗಿರುವ ಈRisk Allowance ಅನ್ನು ಕೆಳಹಂತದ ಎಲ್ಲ ಅಧಿಕಾರಿಗೂ ಕೂಡ extend ಮಾಡಬೇಕು ಎಂದು ನಾನು ಸರ್ಕಾರವನ್ನು ಒತ್ತಾಯಿಸುತ್ತೇನೆ. ಅಧ್ಯಕ್ಷರೆ, ನೀವು ಅವಕಾಶ ಕೊಟ್ಟಿದ್ದೀರಿ. ಆಯವ್ಯಯದ ಮೇಲೆ ಚರ್ಚೆಯಲ್ಲಿ ಭಾಗವಹಿಸಲಿಕ್ಕೆ ಅವಕಾಶ ಮಾಡಿಕೊಟ್ಟಂಥ ತಮಗೆ ಧನ್ಯವಾದಗಳನ್ನು ಅರ್ಪಿಸುತ್ತೇನೆ.

(ಗೊಂದಲ)

ಅಧ್ಯಕ್ಷರು: ಕಿಮ್ಮನೆಯವರೆ, ನೀವು ಐದು ನಿಮಿಷದಲ್ಲಿ ಮಾತನಾಡಿ ಮುಗಿಸಿ. (ಗೊಂದಲ) ಶರಣಪ್ರಕಾಶ್‌ರವರೆ, ನಿಮಗೆ ಸಾಕಷ್ಟು ಅವಕಾಶವನ್ನು ಕೊಟ್ಟಿದ್ದೇನೆ.

(ಗೊಂದಲ)

ಡಾ: ಶರಣಪ್ರಕಾಶ್ ರುದ್ರಪ್ಪ ಪಾಟೀಲ್: ನನಗೆ ನೀವು ಅವಕಾಶವನ್ನೇ ಕೊಟ್ಟಿಲ್ಲ. ನೀವು ಬೇಕೆಂತಲೇ ನನಗೆ ಅವಕಾಶ ಕೊಟ್ಟಿಲ್ಲ.

(ಗೊಂದಲ)

ಅಧ್ಯಕ್ಷರು: ಎಲ್ಲರೂ ಮಾತನಾಡಲಿಕ್ಕೆ ಆಗುವುದಿಲ್ಲ.

ಡಾ: ಶರಣಪ್ರಕಾಶ್ ರುದ್ರಪ್ಪ ಪಾಟೀಲ್: ನನಗೆ ಮಾತನಾಡಲಿಕ್ಕೆ ಅವಕಾಶ ಕೊಡಲಿಲ್ಲವೆಂದರೆ ಇದರಲ್ಲಿ ಸರ್ಕಾರದವರ ಪಿತೂರಿ ಇದೆ. (ಗೊಂದಲ) ನಾನು ಮಾತನಾಡಿದ್ದಕ್ಕೆ ಉತ್ತರ ಕೊಡುವುದಕ್ಕೆ ಸಮರ್ಥರಿಲ್ಲವೆಂದು ನನಗನ್ನಿಸುತ್ತದೆ. ಈ ಸದನದಲ್ಲಿ ಒಂದು ಸಲವೂ ಅವಕಾಶ ಕೊಟ್ಟಿಲ್ಲ.

(ಗೊಂದಲ)

ಅಧ್ಯಕ್ಷರು: ಶರಣಪ್ರಕಾಶ್‌ರವರೆ, ನೀವು ಅವರಿಗೆ ಮಾತನಾಡುವುದಕ್ಕೆ ಬಿಡಿ. ಸುಮ್ಮನೆ time waste ಆಗುತ್ತದೆ. ಅವರಿಗೆ ಮಾತನಾಡಲು ಅವಕಾಶ ಕೊಟ್ಟಿದ್ದೇನೆ.

ಡಾ: ಶರಣಪ್ರಕಾಶ್ ರುದ್ರಪ್ಪ ಪಾಟೀಲ್: ನಾವು 24 hours ಸದನದಲ್ಲಿರುತ್ತೇವೆ. ಬೇರೆ ಯಾರೂ ಸದನದಲ್ಲಿರುವುದಿಲ್ಲ. ನಾವು full time ಸದನದಲ್ಲಿರುತ್ತೇವೆ. ನಮಗೇ ಅವಕಾಶ ಕೊಡುವುದಿಲ್ಲ. you have to allow me. ನೀವು ನನ್ನ ಹೆಸರನ್ನು ಮೊದಲೇ ಕರೆದಿದ್ದೀರಿ.

ಅಧ್ಯಕ್ಷರು: ನೀವು ಇದೇ ರೀತಿ ಮಾತನಾಡಿದರೆ ನಾನು ಸದನವನ್ನು adjourn ಮಾಡುತ್ತೇನಷ್ಟೆ. ಆಗುವುದಿಲ್ಲ. ನಾನು 4–5 ಜನರಿಗೆ ಅವಕಾಶ ಕೊಡುತ್ತೇನೆಂದು ಹೇಳಿದ್ದೆ ಅದೇ ರೀತಿ ಕೊಡುತ್ತಿದ್ದೇನೆ. ಈ ರೀತಿ ಆದರೆ ಆಗುವುದಿಲ್ಲ. 4–5 ಜನರಿಗೆ ಅವಕಾಶ ಕೊಡುತ್ತೇನೆಂದು ವಿರೋಧ ಪಕ್ಷದ ನಾಯಕರಿಗೆ request ಮಾಡಿದ್ದೆ. ಯಾರ್‍ಯಾರಿಗೆ ಅವಕಾಶ ಕೊಡಬೇಕೆನ್ನುವುದನ್ನು ನೀವೇ ಹೇಳಿಬಿಡಿ.

ಶ್ರೀ ಮಲ್ಲಿಕಾರ್ಜುನ ಖರ್ಗೆ: ಕಿಮ್ಮನೆ ರತ್ನಾಕರ್ ರವರು ಮೊದಲನೇ ಸಲ ಆರಿಸಿ ವಿಧಾನ ಸಭೆಗೆ ಬಂದಿದ್ದಾರೆ. ಅವರು ಮೊದಲು ಮಾತನಾಡಲಿ. ಆ ಮೇಲೆ ಬೇರೆಯವರು ಮಾತನಾಡುತ್ತಾರೆ. ಅವರಿಗೆ ಅವಕಾಶ ಸಿಕ್ಕಿಲ್ಲ. ಆದ್ದರಿಂದ ಅವರು ಮೊದಲು ಮಾತನಾಡಲಿ.

ಶ್ರೀ ಬಿ.ಎಸ್. ಯಡಿಯೂರಪ್ಪ (ಮುಖ್ಯಮಂತ್ರಿಯವರು): ಈಗ ತಾನೆ speaker ರವರ chamber ನಲ್ಲಿ ಮಾತನಾಡುವಾಗ ಐದಾರು ಜನ ಪ್ರಮುಖರು ಮಾತನಾಡುವವರಿದ್ದಾರೆಂದು ಹೇಳಿದರು. ಅದೇ ರೀತಿ ಅವರಿಗೆ ಅವಕಾಶ ಕೊಟ್ಟರು. 12–00 ಗಂಟೆಗೆ ನಾನು ಉತ್ತರ ಕೊಡಬೇಕಾಗಿತ್ತು. ಇನ್ನೊಂದು ಇಬ್ಬರು ಮೂರು ಜನ ಮಾತನಾಡುವವರಿದ್ದರೆ, ಯಾರು ಮಾತನಾಡಬೇಕೆಂದು ವಿರೋಧ ಪಕ್ಷದ ನಾಯಕರಾದ ನೀವು ಹೇಳಿದರೆ ಒಳ್ಳೆಯದು. ನೀವು ಸಹಕಾರವೇ ಕೊಡದಿದ್ದರೆ ಅಧ್ಯಕ್ಷರು ಹೇಗೆ ಕೆಲಸ ಮಾಡುವುದಕ್ಕಾಗುತ್ತದೆ? ನೀವು ಹೇಳಬೇಕಲ್ಲವೇ? ಈಗ 5 ಜನರ ಬದಲು 12 ಜನರಿಗೆ ಮಾತನಾಡಲು ಅವಕಾಶ ಕೊಟ್ಟರು. ಈ ರೀತಿಯಾದರೆ ಹೇಗೆ?

ಶ್ರೀ ಮಲ್ಲಿಕಾರ್ಜುನ ಖರ್ಗೆ: ಇವತ್ತು 4–5 ಮಂದಿ ಮಾತನಾಡಿದರು.

ಅಧ್ಯಕ್ಷರು: 10 ಜನರ ಹೆಸರು ಕೊಟ್ಟಿದ್ದೀರಿ. ಎಲ್ಲರೂ ಮಾತನಾಡಲಿಕ್ಕೆ ಸಮಯ ಇಲ್ಲ.

ಶ್ರೀ ಮಲ್ಲಿಕಾರ್ಜುನ ಖರ್ಗೆ: ನಿನ್ನೆ buffet system type ಆಯಿತು. ಕೊಟ್ಟವರಿಗೆ ಕೊಟ್ಟೇ ಕೊಟ್ರೆ, ಬಡಿಸಿ ಊಟ ಹಾಕಿದಿರಿ ಎನ್ನುವ ಹಾಗೆ ಮಾಡಿದಿರಿ.

ಅಧ್ಯಕ್ಷರು: ಅದು ಹಾಗೆಯೇ ಆಗುವುದು ಯಾವಾಗಲೂ ಇದೇ ಪರಿಸ್ಥಿತಿ ಆಗುತ್ತದೆ. ಕಿಮ್ಮನೆ ರತ್ನಾಕರ್‌ರವರೆ, ತಾವು ಮಾತನಾಡಿ.

ಶ್ರೀ ಕಿಮ್ಮನೆ ರತ್ನಾಕರ (ತೀರ್ಥಹಳ್ಳಿ): ಮಾನ್ಯ ಅಧ್ಯಕ್ಷರೆ, ನಾನು ಶಿವಮೊಗ್ಗ ಜಿಲ್ಲೆಯ ತೀರ್ಥಹಳ್ಳಿ ಕ್ಷೇತ್ರದಿಂದ ಪ್ರಥಮ ಬಾರಿಗೆ ಈ ಸದನಕ್ಕೆ ಆಯ್ಕೆಯಾಗಿ ಬಂದಿದ್ದೇನೆ. ನನಗೆ ಮಾತನಾಡಲಿಕ್ಕೆ ಅವಕಾಶ ಕೊಟ್ಟ ತಮಗೆ ಕೃತಜ್ಞತೆ ಸಲ್ಲಿಸುತ್ತೇನೆ. ಈಗಾಗಲೇ ಸಮಯದ ಅಭಾವ ಇರುವುದು ನನಗೆ ಗೊತ್ತಿದೆ. ನಾನು ಹಾಕಿಕೊಂಡಿರುವ pointsನ್ನೆಲ್ಲ submit ಮಾಡುವ ಪರಿಸ್ಥಿತಿಯಲ್ಲಿ ಇಲ್ಲ. ಆದರೆ, ಬಹಳ ಪ್ರಮುಖವಾಗಿರುವ ಒಂದೆರಡು ವಿಚಾರಗಳನ್ನು ಹೇಳಲಿಕ್ಕೆ ಬಯಸುತ್ತೇನೆ. ನಮ್ಮ ಜಿಲ್ಲೆಯವರೇ ಆದ ಮಾನ್ಯ ಯಡಿಯೂರಪ್ಪನವರು ಮುಖ್ಯಮಂತ್ರಿಯಾಗಿದ್ದಾರೆ. ಇವರು ಬಹಳ ವರ್ಷಗಳ ಕಾಲ ಹೋರಾಟ ಮಾಡಿದಂಥವರು. ನನಗೆ ಆ ಬಗ್ಗೆ ಹೆಮ್ಮೆ ಇದೆ. ತಾತ್ವಿಕವಾಗಿ, ಅವರ ವಿಚಾರಧಾರೆಗೆ ನಾನು ಸಂಪೂರ್ಣವಾಗಿ ವಿರುದ್ಧವಿದ್ದೇನೆ. ಆದರೆ, ಮುಖ್ಯಮಂತ್ರಿಯಾಗಿರುವುದಕ್ಕೆ ನನಗೆ ಸಂತೋಷವಿದೆ. ನಮ್ಮ ಇಡೀ ಸದನದ ಇತಿಹಾಸದಲ್ಲಿ 1952ನೇ ಇಸವಿಯಿಂದ 2008ನೇ ಇಸವಿಯವರೆಗೆ ಅನೇಕ ಬಜೆಟ್‌ಗಳನ್ನು ಮಂಡನೆ ಮಾಡಿದಾಗಲೂ ಒಂದು ವಿಚಾರವನ್ನು ಯಾರೂ ಕೂಡ ಮಾಡಿರಲಿಲ್ಲ. ಅದೇನೆಂದರೆ, ನಮ್ಮ ಕರ್ನಾಟಕ ರಾಜ್ಯಕ್ಕೆ ಸೇರಿದ ಆಸ್ತಿಯನ್ನು ಮಾರಾಟ ಮಾಡಿ

ನಾವು ಬಜೆಟ್‌ನಲ್ಲಿ ಹಣ ಒದಗಿಸುತ್ತೇವೆನ್ನುವ ನೀತಿ ಏನಿದೆ, ಇದು 1952ನೇ ಇಸವಿಯಿಂದ 2008ನೇ ಇಸವಿವರೆಗೆ ಯಾವ ಬಜೆಟ್‌ನಲ್ಲೂ ಕೂಡ ಇಲ್ಲ. ಈ ರೀತಿ ಪ್ರಥಮ ಬಾರಿಗೆ ಮಾಡಿರುವಂಥದ್ದು. ಕರ್ನಾಟಕ ರಾಜ್ಯಕ್ಕೆ ಸೇರಿರತಕ್ಕಂಥ ಆಸ್ತಿಯನ್ನು ಮಾರಿ ನಾನು ಈ ಬಜೆಟ್‌ನಲ್ಲಿ 3000 ಕೋಟಿ ರೂಪಾಯಿಗಳನ್ನು ತೊಡಗಿಸುತ್ತೇನೆ ಎನ್ನುವ ಮಾತೇನಿದೆ, ಇದು ಅತ್ಯಂತ ಘೋರ ಅನ್ಯಾಯ ಮತ್ತು ಅರ್ಥವ್ಯವಸ್ಥೆಯಲ್ಲಿ ಈ ರೀತಿಯಾದ ಯಾವುದೇ ವ್ಯವಸ್ಥೆ ಮಾಡುವುದು ಅತ್ಯಂತ ಕೆಟ್ಟದ್ದು ಮತ್ತು ಕೆಟ್ಟ ರೀತಿಯ ಆರ್ಥಿಕ ನೀತಿಯನ್ನು ಅಳವಡಿಸುತ್ತಿದ್ದಾರೆ. ನಮ್ಮ ಮನೆಯಲ್ಲೂ ಕೂಡ ನಾವು ಆಸ್ತಿ ಮಾರಿ ಮನೆಗೆ ಅಕ್ಕಿ ತರುತ್ತೇವೆ, ಆಸ್ತಿ ಮಾರಿ ಸಾಲ ತೀರಿಸುತ್ತೇವೆಂದು ಹೇಳಿದರೆ ಅದರಷ್ಟು ಒಂದು ದೊಡ್ಡ ಅಪರಾಧ ಇನ್ನೊಂದಿಲ್ಲ. ಅದೇ ರೀತಿಯಲ್ಲಿ ಕಳೆದ 1952 ರಿಂದ 1956ರಲ್ಲಿ ವಿಧಾನ ಸಭೆಯ ಈ ಸದನವನ್ನು ಕಟ್ಟಿದಾಗ 2 ಕೋಟಿ ರೂಪಾಯಿಗಳಷ್ಟು ಖರ್ಚು ಬಿದ್ದಿತ್ತು. ಬಹುಶಃ ಇವತ್ತೇನಾದರೂ 50 ಸಾವಿರ ಕೋಟಿ ರೂಪಾಯಿಗಳಷ್ಟು ಬೆಲೆ ಬಾಳುವ ಈ ಸದನವನ್ನು ಮಾರಿ ಬಜೆಟ್‌ನಲ್ಲಿ ಮಂಡನೆ ಮಾಡುತ್ತೇನೆಂದು ಹೇಳಿದರೆ ಖಂಡಿತವಾಗಿಯೂ ಕೂಡ ಅದು ಒಳ್ಳೆಯದಲ್ಲ. ಅಂಥ ಕಾರ್ಯಕ್ರಮವನ್ನು ಕೈಬಿಡಬೇಕು. ನಮ್ಮ ಮಾನ್ಯ ಸಿದ್ಧರಾಮಯ್ಯನವರು ಹಿಂದೆ ಮಾತನಾಡುವಾಗ ತುಂಬಾ ಚೆನ್ನಾಗಿ ಹೇಳಿದರು. ಅಬಕಾರಿ ಇಲಾಖೆಯ ಮೂಲಕವೇ ಇನ್ನೂ 2 ಸಾವಿರ ಕೋಟಿ ರೂಪಾಯಿಗಳನ್ನು ವಸೂಲಿ ಮಾಡಬಹುದಾಗಿತ್ತು. ಸರ್ಕಾರ ಅದರಲ್ಲಿ ವಿಫಲವಾಗಿದೆ ಎನ್ನುವ ಮಾತನ್ನು ಅವರೇನು ಹೇಳಿದರು, ಆ ರೀತಿಯಾದ ಆದಾಯವನ್ನು ತರುವ ರೀತಿಯಲ್ಲಿ ಪ್ರಯತ್ನ ಮಾಡಬೇಕೆನ್ನುವ ಮಾತನ್ನು ಹೇಳಲಿಕ್ಕೆ ನಾನು ಇಷ್ಟಪಡುತ್ತೇನೆ. ಕರ್ನಾಟಕ ರಾಜ್ಯದಲ್ಲಿ ಆಡಳಿತ ವ್ಯವಸ್ಥೆ ಸರಿಯಾಗಿಲ್ಲ. ಇದಕ್ಕೆ ಕಾರಣವೇನು? ಇದು ಈ ವರ್ಷಕ್ಕೆ ಮಾತ್ರ ಸೀಮಿತವಲ್ಲ. ಇದು ಅನೇಕ ವರ್ಷಗಳಿಂದ ಸರಿಯಿಲ್ಲ. ಹಾಗಾದರೆ ಇದಕ್ಕೆ ಮೂಲ ಕಾರಣವೇನು? ಈಗಾಗಲೆ ಇದರ ಬಗ್ಗೆ ನನ್ನ ಹಿರಿಯ ಮಿತ್ರರೊಬ್ಬರು ಮಾತನಾಡುತ್ತಾ 17 ಸಾವಿರ ಖಾಲಿ ಹುದ್ದೆ ಇದೆಯೆಂದು ಹೇಳಿದರು. ನನಗೆ ಲಭ್ಯವಿರುವ ಮಾಹಿತಿ ಪ್ರಕಾರ ಈ ರಾಜ್ಯದಲ್ಲಿ ಒಟ್ಟು 96 ಸಾವಿರ ಹುದ್ದೆಗಳು ಖಾಲಿ ಇವೆ. 96 ಸಾವಿರ ಹುದ್ದೆಗಳನ್ನು ಖಾಲಿ ಇಟ್ಟುಕೊಂಡು ನಾನು ಆಡಳಿತ ಮಾಡುತ್ತೇನೆ, ಅವರ ಹತ್ತಿರ ಕೆಲಸ ಮಾಡಿಸುತ್ತೇನೆ, ಇವರ ಹತ್ತಿರ ಕೆಲಸ ಮಾಡಿಸುತ್ತೇನೆ ಎಂದು ಹೇಳಿದರೆ, ಖಂಡಿತವಾಗಿ ಅದು ಸುಳ್ಳು. ನೀವು ತೀರ್ಥಹಳ್ಳಿಗೆ ಬನ್ನಿ, ಶಿಕಾರಿಪುರಕ್ಕೆ ಹೋಗಿ, ಯಾವುದೇ ಪುರ ಪಂಚಾಯತಿಗೆ ಹೋಗಿ, ಅಲ್ಲಿ ಪೂರ್ಣ ಪ್ರಮಾಣದ ಅಧಿಕಾರಿಗಳಿಲ್ಲ. ಪೋಲೀಸ್ ಡಿಪಾರ್ಟ್‌ಮೆಂಟ್‌ನಲ್ಲಿ ಇಲ್ಲ. 1956ನೇ ಇಸವಿಯಲ್ಲಿ ತೀರ್ಥಹಳ್ಳಿಯಲ್ಲಿರುವ ಜನಸಂಖ್ಯೆಗೆ ಅನುಗುಣವಾಗಿ 26

ಪೊಲೀಸರನ್ನು ಏನು ಕೊಟ್ಟಿದ್ದಾರೆ, ಅದು ಇವತ್ತು ಒಂದೂವರೆ ಲಕ್ಷ ಜನ ಆದರೂ ಅಷ್ಟೇ ಇರತಕ್ಕಂಥದ್ದು. ಇದು ವಾಸ್ತವ ಚಿತ್ರಣ. ಇಷ್ಟು ಹುದ್ದೆ ಖಾಲಿ, ಅದನ್ನು ನಾವು ಭರ್ತಿ ಮಾಡುತ್ತೇವೆಂದು ಮೊದಲೇ ಹೇಳಬೇಕಾಗಿತ್ತು. 58 ರಿಂದ 60ನೇ ವಯಸ್ಸಿಗೆ ನೀವು ಹೆಚ್ಚಿಗೆ ಮಾಡಿದಿರಿ. ನನಗನ್ನಿಸತಕ್ಕಂಥದ್ದು, ಎಲ್ಲೋ ಒಂದು ಕಡೆಗೆ ಈ 2 ವರ್ಷಗಳಲ್ಲಿ pension ಹಣ ಉಳಿಸುವುದಕ್ಕೆ ಮಾಡಿರತಕ್ಕಂಥ ಒಂದು ಆರ್ಥಿಕ ನೀತಿ ಇದು ಎಂದು ತೋರುತ್ತದೆ. ಬಹುಶಃ ಎರಡೂವರೆ ವರ್ಷಗಳಲ್ಲಿ ಯಾರ್ಯಾರು retire ಆಗುತ್ತಾರೆ, ಅವರ pension ಹಣದಲ್ಲಿ ನಾವು ಅಭಿವೃದ್ಧಿ ಮಾಡುತ್ತೇವೆ ಎಂದು ಯೋಚನೆ ಮಾಡಿದ್ದೀರಿ. ನಮಗೆ ಕೆಲಸ ಕೊಡಿ ಎಂದು ಇವತ್ತು ಅಂಗನವಾಡಿ ಕಾರ್ಯಕರ್ತರು strike ಮಾಡುತ್ತಿದಾರೆ. ನಮಗೆ ಕೆಲಸ ಕೊಡಿ ಎಂದು ಯುವಕರು ಬಂದು ನಮಗೆ ಅರ್ಜಿ ಕೊಡುತ್ತಾರೆ. ಕಳೆದ 15–30 ದಿವಸಗಳಿಂದ ವಿಧಾನಸೌಧದ ಇಡೀ corridor ನಲ್ಲಿ ನಾನು ಓಡಾಡುತ್ತಿದ್ದೇನೆ. 58ರಿಂದ 60 ವರ್ಷ ಮಾಡಿ ಎಂದು ಯಾರೊಬ್ಬರೂ ಕೂಡ ಹೇಳುತ್ತಿಲ್ಲ. 55 ವರ್ಷವಾದವರೂ ಸಹ ಹೇಳುವುದಿಲ್ಲ. ಒಂದು ಸಲ retirement ಮಾಡಿದರೆ ಸಾಕು ನಾನು ಮನೆಗೆ ಹೋಗುತ್ತೇನೆಂದು ಹೇಳತಕ್ಕಂಥವರೇ ಇಲ್ಲಿಯವರೆಗೆ ನನಗೆ ಸಿಕ್ಕಿರುವುದು. ಒಬ್ಬರೂ ಸಹ ಇದನ್ನು ಮುಂದುವರಿಸಿ ಎಂದು ಹೇಳತಕ್ಕಂಥವರಿಲ್ಲ. ಆದರೂ ನಾನು ಹೇಳುತ್ತೇನೆ, ಎಲ್ಲೋ ಒಂದು ಕಡೆ, ನೀವು 10 ಲಕ್ಷ ಜನರಿಗೆ ಉದ್ಯೋಗ ಕೊಡುತ್ತೇವೆಂದು ಹೇಳಿ, 60 ವರ್ಷ ಮಾಡಿ ಇರುವ ಮುದುಕರನ್ನೆಲ್ಲ ತೆಗೆದುಕೊಂಡರೆ ಸರಿಯೇ? ನಾವೂ ಆ stage ಗೆ ಬಂದಿರಬಹುದು. ಆದರೆ, ಎಷ್ಟೋ ಜನ ಯುವಕರಿಗೆ ಅನ್ಯಾಯವಾಗುತ್ತಿದೆ. ಅದನ್ನು ತಡೆಗಟ್ಟುವುದಕ್ಕೆ ಬಜೆಟ್‌ನಲ್ಲಿ ಏನು ಉತ್ತರವಿದೆ? ನಾನು ಗಣಿತದಲ್ಲಿ ಬಹಳ ಹಿಂದೆ ಇದ್ದೇನೆ. ಆದರೆ, ನಾನು ಲೆಕ್ಕಾಚಾರ ಮಾಡಿದೆ. ಮಾನ್ಯ ಯಡಿಯೂರಪ್ಪನವರು ಮಂಡಿಸಿದ ಆಯವ್ಯಯದಲ್ಲಿ ಓದಿ ನೋಡಿದೆ. 40 ಸಾವಿರ ರೂಪಾಯಿಗಳಲ್ಲಿ ಆಶ್ರಯ ಮನೆ ಕೊಡುತ್ತೇವೆಂದು ಹೇಳಿದ್ದಾರೆ. ಎಷ್ಟು ಮನೆಗಳನ್ನು ಕೊಡುತ್ತೀರಿ ಎನ್ನುವುದನ್ನು ನೀವು ಹೇಳಬೇಕು. ನೀವು 5 ವರ್ಷಗಳಲ್ಲಿ 15 ಲಕ್ಷ ಮನೆಗಳನ್ನು ಕೊಡುತ್ತೇವೆಂದು ಹೇಳಿದ್ದೀರಿ. ನೀವು 5 ವರ್ಷಗಳಲ್ಲಿ 15 ಲಕ್ಷ ಮನೆಗಳನ್ನು ಕೊಡುವುದಾದರೆ ವರ್ಷಕ್ಕೆ 2.5 ಲಕ್ಷ ಮನೆಗಳನ್ನು ಕೊಡಬೇಕಾಗುತ್ತದೆ. ವರ್ಷಕ್ಕೆ ಎರಡೂವರೆ ಸಾವಿರ ಮನೆಗಳನ್ನು ಕಟ್ಟಿಕೊಡುವುದಾದರೆ ನಿಮಗೆ ವರ್ಷಕ್ಕೆ 10 ಸಾವಿರ ಕೋಟಿ ರೂಪಾಯಿಗಳು ಬೇಕಾಗುತ್ತದೆ. ಇನ್ನು ನೀರಾವರಿ ಯೋಜನೆಗೆ ಹಂಚಿರತಕ್ಕಂಥ ಹಣವೆಷ್ಟು? ನೀವು 2005 ರಿಂದ ಏನು ಹಣ ಕೊಟ್ಟಿದ್ದೀರಿ ಎನ್ನುವುದನ್ನು ಲೆಕ್ಕ ಮಾಡಿ ನೋಡಿದೆ. 2004ರಲ್ಲಿ ಮಾನ್ಯ ಸಿದ್ದರಾಮಯ್ಯನವರು ಆರ್ಥಿಕ ಮಂತ್ರಿಯಾಗಿದ್ದಾಗ allot

ಮಾಡಿರುವುದನ್ನು ಹೇಳುತ್ತೇನೆ. Agriculture ಗೆ 6.76% ನೀರಾವರಿಗೆ 24% ವ್ಯಯ ಮಾಡಿದ್ದಾರೆ. ನಂತರ 2005-06ರಲ್ಲಿ ಮಾನ್ಯ ಸಿದ್ದರಾಮಯ್ಯನವರು ಆರ್ಥಿಕ ಮಂತ್ರಿಯಾಗಿ ಮಂಡಿಸಿದ ಆಯವ್ಯಯದಲ್ಲಿ 6.33% agriculture ಗೆ ಮತ್ತು ನೀರಾವರಿಗೆ 29% ವ್ಯಯ ಮಾಡಿದ್ದಾರೆ.

ಅಧ್ಯಕ್ಷರು: ಕಿಮ್ಮನೆ ರತ್ನಾಕರ್‌ರವರೆ ಬೇಗ ಮುಗಿಸಿ. Time limit ಹಾಕಿದ್ದೇನೆ. 5 ನಿಮಿಷದಲ್ಲಿ ಮುಗಿಸಬೇಕು. ನೀವು ಒಂದು Subject ಅನ್ನು ತೆಗೆದುಕೊಂಡು cover ಮಾಡಿ ಎಲ್ಲವನ್ನು cover ಮಾಡುವುದಕ್ಕಾಗುವುದಿಲ್ಲ.

ಶ್ರೀ ಕಿಮ್ಮನೆ ರತ್ನಾಕರ: ಅದೇ ನಮ್ಮ ಉಪಮುಖ್ಯಮಂತ್ರಿಯವರು ಹಿಂದಿನ ಸಲ ಅಂದರೆ 2006-07ರಲ್ಲಿ ಏನು ಬಜೆಟ್ ಮಂಡನೆ ಮಾಡಿದ್ದಾರೆ, ನಾನು ಏಕೆ ಹೇಳುತ್ತಿದ್ದೇನೆಂದರೆ, ರೈತರ ಮೇಲೆ ಪ್ರಮಾಣ ಮಾಡಿ 29% ನಿಂದ 19% ಗೆ ಇಳಿಸಿರತಕ್ಕಂಥದ್ದು ಖಂಡಿತವಾಗಿಯೂ ಎಲ್ಲೋ ಒಂದು ಕಡೆ ರೈತರಿಗೆ ಮಾಡಿರುವ ಅನ್ಯಾಯ ಎಂದು ಹೇಳಬಯಸುತ್ತೇನೆ.

ಅಧ್ಯಕ್ಷರು: ಯಾವುದಾದರೂ ಒಂದು Subject ತೆಗೆದುಕೊಂಡು ಹೇಳಬೇಕು. ಎಲ್ಲವನ್ನೂ ಹೇಳುವುದಕ್ಕಾಗುವುದಿಲ್ಲ. ಇವತ್ತು timelimit ಇರುವುದರಿಂದ ಆಗುವುದಿಲ್ಲ. ಬೇರೆ time ನಲ್ಲಿ ನಾನು definite ಆಗಿ ಅವಕಾಶ ಕೊಡುತ್ತಿದ್ದೆ. ಆದರೆ, ಇವತ್ತು time limit ಇರುವುದರಿಂದ ಆ ರೀತಿ ನಾನು restriction ಹಾಕುತ್ತಿದ್ದೇನೆ.

ಶ್ರೀ ಕಿಮ್ಮನೆ ರತ್ನಾಕರ: ಬಹಳ ಪ್ರಮುಖವಾಗಿರುವ ಒಂದೇ ಒಂದು ವಿಚಾರವನ್ನು ಹೇಳಿಬಿಡುತ್ತೇನೆ. ನಮ್ಮ ಕ್ಷೇತ್ರಕ್ಕೆ ಸಂಬಂಧಪಟ್ಟಿರುವುದರಲ್ಲಿ ಅನೇಕ ವಿಚಾರಗಳಿವೆ. ಕಳೆದ ಸಲ ಸರ್ಕಾರದವರು 135 Degree College ಗಳಿಗೆ ಅನುಮತಿ ಕೊಟ್ಟಿದ್ದಾರೆ. ಮತ್ತೂ ಕೂಡ ಕೊಡುತ್ತೇವೆನ್ನುವ ಮಾತು ಹೇಳಿದ್ದಾರೆ. ಆದರೆ, ವಾಸ್ತವದಲ್ಲಿ ಏನಾಗಿದೆ? ತೀರ್ಥಹಳ್ಳಿಯಲ್ಲಿ ಒಂದು Degree College ಇದೆ. 200 ಜನ ಮಕ್ಕಳು admission ಆಗಿದ್ದಾರೆ, ಅವರಿಗೆ ಕೊಠಡಿಗಳಿಲ್ಲ. Teachers ಇಲ್ಲ, ನಾವು ಅಲ್ಲಿ ಹಣ ಸಮಗ್ರಹಣೆ ಮಾಡುತ್ತಿದ್ದೇವೆ. ಅವರು ನಮ್ಮ ಮನೆ ಮುಂದೆ strike ಮಾಡುತ್ತಿದ್ದಾರೆ. ಆದ್ದರಿಂದ, ನೀವು infrastructure ಇಲ್ಲದೆಯೇ ಆಶ್ವಸನೆಗಳನ್ನು ಕೊಟ್ಟುಕೊಂಡು ಹೋಗುವುದರಿಂದ ಏನೂ ಉಪಯೋಗವಿಲ್ಲ. ಜೊತೆಗೆ ಬಹಳ ಮುಖ್ಯವಾಗಿರುವುದು, ನಮ್ಮಲ್ಲಿ ಅಭಿವೃದ್ಧಿ ಕೆಲಸಗಳೇನಿವೆ ಅದರ ಬಗ್ಗೆ ಮುಖ್ಯಮಂತ್ರಿಗಳಲ್ಲಿ ವಿನಂತಿಸುವುದೇನೆಂದರೆ, ತೀರ್ಥಹಳ್ಳಿಯಲ್ಲಿ ದೊಡ್ಡ ಸಮಸ್ಯೆಯಾಗಿದೆ. ನಾನು ಈಗಾಗಲೇ ಮಾನ್ಯ ಮುಖ್ಯಮಂತ್ರಿಯವರಿಗೆ ಹಲವಾರು ಅಭಿವೃದ್ಧಿ ಕೆಲಸಗಳ ಬಗ್ಗೆ, ಕಾಮಗಾರಿಗಳ ಬಗ್ಗೆ

ಮನವಿ ಮಾಡಿದ್ದೇನೆ. ಅಲ್ಲಿ ದೊಡ್ಡ ಸಮಸ್ಯೆ ನಿರ್ಮಾಣವಾಗಿದೆ. ತೀರ್ಥಹಳ್ಳಿಯಲ್ಲಿ ಮಾಜಿ ಶಾಸಕರೊಬ್ಬರು ಬಂದು ನಾನು 10 ಲಕ್ಷ ರೂಪಾಯಿಗಳನ್ನು ಮಂಜೂರು ಮಾಡಿಸಿದ್ದೇನೆಂದು ಹೇಳುತ್ತಾರೆ. ನಾನು ಅವರ ಹೆಸರು ಹೇಳುವುದಿಲ್ಲ.

ಅಧ್ಯಕ್ಷರು: ನೀವು ಈ ಬಜೆಟ್ ಮೇಲೆ ಮಾತನಾಡಿ. ಹೀಗೆ ಬೇರೆ ಬೇರೆ ವಿಷಯ ಪ್ರಸ್ತಾಪ ಮಾಡಿದರೆ ಮತ್ತೆ diversion ಆಗುತ್ತದೆ. ನಿಮಗೆ ಬೇಕಾದ್ದನ್ನು ಬೇಗ ಹೇಳಿಬಿಡಿ. ಇದರಿಂದಲೇ ಸಮಸ್ಯೆ ಬರುವುದು. ಮಾಜಿ ಶಾಸಕರು, ಮಾಜಿ ಎಂ.ಪಿ.ಗಳು ಎಂದು ಬೇರೆ ಬೇರೆ ಹೆಸರುಗಳನ್ನು ಪ್ರಸ್ತಾಪಿಸಿದರೆ ಮತ್ತೆ ಗದ್ದಲ ಪ್ರಾರಂಭವಾಗುತ್ತದೆ.

ಶ್ರೀ ಡಿ.ಕೆ.ಶಿವಕುಮಾರ್: ಅವರು ಹೊಸದಾಗಿ ಆರಿಸಿ ಬಂದಿದ್ದಾರೆ. ರಾಜಕೀಯದಲ್ಲಿ ಸ್ವಲ್ಪ ಚಪಲ ಇರುತ್ತದೆ. ನೀವೇಕೆ ಗಾಬರಿ ಮಾಡಿಕೊಳ್ಳುತ್ತೀರಿ?

ಶ್ರೀ ಕಿಮ್ಮನೆ ರತ್ನಾಕರ್: ನಾನು ಯಾರ ಹೆಸರೂ ಹೇಳುತ್ತಿಲ್ಲ. ಮಾನ್ಯ ಮುಖ್ಯಮಂತ್ರಿಯವರಲ್ಲಿ ವಿನಂತಿಸುವುದೇನೆಂದರೆ, ಕ್ಷೇತ್ರದ ಅಭಿವೃದ್ಧಿ ಸಮಸ್ಯೆ ಬಂದಾಗ ಯಾರಾದರೂ ಮನವಿ ಕೊಟ್ಟರೆ ಅದನ್ನು ನಮಗೂ ಕೂಡ ತಳಿಸಬೇಕು. ಎಲ್ಲೋ ಒಂದು ಕಡೆ ಅನಾವಶ್ಯಕವಾದ ಘರ್ಷಣೆಗಳು ಊರಿನಲ್ಲಿ ನಡೆಯುತ್ತವೆ. ನಮಗೆ ಗೊತ್ತಿಲ್ಲದ ಹಾಗೆ ಅವರು ಹೋಗಿ, ನಾನು ಹೋಗಿ ಮಾಡಿಸಿಕೊಂಡು ಬಂದಿದ್ದೇನೆ ಎಂದು ಇವರು ಹೇಳುತ್ತಾರೆ. ಸದಸ್ಯರೊಬ್ಬರು ತಮಗೆ ಆಗಿರುವ ನೋವನ್ನು ಹೇಳಿದರು. ಅವರಿಗೆ ಆಗಿರುವ ನೋವು ನಮಗೂ ಆಗಲಿಕ್ಕೆ ಅವಕಾಶ ಕೊಡಬಾರದು. ಏಕೆಂದರೆ, ನಾನೂ ವಿನಂತಿಸಿದ್ದೇನೆ. ಅಂಥ ಸಮಸ್ಯೆಗಳು ಉದ್ಭವವಾದರೆ ಖಂಡಿತವಾಗಿಯೂ ಕಷ್ಟವಾಗುತ್ತದೆ. ನಾನು ಒಂದು ವಿಚಾರವನ್ನು ಹೇಳುತ್ತೇನೆ. ಯಾವುದೇ ಕಾನೂನು, ನಿಯಮಗಳನ್ನು ನಾವೇನು ಮಾಡಿಕೊಂಡಿದ್ದೇವೆಯೋ, ಅವು ಆಕಾಶದಿಂದ ಕೆಳಗೆ ಬಿದ್ದಿಲ್ಲ. ಅವುಗಳು ಸಂಪ್ರದಾಯಗಳು. ಅವುಗಳನ್ನು ನಾವೇ ನಮಗಾಗಿ ನಿರ್ಮಿಸಿಕೊಂಡಿದ್ದೇವೆ. ಬೇಕಾದರೆ, ಇನ್ನೂ 10 ದಿವಸ ಚರ್ಚೆ ಮಾಡೋಣ. ಆದರೆ, ಎಲ್ಲ ಸದಸ್ಯರಿಗೆ ಮಾತನಾಡಲು ಅವಕಾಶವಿಲ್ಲದಿದ್ದರೆ ಹೇಗೆ? ಈ ಸಲ 90 ಜನ ಶಾಸಕರು ಹೊಸದಾಗಿ ಆರಿಸಿ ಬಂದಿದ್ದೇವೆ. ನಮಗೆಲ್ಲ ಅವಕಾಶವಿಲ್ಲದೆ ಇಲ್ಲಿ ಆತುರದಲ್ಲಿ ಮಾಡಿದರೆ ಯಾವುದೇ ನ್ಯಾಯ ದೊರಕಿಸಲಿಕ್ಕೆ ಆಗುವುದಿಲ್ಲ. ಇವತ್ತು ನಾವು ಕಾನೂನನ್ನು ಅರ್ಥ ಮಾಡಿಕೊಳ್ಳಬೇಕಾಗುತ್ತದೆ, ಅಧ್ಯಯನ ಮಾಡಬೇಕಾಗುತ್ತದೆ.

(ಗೊಂದಲ)

ಅಧ್ಯಕ್ಷರು: ಕರಡಿ ಸಂಗಣ್ಣನವರೆ, ತಾವು ಮಾತನಾಡಿ.(ಗೊಂದಲ) ಆಯಿತು ಬಿಡಿ. ನಾನು close ಮಾಡುತ್ತೇನೆ. ಎಲ್ಲರಿಗೂ ಅವಕಾಶ ಕೊಡಲಿಕ್ಕಾಗುವುದಿಲ್ಲ. (ಗೊಂದಲ) BAC meeting ನಲ್ಲಿ decision ಆಗಿದೆ. I will close it.

(ಗೊಂದಲ)

ಶ್ರೀ ಡಿ.ಕೆ.ಶಿವಕುಮಾರ್: ವಾಟಾಳ್ ನಾಗರಾಜ್‌ರವರ ಜಾಗಕ್ಕೆ ಅವರು ಬಂದಿದ್ದಾರೆ. (ಗೊಂದಲ) ಅವರಿಗೆ ಹಿಂದೆ 4 ಗಂಟೆ ಕಾಲ ಅವಕಾಶ ಕೊಟ್ಟಿದ್ದಾರೆ.

ಅಧ್ಯಕ್ಷರು: ಇವತ್ತು ಆಗುವುದಿಲ್ಲ. ಮತ್ತೊಂದು ಸಲ ಅವಕಾಶ ಕೊಡುತ್ತೇನೆ. special ಆಗಿ ನಾಳೆ ಬೇಕಾದರೆ ಮಾತನಾಡಲಿ. ನಾಳೆ ಬೇಕಾದರೆ ಅವರು ಬೇರೆ subject ಮೇಲೆ ಮಾತಸಾಡಲಿ. (ಗೊಂದಲ) ಇಲ್ಲ, ಆಗುವುದಿಲ್ಲ, please ನಾನು ಈಗ close ಮಾಡುತ್ತೇನೆ. ಕರಡಿ ಸಂಗಣ್ಣನವರೆ ನೀವು ಮಾತನಾಡಿ. (ಗೊಂದಲ) ಇಲ್ಲ ಆಗುವುದಿಲ್ಲ. please ನಾನು close ಮಾಡುತ್ತೇನೆ.

ಶ್ರೀ ದಿನೇಶ್ ಗುಂಡೂರಾವ್: ಒಂದೇ ಒಂದು point ಇದೆ.

ಶ್ರೀ ಕೆ.ಎಂ. ಕೃಷ್ಣಮೂರ್ತಿ: ನಾವು ಕೇಳುತ್ತಲೇ ಇದ್ದೇವೆ. ನಮ್ಮ ಕೂಗು ನಿಮಗೆ ಕೇಳಿಸುವುದೇ ಇಲ್ಲವಲ್ಲ.

ಅಧ್ಯಕ್ಷರು: ಕೇಳಿಸುತ್ತದೆ.ಏನು ಮಾಡುವುದು? Time ಇಲ್ಲವಲ್ಲ.(ಗೊಂದಲ)

ಶ್ರೀ ದಿನೇಶ್ ಗುಂಡುರಾವ್: ಇಂದು ವಿಧಾನಸಭಾ ಕಲಾಪದ ಕೊನೆಯ ದಿವಸ. 8ನೇ ತಾರೀಖಿನವರೆಗೂ ಅಧಿವೇಶನ ನಡೆಸಬೇಕಾಗಿತ್ತು. (ಗೊಂದಲ)

ಶ್ರೀ ಮಲ್ಲಿಕಾರ್ಜುನ ಖರ್ಗೆ: ಊಟ ಆದ ಮೇಲೆ ಎಲ್ಲರಿಗೂ ಐದೈದು ನಿಮಿಷ ಮಾತನಾಡಲು ಅವಕಾಶ ಕೊಡಿ. 4 ಗಂಟೆಗೆ ಸಿ.ಎಂ.ರವರು ಉತ್ತರ ಕೊಡಲಿ.

ಅಧ್ಯಕ್ಷರು: No, no.

ಶ್ರೀ ಮಲ್ಲಿಕಾರ್ಜುನ ಖರ್ಗೆ: ಇಲ್ಲದಿದ್ದರೆ ಈಗಲೇ ಕೊಡಿಸಿ. ಮತ್ತೇನು ಮಾಡುತ್ತೀರಿ?

ಅಧ್ಯಕ್ಷರು: No, no. I will not allow.

ಶ್ರೀ ಮಲ್ಲಿಕಾರ್ಜುನ ಖರ್ಗೆ: ಮಾತನಾಡಲು ಅವರಿಗೆ ಐದೈದು ನಿಮಿಷ ಅವಕಾಶ ಕೊಡಿ.

ಅಧ್ಯಕ್ಷರು: ಅವರೆಲ್ಲರೂ ಐದೈದು ನಿಮಿಷಗಳಲ್ಲಿ ಮಾತನಾಡುವುದಿಲ್ಲ. ಎಲ್ಲರೂ 10 ರಿಂದ 15 ನಿಮಿಷದವರೆಗೆ ಮಾತನಾಡುತ್ತಾರೆ.Restriction ಹಾಕಿಕೊಂಡರೆ ಅಡ್ಡಿಯಿಲ್ಲ. ಅವರು restriction ಹಾಕಿಕೊಳ್ಳುತ್ತಿಲ್ಲ. ಎಲ್ಲರೂ

ಬಜೆಟ್‌ನಲ್ಲಿ ಎಲ್ಲಾ ಇಲಾಖೆಗಳ ಬಗ್ಗೆಯೂ ಮಾತನಾಡಬೇಕೆನ್ನುತ್ತಾರೆ. ನೀವು ಹೇಳುವುದನ್ನು ಒಪ್ಪಿಕೊಳ್ಳುತ್ತೇನೆ ಆದರೆ, ಸಮಯ ಇಲ್ಲ.

ಶ್ರೀ ಮಲ್ಲಿಕಾರ್ಜುನ ಖರ್ಗೆ: ನಿಮಗೆ ಗೊತ್ತಿದ್ದ ಹಾಗೆ ಎಲ್ಲರೂ 10 ನಿಮಿಷದ ಒಳಗೆ ಮಾತನಾಡಿ ಮುಗಿಸುತ್ತಾರೆ.

ಅಧ್ಯಕ್ಷರು: ಇಲ್ಲ, ಅಷ್ಟು ಸಮಯದ ಒಳಗೆ ಮಾತನಾಡುವುದಿಲ್ಲ. ಎಲ್ಲರೂ ಕುಳಿತುಕೊಳ್ಳಿ, ಕರಡಿ ಸಂಗಣ್ಣನವರೆ ಮಾತನಾಡಿ. (ಗೊಂದಲ)5 minutes limit ಹಾಕಿಕೊಂಡರೆ ಅಡ್ಡಿಯಿಲ್ಲ. ಆದರೆ, ನೀವು 5 minutes limit ಹಾಕಿಕೊಳ್ಳುವುದಿಲ್ಲ. please, ಕುಳಿತುಕೊಳ್ಳಿ. (ಗೊಂದಲ) ಇದರಲ್ಲಿಯೇ ಸುಮ್ಮನೆ time waste ಆಗುತ್ತದೆ.

(ಗೊಂದಲ)

ಶ್ರೀ ಕಟ್ಟಾ ಸುಬ್ರಹ್ಮಣ್ಯ ನಾಯ್ಡು (ಅಬಕಾರಿ, ಐಟಿ, ಬಿಟಿ, ವಿಜ್ಞಾನ ಮತ್ತು ತಂತ್ರಜ್ಞಾನ, ಜಲಮಂಡಳಿ ಸಚಿವರು): ನಿನ್ನೆ, ಮೊನ್ನೆ ಬಜೆಟ್ ಮೇಲೆ ಯಾರೂ ಮಾತನಾಡಲಿಲ್ಲ.

(ಗೊಂದಲ)

ಅಧ್ಯಕ್ಷರು: please, ಎಲ್ಲರೂ ಕುಳಿತುಕೊಳ್ಳಿ. ಕರಡಿ ಸಂಗಣ್ಣನವರೆ ತಾವು ಮುಂದುವರೆಸಿ. please ಕುಳಿತುಕೊಳ್ಳಿ. (ಗೊಂದಲ) ಕರಡಿ ಸಂಗಣ್ಣನವರೆ 5 ನಿಮಿಷಗಳಲ್ಲಿ ಮಾತನಾಡಿ ಮುಗಿಸಿ. ಎಲ್ಲಾ ಇಲಾಖೆಗಳ ಬಗ್ಗೆ ಮಾತನಾಡಬೇಡಿ. ಒಂದು subject ಮೇಲೆ ಮಾತನಾಡಿ.

ಶ್ರೀ ಕರಡಿ ಸಂಗಣ್ಣ ಅಮರಪ್ಪ (ಕೊಪ್ಪಳ): ಮಾನ್ಯ ಅಧ್ಯಕ್ಷರೆ, ಎಲ್ಲಾ ಇಲಾಖೆಗಳ ಬಗ್ಗೆ ನಾನು ಪ್ರಸ್ತಾಪಿಸದೆ, ನನ್ನ ಜಿಲ್ಲೆಗೆ ಸಂಬಂಧಿಸಿದಂತೆ 2–3 ವಿಷಯಗಳನ್ನು ಪ್ರಸ್ತಾಪಿಸುತ್ತೇನೆ. ತಾವು 2008–09ನೇ ಸಾಲಿನ ಆಯವ್ಯಯದ ಮೇಲೆ ಮಾತನಾಡಲು ನನಗೆ ಅವಕಾಶ ಕೊಟ್ಟಿದ್ದಕ್ಕೆ ಮೊದಲನೆಯದಾಗಿ ತಮಗೆ ಅಭಿನಂದನೆ ಸಲ್ಲಿಸುತ್ತೇನೆ. ಹೊಸ ಸರ್ಕಾರ ಬಂದ ನಂತರ ದಕ್ಷಿಣ ಭಾರತದ ಇತಿಹಾಸದಲ್ಲಿಯೇ ನವಯುಗದ ಆರಂಭವಾಗುತ್ತದೆನ್ನುವ ಪರಿಕಲ್ಪನೆಯ ಮೇಲೆ ಮಾನ್ಯ ಮುಖ್ಯಮಂತ್ರಿಯವರು ಈ ಆಯವ್ಯಯವನ್ನು ಮಂಡಿಸಿದ್ದಾರೆ. ನಾನು ನೀರಾವರಿ ವಿಚಾರವಾಗಿ ಹೇಳಬಯಸುತ್ತೇನೆ. ಅವರು ನೀರಾವರಿಗೆ 3468.75 ಕೋಟಿ ರೂ. ಕೊಟ್ಟಿದ್ದಾರೆ. ಅಂದರೆ ಶೇಕಡ 13.37 ಏನಿದೆ, ಅದರ ಪ್ರಕಾರ ನಮಗೆ ಬಚಾವತ್ ಆಯೋಗದ ಪ್ರಕಾರ 729 ಟಿಎಂಸಿ ನೀರನ್ನು ನಾವು ಬಳಕೆ ಮಾಡಿಕೊಳ್ಳಬೇಕಾಗಿತ್ತು. ಇದರಲ್ಲಿ ಉಳಿಕೆ 153 ಟಿ.ಎಂ.ಸಿ. ನೀರಿಗೆ time-bound ಮಾಡಿಕೊಂಡಿದ್ದೇವೆ, ಆ time-bound ಮುಗಿಯುತ್ತಿದೆ. 2000ನೇ ಇಸವಿಯಲ್ಲಿ

ಕರ್ನಾಟಕ ರಾಜ್ಯ ತನ್ನ ನೀರಿನ ಪಾಲನ್ನು ಪಡೆದುಕೊಳ್ಳಬೇಕಾಗಿತ್ತು. ನಾನು ಸರ್ಕಾರಕ್ಕೆ ಒತ್ತಾಯಿಸುತ್ತೇನೆ, ನೀರಾವರಿ ಇಲಾಖೆಗೆ ಕೊಡುವ ಹಣವನ್ನು ದ್ವಿಗುಣಗೊಳಿಸಬೇಕು. ಅದಕ್ಕನುಗುಣವಾಗಿ ಸಿಂಗಟಾಲೂರು ಯೋಜನೆ ಕೊಪ್ಪಳ, ರಾಯಚೂರು, ಗದಗ, ಬಳ್ಳಾರಿ ಈ 4 ಜಿಲ್ಲೆಗಳಿಗೆ ಅನ್ವಯಿಸುತ್ತದೆ. ಈ ಯೋಜನೆಗೆ 18.55 ಟಿ.ಎಂ.ಸಿ. ನೀರನ್ನು ಗುರುತಿಸಿದ್ದಾರೆ. ಅದನ್ನು ಬಳಕೆ ಮಾಡಿಕೊಳ್ಳಬೇಕಾದರೆ, ಈ ತರಹ ಹಣಕಾಸಿನ ನೆರವು ಕೊಟ್ಟರೆ ಆ ಯೋಜನೆ ಲಾಭ ಮತ್ತು ಕರ್ನಾಟಕದ ನೀರಿನ ಪಾಲನ್ನು ಪಡೆದುಕೊಳ್ಳಲಿಕ್ಕೆ ನಮಗೆ ಆಗುವುದಿಲ್ಲ. ಆ ದಿಶೆಯಲ್ಲಿ ಹಣ ದ್ವಿಗುಣಗೊಳಿಸಿ ಕನಿಷ್ಠ 6000 ಕೋಟಿ ರೂಪಾಯಿಗಳನ್ನಾದರೂ ಕೊಡುವುದಕ್ಕೆ ಅವರು ಪ್ರಯತ್ನ ಮಾಡಬೇಕೆಂದು ಒತ್ತಾಯಿಸುತ್ತೇನೆ. ಅದಲ್ಲದೆ, ವಿದ್ಯುಚ್ಛಕ್ತಿ ಅಂಗವಾಗಿ ರೈತರಿಗೆ ಉಚಿತ ವಿದ್ಯುತ್ ಕೊಡುತ್ತೇವೆಂದು ಹೇಳಿದ್ದಾರೆ. ಅದನ್ನು ನಾನು ಒಪ್ಪಿಕೊಳ್ಳುತ್ತೇನೆ ಮತ್ತು ಸ್ವಾಗತಿಸುತ್ತೇನೆ. ಇಲ್ಲಿ ನಮ್ಮ ವಿದ್ಯುತ್ ಉತ್ಪಾದನೆ ಬಹಳ ಕಡಿಮೆ ಇದೆ. ಹಾಗಾಗಿ, ಯಾವುದೇ ರೈತ ಕೂಡ ಹಣ ತುಂಬುವ ಕೆಲಸ ಮಾಡಿಲ್ಲ. ಆದರೆ, ನಾನು, ಅವರಲ್ಲಿ ಕೇಳಿಕೊಳ್ಳುವುದೇನೆಂದರೆ, ರೈತರು ಎಷ್ಟು ತೊಂದರೆಯಲ್ಲಿದ್ದಾರೆಂದರೆ, ಅನೇಕ ಅನಧಿಕೃತ ಪಂಪ್‌ಸೆಟ್ ಬಳಸುತ್ತಿದ್ದಾರೆ. ಅಲ್ಲಿ overload ಆಗಿ TCಗಳು burn ಆಗುತ್ತದೆ. TC burn ಆದ ಸಂದರ್ಭದಲ್ಲಿ ಅದನ್ನು ಸರ್ಕಾರದವರು replace ಮಾಡುತ್ತಾರೆ. ಒಂದು ಕಡೆ ಸರ್ಕಾರದ ಹಣ ಖರ್ಚಾಗುತ್ತದೆ. ಮತ್ತೊಂದು ಕಡೆ ರೈತನಿಗೆ ಆ ವಿದ್ಯುತ್ ಸೌಕರ್ಯ ಲಭಿಸುತ್ತಿಲ್ಲ. ಹಾಗಾಗಿ, ರೈತ ಸಂಪೂರ್ಣವಾಗಿ ನಾಶವಾಗುತ್ತಿದ್ದಾನೆ. ನಾನು ಈಶ್ವರಪ್ಪನವರಿಗೂ ಮನವಿ ಮಾಡುತ್ತೇನೆ. ಇವತ್ತು ಎಷ್ಟು ಅನಧಿಕೃತ ಪಂಪ್‌ಸೆಟ್‌ಗಳಿವೆ ಅವುಗಳನ್ನು regularize ಮಾಡಲಿಕ್ಕೆ ಏನಾದರೂ ಪ್ರಯತ್ನ ಮಾಡಿದರೆ ರೈತನಿಗೆ ಲಾಭವಾಗುತ್ತದೆ ಎಂದು ಈ ಸಂದರ್ಭದಲ್ಲಿ ಅವರ ಗಮನ ಸೆಳೆಯುತ್ತೇನೆ. ಅದಲ್ಲದೆ, 1000 ಮೆ.ವ್ಯಾ. ವಿದ್ಯುತ್ ಉತ್ಪಾದನೆ ಮಾಡುತ್ತೇವೆಂದು ಅದಕ್ಕೆ ಚಾಲನೆ ಕೊಡಿ. ಛತ್ತೀಸ್‌ಘಡದಲ್ಲಿ ಮಾಡುತ್ತಿರೋ ಮಾಡಿ. ಕರ್ನಾಟಕದಲ್ಲಿ ನಿಮಗೆ ಸಾಕಷ್ಟು ವಿದ್ಯುತ್ ಲಭ್ಯವಿದೆ. ಹಿಂದಿನ ಸರ್ಕಾರದಲ್ಲಿದ್ದ ರೇವಣ್ಣನವರು ಅನೇಕ ಕಾರ್ಯಕ್ರಮಗಳನ್ನು ಹಾಕಿ ಹೇಗೆ ಮಾಡಬೇಕೆಂಬ ಬಗ್ಗೆ ಗಮನ ಸೆಳೆಯುವ ಕೆಲಸ ಮಾಡಿದರು. ಅದಕ್ಕೆ ಒತ್ತು ಕೊಡುವ ಕೆಲಸವನ್ನು ತಾವು ಮಾಡುತ್ತೀರೆಂದು ಹೇಳಬಯಸುತ್ತೇನೆ, ಕೊಪ್ಪಳ ಜಿಲ್ಲೆ ರಚನೆಯಾಗಿ ಸುಮಾರು 10 ವರ್ಷಗಳಾಗುತ್ತಾ ಬಂದಿದೆ. ಕಳೆದ ಬಾರಿ 19 ಇಂಜಿನಿಯರಿಂಗ್ ಕಾಲೇಜನ್ನು ಪ್ರಾರಂಭ ಮಾಡಬೇಕೆಂದು ಸರ್ಕಾರದ ಉನ್ನತ ಮಟ್ಟದ ಅಧಿಕಾರಿಗಳು, ಪ್ರಧಾನ ಕಾರ್ಯದರ್ಶಿ, ಶಿಕ್ಷಣ ಇಲಾಖೆಯ ಉನ್ನತ ಅಧಿಕಾರಿಗಳಿಗೆ ಒಂದು proposal ಸಹ

ಕಳುಹಿಸಿದ್ದಾರೆ. ಅದರಲ್ಲಿ ಸುಮಾರು 19 ಕಾಲೇಜುಗಳನ್ನು ತೆರೆಯಬೇಕು, ಆ ಕಾಲೇಜುಗಳನ್ನು ತೆರೆಯುವುದರಿಂದ ನಾವೇನು ಒಂದು ಕಡೆ ಡಾ:ನಂಜುಡಪ್ಪನವರ ವರದಿಯ ಬಗ್ಗೆ ಮಾತನಾಡುತ್ತಾ ಇಂಬ್ಯಾಲೆನ್ಸ ಆಗಿದೆ ಅದನ್ನು ಸರಿಪಡಿಸಬೇಕೆಂದು ಹೇಳುತ್ತೇವೆ. ಕೊಪ್ಪಳ ಜಿಲ್ಲೆಯ ಬಗ್ಗೆ ಸೀಮಿತವಾಗಿ ಮಾತನಾಡುವುದಾದರೆ, ಅಲ್ಲಿಯ ಮಕ್ಕಳು ಉನ್ನತ ಶಿಕ್ಷಣವನ್ನು ಹೇಗೆ ಪಡೆಯುವುದಕ್ಕೆ ಸಾಧ್ಯವಿದೆ? ನಾನೊಂದು ಪ್ರಶ್ನೆ ಕೂಡ ಹಾಕಿದ್ದೆ ಅದಕ್ಕೆ ಉನ್ನತ ಶಿಕ್ಷಣ ಸಚಿವರು ಅದು ಉದ್ಭವಿಸುವುದಿಲ್ಲ ಎನ್ನುವ ಮಾತನ್ನು ಹೇಳಿದ್ದಾರೆ. ಹೀಗಾಗಿ ನಾನು ಕೇಳುವುದೇನೆಂದರೆ, ಸರ್ಕಾರದ ಮಟ್ಟದಲ್ಲಿ ಈ 19 ಕಾಲೇಜುಗಳನ್ನು ತೆರೆಯುವ ಪ್ರಸ್ತಾವನೆ ಇದೆ. ಒಂದು ಕಾಲೇಜಿಗೆ 32 ಕೋಟಿ ರೂಪಾಯಿ ಖರ್ಚಾಗುತ್ತದೆ ಎಂದು ಹೇಳಿದ್ದಾರೆ. ಒಂದು ಕಡೆ ನೀವು ಸೈಕಲ್ ಕೇಳಲಾರದಂಥ ಮಕ್ಕಳಿಗೆ 140 ಕೋಟಿ ಖರ್ಚು ಮಾಡಿ ಸೈಕಲ್ ಕೊಡುವುದಕ್ಕೆ ಖರ್ಚು ಮಾಡುತ್ತೀರಿ. 19 ಜಿಲ್ಲೆಗಳಲ್ಲಿ ಇಂಜಿನಿಯರಿಂಗ್ ಕಾಲೇಜುಗಳನ್ನು ತೆರೆಯುವುದಕ್ಕೆ ನೀವು ಏಕೆ ಮನಸ್ಸು ಮಾಡುತ್ತಿಲ್ಲ? ನೀವು ಒಂದು ಕಡೆ ನಮ್ಮದು ರೈತರ ಸರ್ಕಾರ ಎಂದು ಕರೆಯುತ್ತೀರಿ. ಒಂದು ಕಡೆ ಸಮಗ್ರ ಅಭಿವೃದ್ಧಿ ಮಾಡುತೇವೆಂದು ಹೇಳುತ್ತೀರಿ, ಮತ್ತೊಂದು ಕಡೆ ಗ್ರಾಮೀಣ ಪ್ರದೇಶದಲ್ಲಿರುವ ಮತ್ತು ನಗರ ಪ್ರದೇಶಗಳಲ್ಲಿರುವ ಬಡ ಮಕ್ಕಳಿಗೆ ಉನ್ನತ ಶಿಕ್ಷಣ ಕೊಡುತ್ತೇವೆಂದು ಹೇಳುವುದಾದರೆ, ನಮ್ಮ ಕೊಪ್ಪಳ ಜಿಲ್ಲೆಯಲ್ಲಿ ಹೊಸ ಇಂಜಿನಿಯರಿಂಗ್ ಕಾಲೇಜ್‌ನ್ನು ಪ್ರಾರಂಭಿಸುತ್ತೀರಾ ಎನ್ನುವ ಬಗ್ಗೆ ಮಾನ್ಯ ಮುಖ್ಯಮಂತ್ರಿಗಳು ಕೊಡುವ ಉತ್ತರದಲ್ಲಿ ಈ ವಿಚಾರ ಹೇಳುತ್ತಾರೆಂದು ನಾನು ಪ್ರಸ್ತಾಪಿಸಲಿಕ್ಕೆ ಬಯಸುತ್ತೇನೆ. ಸಮಾಜ ಕಲ್ಯಾಣ ಇಲಾಖೆಯ ಬಗ್ಗೆ ಸರ್ಕಾರದ ಗಮನ ಸೆಳೆಯುವುದಕ್ಕೆ ಬಯಸುತ್ತೇನೆ. ಅಲ್ಲಿ ಕೂಡ ಒಂದು ಪ್ರಸ್ತಾವನೆ ರೆಡಿ ಮಾಡಿದ್ದಾರೆ. ಕಾರ್ಯದರ್ಶಿಯವರು, ಜಿಲ್ಲಾ ಮಟ್ಟದಲ್ಲಿ. Boys and Girls ಗೆ ಸೇರಿದಂತೆ ಸುಮಾರು 58 ಹೊಸ ಕಾಲೇಜ್ ಹಾಸ್ಟೆಲ್‌ಗಳನ್ನು ಪ್ರಾರಂಭಿಸಬೇಕೆನ್ನುವ ವರದಿ ಕೊಟ್ಟಿದ್ದಾರೆ. ಇದರಿಂದಾಗಿ ಸುಮಾರು ಹತ್ತು ಸಾವಿರ ಮಕ್ಕಳಿಗೆ ಅನುಕೂಲವಾಗುತ್ತದೆ. ನಮ್ಮ ಕೊಪ್ಪಳ ಜಿಲ್ಲೆಯಲ್ಲಿಯೇ ನಮ್ಮ ಸಹೋದರರಾದ ಅಮರೇ ಗೌಡರವರು ಮತ್ತು ನಾವು ಮೊನ್ನೆ ನೋಡಿದಾಗ ಜಿಲ್ಲಾ ಮಟ್ಟದಲ್ಲಿಯೇ ಕಾಲೇಜ್ ಹಾಸ್ಟೆಲ್‌ಗಳಲ್ಲಿರುವ ಸುಮಾರು 200–300 ಮಕ್ಕಳು ಒಂದೊಂದು ಜಿಲ್ಲೆಯಲ್ಲಿ ಹೊರಗೆ ಉಳಿದಿದ್ದಾರೆ. ರಾಜ್ಯ ವ್ಯಾಪ್ತಿಯಲ್ಲಿ ನೋಡಿದರೆ ಸುಮಾರು ಹತ್ತು ಸಾವಿರ ಮಕ್ಕಳು ಘೊರಗೆ ಉಳಿದಿದ್ದಾರೆ. ಹಾಸ್ಟೆಲ್ ವ್ಯವಸ್ಥೆ ಮಾಡದಿದ್ದರೆ ಆ ಮಕ್ಕಳು ಉನ್ನತ ಶಿಕ್ಷಣ ಪಡೆಯಲಿಕ್ಕೆ ಆಗುವುದಿಲ್ಲ. ಸರ್ವಾಂಗೀಣ ಅಭಿವೃದ್ಧಿ ಶಿಕ್ಷಣದಿಂದ ಆಗಲಿಕ್ಕೆ ಸಾಧ್ಯವಿದೆ. ಆ ದಿಶೆಯಲ್ಲಿ ಸರ್ಕಾರದ ಗಮನ ನಾನು ಸೆಳೆಯುತ್ತೇನೆ. ಕನಿಷ್ಠ

ಪಕ್ಷ ಜಿಲ್ಲಾ ಮಟ್ಟದಲ್ಲಿ ಒಂದು Boys ಮತ್ತು ಒಂದು Girls ಕಾಲೇಜ್ ಹಾಸ್ಟೆಲ್‌ಗಳನ್ನು ಇದೇ ಸಾಲಿನಲ್ಲಿ ಪ್ರಾರಂಭಿಸಬೇಕಾಗಿದೆ ಎನ್ನುವ ಒತ್ತಾಯವನ್ನು ಮಾಡುತ್ತೇನೆ. ಕೈಗಾರಿಕೆಯ ಬಗ್ಗೆಯೂ ಒಂದು ಮಾತನ್ನು ಹೇಳುವುದಕ್ಕೆ ಬಯಸುತ್ತೇನೆ. ನಮ್ಮ ಕೊಪ್ಪಳ ಜಿಲ್ಲೆಯಲ್ಲಿ ಕೈಗಾರಿಕೆ ವಲಯದಲ್ಲಿ ಏನಾಗಿದೆ ಎಂದರೆ, ವಿಶೇಷವಾಗಿ ಕೊಪ್ಪಳ ನಗರದಲ್ಲಿ ಸಾಕಷ್ಟು ಉದ್ದಿಮೆಗಳು ಬಂದಿವೆ. ಒಂದೊಂದು ಗ್ರಾಮದಲ್ಲೂ ಉದಾಹರಣೆಗೆ ಹೇಳುವುದಾದರೆ, ಗಿಡದಾಳ ಮತ್ತು ಬಸಾಪುರ ಎನ್ನುವ ಗ್ರಾಮದ ಮುಂದುಗಡೆನೇ KIADB ನವರು ಅಕ್ವೈರ್ ಮಾಡಿಕೊಂಡಿದ್ದಾರೆ. ಅಂದರೆ, ಆ ಗ್ರಾಮಗಳಲ್ಲಿ ಮುಂದೆ ಪ್ರೌಢ ಶಾಲೆಯನ್ನು ಪ್ರಾರಂಭಿಸಬಹುದು. ಅಥವಾ ಜನಸಂಖ್ಯೆ ಹೆಚ್ಚಳವಾಗುವುದರಿಂದ ಮುಂದೆ ಮನೆಗಳನ್ನು ಕಟ್ಟಬಹುದು. ಸಾರ್ವಜನಿಕ ಕಾರ್ಯಕ್ರಮಗಳನ್ನು ಮಾಡಬೇಕಾದರೆ ಅಲ್ಲಿ ನಮಗೆ ಜಮೀನು ಇಲ್ಲದಿರುವ ವ್ಯವಸ್ಥೆಯಾಗಿದೆ. ಹೀಗಾಗಿ ನಾನೇನು ಸರ್ಕಾರದ ಗಮನ ಸೆಳೆಯುತ್ತೇನೆಂದರೆ, ಉದ್ದಿಮೆಗಳನ್ನು ಪ್ರಾರಂಭಿಸುವುದರ ಜೊತೆಗೆ ಕನಿಷ್ಠ ಪಕ್ಷ ಆ ಗ್ರಾಮಕ್ಕೆ ಇಷ್ಟು ಜಮೀನು ಬಿಡುತ್ತೇವೆ, ಅದಕ್ಕೆ ಮೂಲಭೂತ ಸೌಲಭ್ಯಗಳಿಗಾಗಿ ಕಾದಿರುಸುತ್ತೇವೆಂದು ಕಾನೂನಿನಲ್ಲಿ ತರತಕ್ಕಂಥದ್ದು ಬಹಳ ಸೂಕ್ತವಿದೆ. ಅನೇಕ ಗ್ರಾಮಗಳು ಇವತ್ತು ಪರಿಸರದಿಂದಾಗಿ ಹಾಳಾಗುತ್ತಿವೆ. ನಮ್ಮ ಭಾಗದಲ್ಲಿ ಬೆಳಗ್ಗೆ ಬಿಳಿ ಬಟ್ಟೆ ಹಾಕಿಕೊಂಡು ಹೋದರೆ ಸಂಜೆ ಬರುವಷ್ಟರಲ್ಲಿ ಕಪ್ಪು ಬಟ್ಟೆಯಾಗಿರುತ್ತದೆ. ಅಷ್ಟೊಂದು ಪರಿಸರ ಮಾಲಿನ್ಯವಾಗುತ್ತಿದೆ. ನದಿ ಪಕ್ಕದಲ್ಲಿಯೇ ಇಂಡಸ್ಟ್ರಿಗಳನ್ನು ಪ್ರಾರಂಭಿಸಿದ್ದಾರೆ. ಅವರು ವೇಸ್ಟ್ ನೀರನ್ನು ತುಂಗಭದ್ರಾ ನದಿಗೆ ಬಿಡುತ್ತಿದ್ದಾರೆ. ಇದರಿಂದಾಗಿ ಅಲ್ಲಿ ಆ ನೀರನ್ನು ಕುಡಿಯುತ್ತಿದ್ದಾರೆ ಮತ್ತು ಜಮೀನಿಗೂ ಕೂಡ ಆ ನೀರನ್ನು ಹರಿಸುತ್ತಿದ್ದಾರೆ. ಇದಕ್ಕೆ ನಿಯಂತ್ರಣ ಮಾಡುವುದಕ್ಕೆ ಕೈಗಾರಿಕೆಯ ಸಚಿವರು ಮತ್ತು ಮಾನ್ಯ ಮುಖ್ಯಮಂತ್ರಿಗಳು ಗಮನ ಹರಿಸಬೇಕೆಂದು ಒತ್ತಾಯ ಮಾಡುತ್ತೇನೆ. ಹಾಸ್ಟೆಲ್‌ಗಳನ್ನು ಪ್ರಾರಂಭಿಸುವುದಕ್ಕೆ ಮತ್ತು ಇಂಜಿನಿಯರಿಂಗ್ ಕಾಲೇಜ್‌ನ್ನು ಪ್ರಾರಂಭಿಸಲಿಕ್ಕೆ ನನ್ನ ಬಹಳ ಪ್ರಮುಖವಾದ ಒತ್ತಾಯವಿದೆ. ನನಗೆ ಇಷ್ಟು ಮಾತನಾಡಲಿಕ್ಕೆ ಅವಕಾಶ ಕೊಟ್ಟದ್ದಕ್ಕೆ ತಮಗೆ ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

ಡಾ: ಶರಣ ಪ್ರಕಾಶ್ ರುದ್ರಪ್ಪ ಪಾಟೀಲ್(ಸೇಡಂ): ಮಾನ್ಯ ಅಧ್ಯಕ್ಷರೆ, ನನಗೆ ಮಾತನಾಡಲು ಅವಕಾಶ ಕೊಟ್ಟಿದ್ದಕ್ಕೆ ತಮಗೆ ವಂದಿಸುತ್ತೇನೆ. ಈ ಸರ್ಕಾರ ಹೊಸದಾಗಿ ಬಂದ ಮೇಲೆ ಅವರು ಮಂಡಿಸಿರುವ ಆಯವ್ಯಯ ಮತ್ತು ಅವರ ಪ್ರಣಾಳಿಕೆ ಇದರ ಬಗ್ಗೆ ನಾವು ಬಹಳಷ್ಟು ಮಾತನಾಡಬಹುದು. ನೀವೇನು ಆಶ್ವಾಸನೆ ಕೊಟ್ಟಿದ್ದೀರಿ, ನೀವೇನು ಈ ಆಯವ್ಯಯದಲ್ಲಿ ಈಡೇರಿಸಿದಿರಿ ಎನ್ನುವುದರ ಬಗ್ಗೆ

ನಾವು ವಿಸ್ತರಣೆ ಮಾಡಿಕೊಂಡು ಹೋದರೆ ಇದಕ್ಕೆ ಎಷ್ಟು ಸಮಯ ಕೊಟ್ಟರೂ ಸಾಕಾಗುವುದಿಲ್ಲ. ಆದರೆ, ಸಮಯದ ಅಭಾವ ನೋಡಿಕೊಂಡು ಹೇಳುವುದಾದರೆ, ನಾನು ಇವತ್ತು ರಾಜಕೀಯವಾಗಿ ಮಾತನಾಡುವುದಕ್ಕೆ ಹೋಗುವುದಿಲ್ಲ.

ಅಧ್ಯಕ್ಷರು: ಹಾಗಾದರೆ ಉಳಿದ ದಿವಸ ತಾವು ರಾಜಕೀಯವಾಗಿ ಮಾತನಾಡುತ್ತೀರಾ?

ಡಾ: ಶರಣ ಪ್ರಕಾಶ್ ರುದ್ರಪ್ಪ ಪಾಟೀಲ್(ಸೇಡಂ): ಇವತ್ತು ನಾನು ಎಲ್ಲೆಲ್ಲಿ ಲೋಪದೋಷಗಳಿವೆ ಹಾಗೂ ಸಾರ್ವಜನಿಕ ಹಿತಾಸಕ್ತಿಗಾಗಿ ಏನೇನು ಮಾಡಬಹುದು ಅಂಥದಕ್ಕೆ ಮಾತ್ರ ನಾನು ಕೆಲವು ಸಲಹೆಗಳನ್ನು ಕೊಡಬಯಸುತ್ತೇನೆ. ಭಾರತೀಯ ಜನತಾ ಪಾರ್ಟಿಯವರ ಪ್ರಣಾಳಿಕೆಯಲ್ಲಿ ಅನ್ನ, ಅಕ್ಷರ ಮತ್ತು ಆರೋಗ್ಯ ಎನ್ನುವುದೇ ಮುಖ್ಯವಾದ ಆಶ್ವಾಸನೆಗಳಿದ್ದವು. ಆದರೆ, ಇದರಲ್ಲಿ ಮುಖ್ಯವಾಗಿ ಎರಡು ರೂಪಾಯಿಗೆ ಕೆ.ಜಿ. ಅಕ್ಕಿ ಕೊಡದೇ ಇರುವುದು ಬಹಳ ಅಕ್ಷಮ್ಯ ಅಪರಾಧ. ಇದನ್ನು ಅವರು ಹೇಗೆ ಸುಧಾರಿಸಿಕೊಳ್ಳುತ್ತಾರೋ ನನಗೆ ಗೊತ್ತಿಲ್ಲ. ಮುಂದಿನ ದಿನಗಳಲ್ಲಿ ಇದನ್ನು ಸರಿಪಡಿಸುವ ಕೆಲಸ ನೀವು ಮಾಡಬೇಕು. ಈಗ ನೀವು ಹೊಸದಾಗಿ ಯಾವ ಕಾಲೇಜುಗಳು, ಹೈಸ್ಕೂಲ್‌ಗಳು, ಡಿಗ್ರಿ ಕಾಲೇಜ್‌ಗಳನ್ನು ಕೊಡುತ್ತಿಲ್ಲ. ಇಂಜಿನಿಯರಿಂಗ್ ಕಾಲೇಜ್‌ನ್ನು ಪ್ರಾರಂಭಿಸುತ್ತಿಲ್ಲ. ಇವತ್ತು ನೀವೇನು ಅನುದಾನವನ್ನು ಶಿಕ್ಷಣಕ್ಕೆ ಕೊಡುತ್ತಿದ್ದೀರಿ, ಹೋದ ಸಾರಿಗಿಂತಲೂ ಈ ಸಾರಿ ಕಡಮೆ ಕೊಟ್ಟಿದ್ದೀರಿ. ಈ ರಾಜ್ಯದ ಜನರಿಗೆ ಆರೋಗ್ಯದ ಬಗ್ಗೆ ಬಿಜೆಪಿಯ ಪ್ರಣಾಳಿಕೆಯ ಮೊಟ್ಟ ಮೊದಲ ಪುಟದಲ್ಲಿ ಮೊದಲ ವಾಕ್ಯ ಏನಿದೆ ಎಂದರೆ, ನಾವು ಜನರ ಆರೋಗ್ಯವನ್ನು ಕಾಪಾಡುವ ರೀತಿಯಲ್ಲಿ ಬಿಪಿಎಲ್‌ನಲ್ಲಿ ಬರುವ ಎಲ್ಲಾ ಜನರಿಗೂ ಆರೋಗ್ಯ ವಿಮೆಯನ್ನು ತರುವುದು ನಿಮ್ಮ ಆಶ್ವಾಸನೆಯಾಗಿತ್ತು. ಆದರೆ, ಈ ಆಯವ್ಯಯದಲ್ಲಿ ಈ ಬಗ್ಗೆ ಯಾವುದೇ ಪ್ರಸ್ತವನೆಯಿಲ್ಲ. ಇದು ಬಹಳ ಮುಖ್ಯ. ಏಕೆಂದರೆ, ಗ್ರಾಮೀಣ ಪ್ರದೇಶದಲ್ಲಿರುವ ಬಿಪಿಎಲ್ ಜನರಿಗೆ ಹೊಸ ವಿಮೆ ತರುವುದು ಬಹಳ ಮುಖ್ಯ. ಈ ಯಶಸ್ವಿನಿ ಯೋಜನೆ ಏನು ಇದೆ ಇದನ್ನು ಬಿಪಿಎಲ್‌ನಲ್ಲಿ ಬರುವ ಎಲ್ಲರಿಗೂ ವಿಸ್ತರಿಸಬೇಕು. In the public interest ನಾನು ಈ ಮಾತನ್ನು ಹೇಳುತ್ತಿದ್ದೇನೆ. ಬಡವರ ಹಿತ ದೃಷ್ಟಿಯಿಂದ ನಾನು ಈ ಮಾತನ್ನು ಹೇಳುತ್ತಿದ್ದೇನೆ. ಇದಕ್ಕೇನೂ ಹೆಚ್ಚಿಗೆ ದುಡ್ಡು ಬೇಕಾಗುವುದಿಲ್ಲ. ಈಗೇನು ಯಶಸ್ವಿನಿ ಯೋಜನೆ ಅಡಿಯಲ್ಲಿ 130 ರೂಪಾಯಿಗಳನ್ನು ಜನರು ಕಟ್ಟುತ್ತಿದ್ದಾರೆ, ಸರ್ಕಾರವೇ ಬಿಪಿಎಲ್ ನಲ್ಲಿ ಬರುವ ಜನರಿಗೆ ಕಟ್ಟಿದರೂ ಸಹ ಸರ್ಕಾರದ ಮೇಲೆ 300-400 ಕೋಟಿಗಿಂತ ಜಾಸ್ತಿ ಭಾರ ಬೀಳುವುದಿಲ್ಲ. ನೀವು ಇಷ್ಟೇ ಹಣದಲ್ಲಿ ರಾಜ್ಯದಲ್ಲಿರುವ ಎಲ್ಲಾ ಬಿಪಿಎಲ್ ನಲ್ಲಿ ಬರುವ ಎಲ್ಲಾ ಬಡಜನರ ಆರೋಗ್ಯವನ್ನು ಕಾಪಾಡುವಂಥ ಕೆಲಸ

ನೀವು ಮಾಡಬೇಕಾಗಿತ್ತು. ಆದರೆ ನೀವು ಆ ಕೆಲಸವನ್ನು ಮಾಡುವುದರಲ್ಲಿ ವಿಫಲರಾಗಿದ್ದೀರಿ. ನೀವು ಈ ಬಿಪಿಎಲ್ ಕಾರ್ಡುಗಳ ಬಗ್ಗೆ ಹೇಳಿದಿರಿ. ಏನೆಂದರೆ, ನಾವು 11,000 ರೂ.ದಿಂದ 30,000 ರೂ ಮಿತಿಯವರೆಗೂ ಬಿಪಿಎಲ್ ಕಾರ್ಡು ವಿಸ್ತರಣೆ ಮಾಡುತ್ತೇವೆಂದು ಹೇಳಿದಿರಿ. ಅದನ್ನು ಮಾಡಿಲ್ಲ. ಸದನದಲ್ಲಿರುವ ಪ್ರತಿಯೊಬ್ಬ ಶಾಸಕರು ತಮ್ಮ ತಮ್ಮ ಮತಕ್ಷೇತ್ರಗಳಿಗೆ ಹೋದಾಗ ಮೊಟ್ಟಮೊದಲನೆ ಬೇಡಿಕೆ ಏನೆಂದರೆ, ಈ ಬಿಪಿಎಲ್ ಕಾರ್ಡಿನದು ಇರುತ್ತದೆ. ಸರಕಾರ ಇದರ ಬಗ್ಗೆ ಗಮನ ಕೊಟ್ಟಿಲ್ಲ, ಮುಂದಿನ ದಿನಗಳಲ್ಲಿ ನೀವು ಯಾವ ರೀತಿ ಮಾಡುತ್ತೀರೋ ನನಗೆ ಗೊತ್ತಿಲ್ಲ. ನಾನು ಮುಖ್ಯಮಂತ್ರಿಗಳಿಗೆ ಮನವಿ ಮಾಡುತ್ತೇನೆ. ಬಿಪಿಎಲ್ ಮಿತಿ ಏನು ಇದೆ ಇದನ್ನೂ 30-ಸಾವಿರಕ್ಕೆ ಏರಿಸಿ, ಯಾರ್‍ಯಾರು ಅರ್ಹರು ಇದ್ದಾರೆ ಅವರಿಗೆ ಬಿಪಿಎಲ್ ವ್ಯಾಪ್ತಿಗೆ ತರುವ ಕೆಲಸ ಖಂಡಿತವಾಗಿ ಮಾಡಬೇಕು. ನೀವು 10 ಹೆಚ್.ಪಿ. ಪಂಪ್ ಸೆಟ್‌ಗೆ ಉಚಿತ ವಿದ್ಯುತ್ ಕೊಡುತ್ತೀರಿ ಎಂದು ಹೇಳಿದಿರಿ. ಇಲ್ಲಿ ಒಂದು ಕ್ಲಾರಿಫಿಕೇಷನ್ ಸದನಕ್ಕೆ ಕೊಡುವುದಕ್ಕೆ ಇಷ್ಟಪಡುತ್ತೇನೆ. ಇಲ್ಲಿಯವರೆಗೆ ನನ್ನ ಜಿಲ್ಲೆಯ ಬಗ್ಗೆ ಹೇಳುವುದಾದರೆ, GESCOMನಲ್ಲಿ ಪಂಪ್‌ಸೆಟ್‌ನ ಬಿಲ್ 150 ಕೋಟಿ ರೂಪಾಯಿ ಬರಬೇಕಾಗಿತ್ತು. ಆದರೆ ವಸೂಲು ಆಗಿದ್ದು ಕೇವಲ 6 ಕೋಟಿ ಮಾತ್ರ. It is not even 5% ನೀವು ಮನ್ನಾ ಮಾಡಿದ್ದರಿಂದ ರೈತರಿಗೆ ಲಾಭವಾಗಿಲ್ಲ. ಆದರೆ, ಖಂಡಿತವಾಗಿ ಇದರ ಲಾಭ ಯಾರಿಗೆ ಆಗುತ್ತದೆ ಎಂದರೆ, ESCOM ಗಳಿಗೆ ಆಗುತ್ತದೆ. ಲಾಭ ಆದರೂ ಆಗಲಿ ಏಕೆಂದರೆ, ಎಲ್ಲಾ ESCOM ಗಳು ಬಹಳಷ್ಟು ನಷ್ಟ ಅನುಭವಿಸುತ್ತವೆ. ಈ ರೀತಿ ಇವು ನಷ್ಟದಲ್ಲಿರುವುದರಿಂದ ಅಲ್ಲಿರುವ ಸಿಸ್ಟಂನ್ನು ಇಂಪ್ರೂವ್ ಮಾಡಲಿಕ್ಕೆ ಆಗುತ್ತಿಲ್ಲ. ಈಗ ಮಾನ್ಯ ಸಚಿವರು ಇಲ್ಲಿ ಇಲ್ಲ. ಅವರು ಇದರ ಬಗ್ಗೆ ಗಮನ ಕೊಡಬೇಕು. ನಮ್ಮಲ್ಲಿರುವ ಪವರ್‌ನ್ನು ಎಫಿಷಿಯೆಂಟ್ ಆಗಿ ಯೂಸ್ ಮಾಡುವುದಕ್ಕೆ ನಾವು Power infrastructure ನಲ್ಲಿ ಹೆಚ್ಚಿನ ಹಣ ತೊಡಗಿಸಬೇಕು. ಗ್ರಾಮೀಣಾಭಿವೃದ್ಧಿ ಮಂತ್ರಿಗಳು ಇಲ್ಲಿ ಇದ್ದಾರೆ. ಅವರ ಗಮನಕ್ಕೆ ನಾನೇನು ತರಲಿಕ್ಕೆ ಇಚ್ಛೆಪಡುತ್ತೇನೆಂದರೆ, ಇವತ್ತು ನಾವು Decentralization ಮಾಡುವುದಕ್ಕೆ ಹೆಚ್ಚಿನ ಒತ್ತು ಕೊಡಬೇಕು. ಸರ್ಕಾರದ ಒಂದು ಕ್ರಮವನ್ನು ನಾನು ಸ್ವಾಗತಿಸುತ್ತೇನೆ. ಅದು ಏನೆಂದರೆ, ನೀವು ಗ್ರಾಮ ಪಂಚಾಯತಿ ಸದಸ್ಯರಿಗೇನು ಮಾಸಾಶನ ಕೊಡುತ್ತೇವೆಂದು ಆಶ್ವಾಸನೆ ಮಾಡಿದಿರಿ ಅದನ್ನು ನಾನು ಸ್ವಾಗತಿಸುತ್ತೇನೆ. ಆದರೆ, ನೀವು ಎಷ್ಟು ಕೊಡುತ್ತೀರಿ ಎಂಬುದನ್ನು ಹೇಳಿಲ್ಲ. ಅದನ್ನು ಹೆಚ್ಚಿನ ಮೊತ್ತದಲ್ಲಿ ಕೊಡಬೇಕು ಮತ್ತು Decentralization ಕೇವಲ ರಾಜಕೀಯವಾಗಿ Decentralization ಅಲ್ಲ, Decentralization of administration is also very necessary. ಯಾವುದೇ ಒಂದು ಕೆಲಸ ಮಂಜೂರಾಗಿ ಅದು ಕಾರ್ಯರೂಪಕ್ಕೆ

ಬರಬೇಕಾದರೆ ಇವೆಲ್ಲಾ ಅಪ್ರೂವಲ್ ತೆಗೆದುಕೊಳ್ಳಬೇಕಾದರೆ,it will take six months. ನಾನು ಹೋದ ಸಾರಿ ಕೂಡ ಈ ಸದನದಲ್ಲಿ ಈ ಮಾತನ್ನು ಹೇಳಿದ್ದೇನೆ. ಇವತ್ತು ಸಚಿವರು ಗಮನ ಕೊಡಬೇಕು. ಒಂದು ಕೆಲಸ ಮಂಜೂರು ಆಗಿ, ಆ ಕೆಲಸ ಕಾರ್ಯಗತವಾಗಬೇಕಾದರೆ ಆರು ತಿಂಗಳು ಬೇಕು. ಮಾನ್ಯ ಲೋಕೋಪಯೋಗಿ ಇಲಾಖೆಯ ಸಚಿವರು ಮತ್ತು ಗ್ರಾಮೀಣಾಭಿವೃದ್ಧಿ ಇಲಾಖೆ ಸಚಿವರು ಇಲ್ಲಿ ಇದ್ದಾರೆ. ನೀವು Decentralization ಮಾಡಿ. ಯಾವುದೇ ಕೆಲಸ ಮಂಜೂರಾಗಿ ಅದು ಕಾರ್ಯಗತಗೊಳಿಸಲಿಕ್ಕೆ ಒಂದು ತಿಂಗಳಲ್ಲಿ ಪ್ರಾರಂಭವಾಗತಕ್ಕಂಥ Decentralization ನೀವು ಮಾಡದೇ ಹೋದರೆ ಖಂಡಿತವಾಗಿ ಈ ರಾಜ್ಯ ಅಭಿವೃದ್ಧಿಯಾಗಲಿಕ್ಕೆ ಸಾಧ್ಯವೇ ಇಲ್ಲ. ಇಲ್ಲಿ ಮಾನ್ಯ ಹಿರಿಯರಾದ ಲೋಕೋಪಯೋಗಿ ಸಚಿವರಲ್ಲಿ ನಾನೇನು ಮನವಿ ಮಾಡಿಕೊಳ್ಳುತ್ತೇನೆಂದರೆ, ರಾಜ್ಯದಲ್ಲಿರುವ ರಸ್ತೆಗಳ ಉದ್ದ, MDR ಎಷ್ಟು ಇದೆ? State highway ಎಷ್ಟು ಇದೆ? ಗ್ರಾಮೀಣ ರಸ್ತೆ ಎಷ್ಟು ಇದೆ? ಮತ್ತು ಉತ್ತರ ಕರ್ನಾಟಕದಲ್ಲಿ ಮತ್ತು ದಕ್ಷಿಣ ಕರ್ನಾಟಕದಲ್ಲಿ road length PWD ಯಲ್ಲಿ ಎಷ್ಟು ಇದೆ ಎಂಬುದನ್ನು ಮಾನ್ಯ ಸಚಿವರು ಗಮನ ಕೊಟ್ಟು ನೋಡಬೇಕು. ಉತ್ತರ ಕರ್ನಾಟಕದಲ್ಲಿರತಕ್ಕಂಥ ಮೇಜರ್ ಡಿಸ್ಟ್ರಿಕ್ಟ್ ರೋಡ್‌ಗೂ ದಕ್ಷಣದಲ್ಲಿರತಕ್ಕಂಥ ಮೇಜರ್ ಡಿಸ್ಟ್ರಿಕ್ಟ್ ರೋಡ್‌ಗೂ ಬಹಳಷ್ಟು ವ್ಯತ್ಯಾಸ ಇದೆ. ಇದನ್ನು ಮಾನ್ಯ ಸಚಿವರು ಸರಿಪಡಿಸಬೇಕೆಂದು ಕೇಳಿಕೊಳ್ಳುತ್ತೇನೆ. ನಂಜುಂಡಪ್ಪ ವರದಿ ಪ್ರಕಾರ ಅತ್ಯಂತ ಹಿಂದುಳಿದ ತಾಲ್ಲೂಕುಗಳಲ್ಲಿ ಹೆಚ್ಚಿನ ರೀತಿಯಲ್ಲಿ ರೋಡ್ ಅಪ್‌ಗ್ರೇಡೇಷನ್ ಆಗಬೇಕು. ಅಲ್ಲಿ ಮೂಲಭೂತ ಸವಲತ್ತುಗಳೂ ಕೂಡ ಹೆಚ್ಚಾಗಬೇಕು. ಆಗ ಮಾತ್ರ ಈಗ ಇರತಕ್ಕಂಥ ಅಸಮಾನತೆ ಹೋಗುವುದಕ್ಕೆ ಸಾಧ್ಯವಿದೆ. ನಾನು ಹೆಚ್ಚಿಗೆ ಸಮಯವನ್ನು ತೆಗೆದುಕೊಳ್ಳುವುದಕ್ಕೆ ಇಷ್ಟಪಡುವುದಿಲ್ಲ. ಆದರೆ, ಒಂದು ಮಾತನ್ನು ಇಲ್ಲಿ ಹೇಳುವುದಕ್ಕೆ ಬಯಸುತ್ತೇನೆ. ಅದೇನೆಂದರೆ, ವೈನ್ ಶಾಪ್‌ಗಳನ್ನು ಕೊಡುತ್ತೇವೆಂದು ಮಾನ್ಯ ಮುಖ್ಯಮಂತ್ರಿಗಳು ಪ್ರಕಟಣೆ ಮಾಡಿದ್ದಾರೆ. ಇದು ನಿಜವಾಗಿಯೂ ಸಹ ತಪ್ಪು. ಇದನ್ನು ಮಾಡಲೇಬಾರದು. ಒಂದು ವೇಳೆ ಇದನ್ನು ಮಾಡಿದರೆ ನಮ್ಮ ನಾಯಕರಾದ ಮಾನ್ಯ ಸಿದ್ದರಾಮಯ್ಯನವರು ಹೇಳಿದ ಹಾಗೆ ಸಾರಾಯಿ ನಿಷೇಧದಿಂದ ಯಾವ ಜನಾಂಗ ಇವತ್ತು ಬೀದಿಪಾಲಾಗಿದ್ದಾರೆಯೋ ಅವರಿಗೆ ನೀವು ಆದ್ಯತೆ ಕೊಡಬೇಕು. ಮತ್ತೆ ನಮ್ಮ ಮಾನ್ಯ ಧ್ರುವನಾರಾಯಣ್‌ರವರು ಹೇಳಿದ ಹಾಗೆ SC/ST ವರ್ಗದವರಿಗೆ ಹೆಚ್ಚಿನ ರೀತಿಯಲ್ಲಿ ಆದ್ಯತೆಯನ್ನು ನೀವು ಕೊಡಬೇಕು. ಮತ್ತೆ ನನ್ನ ಮತ ಕ್ಷೇತ್ರದಲ್ಲಿ ಇವತ್ತಿನ ದಿವಸ ಸೀಮಿತವಾಗಿರತಕ್ಕಂಥದ್ದು ಏನೆಂದರೆ, ನಮ್ಮ ಪ್ರದೇಶದಲ್ಲಿ ಲೈಮ್ ಸ್ಟೋನ್ ಡೆಪಾಸಿಟ್ ಇದೆ. ಅಲ್ಲಿ ಸಿಮೆಂಟ್ ಕಾರ್ಖಾನೆಯವರು ಏನು ಮಾಡುತ್ತಿದ್ದಾರೆಂದರೆ,

ಬೇರೆಯವರ ಮುಖಾಂತರ ಅಂದರೆ, ಏಜೆಂಟ್ಸ್ ಮುಖಾಂತರ ಲ್ಯಾಂಡ್‌ನ್ನು ಖರೀದಿ ಮಾಡುತ್ತಿದ್ದಾರೆ. ಇದರಿಂದ ರೈತರಿಗೆ ಬಹಳ ಅನ್ಯಾಯವಾಗುತ್ತಿದೆ. ಈ ರೀತಿ ಖರೀದಿ ಮಾಡುತ್ತಿದ್ದಕ್ಕೆ ಕಾನೂನಿನಲ್ಲಿ ಅವಕಾಶ ಇಲ್ಲ. ಇದು ನಿಜವಾಗಿಯೂ ಬಹಳ ಗಂಭೀರವಾದಂಥ ವಿಷಯ. ಕಾನೂನಿನಲ್ಲಿ ಅವಕಾಶ ಇಲ್ಲದೆ ಇದ್ದರೂ ಕೂಡ ದೊಡ್ಡ ದೊಡ್ಡ ಉದ್ಯಮಿಗಳು ಲ್ಯಾಂಡ್‌ನ್ನು ನೇರವಾಗಿ ಖರೀದಿ ಮಾಡುತ್ತಿದ್ದಾರೆ. Land Reform Act ಪ್ರಕಾರ ಅವರು ಸರ್ಕಾರದಿಂದ ಅನುಮತಿಯನ್ನು ಪಡೆದು ಲ್ಯಾಂಡ್‌ನ್ನು ಖರೀದಿ ಮಾಡಬೇಕು. ಆದರೆ, ಅವರು ನೇರವಾಗಿ ಏಜೆಂಟ್ಸ್ ಮುಖಾಂತರ ಖರೀದಿ ಮಾಡಿ ಇವತ್ತಿನ ದಿವಸ ರೈತರಿಗೆ ಅನ್ಯಾಯ ಮಾಡುತ್ತಿದ್ದಾರೆ. ಇದಕ್ಕೆ ಸರ್ಕಾರ ಆಸ್ಪದ ಕೊಡಬಾರದು. ಒಂದು ವೇಳೆ ಆಸ್ಪದ ಕೊಟ್ಟರೆ ಖಂಡಿತವಾಗಿ ಅಲ್ಲಿ ಕ್ರಾಂತಿ ಮಾಡತಕ್ಕಂಥ ಕೆಲಸ ಆಗುತ್ತದೆ. ಆದ್ದರಿಂದ, ಇದಕ್ಕೆ ತಾವು ಅವಕಾಶ ಕೊಡಬಾರದೆಂದು ಕೇಳಿಕೊಳ್ಳುತ್ತೇನೆ. ಕೊನೆಯದಾಗಿ ಒಂದು ವಿಷಯವನ್ನು ಹೇಳುವುದಕ್ಕೆ ಬಯಸುತ್ತೇನೆ. ಗುಲ್ಬರ್ಗಾ, ಚಿತ್ತಾಪುರ, ಚಿಂಚೋಳಿ ಭಾಗದಲ್ಲಿ ಶಹಬಾದ್ ಸ್ಟೋನ್ ಇದೆ. ಇವತ್ತಿನ ದಿವಸ ಶಹಬಾದ್ ಸ್ಟೋನ್ ಕ್ವಾರಿಇಂಗ್ ಬಹಳಷ್ಟು ಕಷ್ಟದಲ್ಲಿದೆ. ಇದಕ್ಕೆ ರಾಯಲ್ಟಿಯನ್ನು ಎಷ್ಟು ಮಾಡಿದ್ದಾರೆಂಬುದರ ಬಗ್ಗೆ ಮಾನ್ಯ ಮುಖ್ಯಮಂತ್ರಿಗಳು ಉತ್ತರ ಕೊಡುವಂಥ ಸಂದರ್ಭದಲ್ಲಿ ಹೇಳಬೇಕು. ಮೊದಲು 50 ರೂಪಾಯಿ ಇದ್ದಂಥ ರಾಯಲ್ಟಿಯನ್ನು ನೀವು 80 ರೂಪಾಯಿಗೆ ಏರಿಸಿದ್ದೀರಿ. ಹಿಂದೆ ಮಾನ್ಯ ಧರ್ಮಸಿಂಗ್ ಸಾಹೇಬರ ಸರ್ಕಾರ ಇದ್ದಾಗ, ಇದು ನಷ್ಟದಲ್ಲಿದೆ ಎಂದು ಇದನ್ನು 15 ರೂಪಾಯಿಗೆ ತರಬೇಕೆಂಬ ಪ್ರಸ್ತಾವನೆ ಇತ್ತು. ಈ ಭಾಗದಲ್ಲಿ ಇದೊಂದೇ ಉದ್ಯೋಗ ಮಾತ್ರ ಇದೆ. ಸ್ವಂತ ಜಮೀನಿನಲ್ಲಿದ್ದರೂ ಅದಕ್ಕೆ ಅವರು ತಮ್ಮ ಕೈಯಿಂದ ಪರ್ಮಿಷನ್ ತೆಗೆದುಕೊಳ್ಳಬೇಕಾಗುತ್ತದೆ. ಅಲ್ಲಿನ ಜನರು ಕೂಲಿ ಮಾಡುವುದಕ್ಕೆ ಇದರಿಂದ ಉಪಯೋಗವಾಗುತ್ತದೆ. ಆದ್ದರಿಂದ ಶಹಬಾದ್ ಸ್ಟೋನ್ ಮೇಲೆ ಇರತಕ್ಕಂಥ ರಾಯಲ್ಟಿಯನ್ನು 80 ರೂಪಾಯಿ ಇಂದ 15 ರೂಪಾಯಿಗೆ ಇಳಿಸುವಂಥ ಕೆಲಸವನ್ನು ಮಾನ್ಯ ಮುಖ್ಯಮಂತ್ರಿಗಳು ಮಾಡಬೇಕೆಂದು ಕೇಳಿಕೊಳ್ಳುತ್ತೇನೆ. ಇದರಿಂದ ಬೊಕ್ಕಸಕ್ಕೆ ಏನೂ ನಷ್ಟವಾಗುವುದಿಲ್ಲ. ಏಕೆಂದರೆ, ಇವತ್ತಿನ ದಿವಸ ಅಲ್ಲಿ ಆಗುತ್ತಿರುವ ಕಲೆಕ್ಷನ್ ಅದಕ್ಕಿಂಥ ಜಾಸ್ತಿಯಾಗುತ್ತಿದೆ. ಇವತ್ತು ಬರಬೇಕಾಗಿರತಕ್ಕಂಥ ರಾಯಲ್ಟಿ evade ಆಗುತ್ತಿದೆ. ನೀವು ಅದನ್ನು 15 ರೂಪಾಯಿ ಮಾಡಿದರೆ ಎಲ್ಲರೂ ಕಟ್ಟುತ್ತಾರೆ. ಇದರಿಂದ ನಮ್ಮ ಟ್ರೆಜರಿಗೆ ಏನೂ ಲುಕ್ಸಾನ್ ಆಗುವುದಿಲ್ಲ. ಇನ್ನು ಬಹಳಷ್ಟು ವಿಷಯಗಳ ಬಗ್ಗೆ ನಾನು ಹೇಳಬೇಕಾಗಿದೆ. ಇವತ್ತಿನ ದಿವಸ ಇಲ್ಲಿ ಉನ್ನತ ಶಿಕ್ಷಣ ಸಚಿವರು ಮತ್ತು ಮೆಡಿಕಲ್ ಎಜ್ಯುಕೇಷನ್ ಮಿನಿಸ್ಟರ್ ಇಲ್ಲ. C.E.T. ಅನ್ನು Scrap

ಮಾಡುತ್ತೇವೆಂದು ಹೇಳಿದರು. ಇಡೀ ದೇಶದಲ್ಲಿ ಯಾವುದಾದರೊಂದು ವ್ಯವಸ್ಥೆ ನ್ಯಾಯಬದ್ಧವಾಗಿ ಯಾವುದೇ ಭ್ರಷ್ಟಾಚಾರವಿಲ್ಲದೆ ಇವತ್ತಿನ ದಿವಸ ಮೆರಿಟ್ ಪ್ರಿವೇಲ್ ಆಗತಕ್ಕಂಥದ್ದು ಯಾವುದಾದರು ಇದ್ದರೆ ಅದು C.E.T. ಮುಖಾಂತರ ಎಂದು ಹೇಳುವುದಕ್ಕೆ ಬಯಸುತ್ತೇನೆ. ಆದ್ದರಿಂದ, C.E.T. ಯನ್ನು ಖಂಡಿತscrap ಮಾಡಬಾರದೆಂದು ಹೇಳುವುದಕ್ಕೆ ಬಯಸುತ್ತೇನೆ. ಮತ್ತೆ ಖಾಸಗಿ ಇಂಜಿನಿಯರಿಂಗ್ ಮತ್ತು ಮೆಡಿಕಲ್ ಸಂಸ್ಥೆಗಳು ಮಾಡುತ್ತಿರುವ ಕಾಮೇಡ್-ಕೆ ಟೆಸ್ಟನ್ನು scrap ಮಾಡಿ. ಇವತ್ತು C.E.T. ಯಲ್ಲಿರತಕ್ಕಂಥ ಮೆರಿಟ್ ಪ್ರಕಾರ ಅಡ್ಮಿಷನ್ ಮಾಡಿದರೆ ಈ ರಾಜ್ಯದಲ್ಲಿರುವ ಬಡಜನರು ಮೆರಿಟೋರಿಯಸ್ ಜನರಿಗೆ ಅವಕಾಶ ಸಿಗುತ್ತದೆ. ಏಕೆಂದರೆ, ಕಾಮೇಡ್-ಕೆನಲ್ಲಿ ಬಹಳಷ್ಟು ಅವ್ಯವಹಾರಗಳು ನಡೆಯುತ್ತಿವೆ. ಆದ್ದರಿಂದ, ಕಾಮೇಡ್-ಕೆಯನ್ನು allow ಮಾಡಬಾರದೆಂದು ಹೇಳುತ್ತಾ CET ಮೆರಿಟ್ ಲಿಸ್ಟ್‌ನ್ನು ತೆಗೆದುಕೊಂಡು ಮಾಡಬೇಕೆಂದು ಹೇಳಿ ನನಗೆ ಮಾತನಾಡುವುದಕ್ಕೆ ಅವಕಾಶ ಕೊಟಿದ್ದಕ್ಕಾಗಿ ತಮಗೆ ಧನ್ಯವಾದಗಳನ್ನು ಹೇಳಿ ನನ್ನ ಮಾತನ್ನು ಮುಗಿಸುತ್ತೇನೆ.

ಶ್ರೀ ಎನ್.ಎ.ಹ್ಯಾರಿಸ್(ಶಾಂತಿನಗರ):- ಮಾನ್ಯ ಅಧ್ಯಕ್ಷರೆ, ಮಾತನಾಡುವುದಕ್ಕೆ ನನಗೆ ಅವಕಾಶ ಕೊಟ್ಟಿದ್ದಕ್ಕಾಗಿ ನಾನು ತಮಗೆ ಧನ್ಯವಾದಗಳನ್ನರ್ಪಿಸುತ್ತೇನೆ. Bangalore Water Supply ಬಗ್ಗೆ ನಾನು ಮಾತನಾಡುವುದಕ್ಕೆ ಬಯಸುತ್ತೇನೆ. ನಾನು ಮೊದಲಬಾರಿಗೆ ಶಾಂತಿನಗರ ಕ್ಷೇತ್ರದಿಂದ ಶಾಸಕನಾಗಿದ್ದೇನೆ. ಈಗ ಏನಾಗಿದೆ ಎಂದರೆ ನಾವು ರಾತ್ರಿ ನಿದ್ದೆ ಮಾಡಲಿಕ್ಕೆ ಮತ್ತು ಬೆಳಿಗ್ಗೆ ಎದ್ದೇಳುವುದಕ್ಕೆ ಅಗದೇ ಇರತಕ್ಕಂಥ ಪರಿಸ್ಥಿತಿಯಲ್ಲಿ ನಾವು ಇದ್ದೇವೆ. ಏಕೆಂದರೆ, ಕುಡಿಯುವುದಕ್ಕೆ ನೀರು ಬರುವುದಿಲ್ಲ ಮತ್ತೆ ಉಪಯೋಗಿಸಿರತಕ್ಕಂಥ ನೀರು ಸ್ಯಾನಿಟರಿಯಲ್ಲಿ ಹೋಗುವುದಿಲ್ಲ. ಇಂಥ ಒಂದು ಪರಿಸ್ಥಿತಿಯಲ್ಲಿ ಬೆಂಗಳೂರು ಇದೆ. ರಸ್ತೆಯ ಮೇಲೆ ಆಗತಕ್ಕಂಥ ಟ್ರಾಫಿಕ್ ಬ್ಲಾಕ್ ನಮಗೆ ಕಾಣಿಸುವ ಹಾಗೆ, ಅದೇ ರೀತಿಯಲ್ಲಿ ಒಳಗಡೆ ಇರತಕ್ಕಂಥ ಚರಂಡಿಗಳೆಲ್ಲಾ ಬ್ಲಾಕ್ ಆಗಿ ನೀರು ಹೋಗದೇ ಇರತಕ್ಕಂಥ ಪರಿಸ್ಥಿತಿ ಇದೆ. ಕೆಲವು ಕಡೆ ನೀರು ಬಾರದೇ ಇರತಕ್ಕಂಥ ಪರಿಸ್ಥಿತಿ ಇದೆ. ಮಾನ್ಯ ಮುಖ್ಯಮಂತ್ರಿಗಳು ಬಜೆಟ್‌ನಲ್ಲಿ ಬೆಂಗಳೂರು pride of India ಎಂದು ಹೇಳಿದ್ದಾರೆ. ಆದರೆ, ಈ Pride of India ದಲ್ಲಿ ಕುಡಿಯುವುದಕ್ಕೆ ನೀರು ಸಿಗದೇ ಇರತಕ್ಕಂಥ ಪರಿಸ್ಥಿತಿ ಇದೆ. ಕುಡಿಯುವ ನೀರು ಮತ್ತು ಸ್ಯಾನಿಟರಿ ವ್ಯವಸ್ಥೆ ಸರಿ ಹೋಗಬೇಕಾದರೆ ತಾವು ಬಜೆಟ್‌ನ್ನು ಏನು ಹೇಳಿರುತ್ತೀರೆಂದರೆ, "be fitting the progressive image of the state within the shortest possible time" ಎಂದು ಹೇಳಿದ್ದೀರಿ. Shortest Possible Timeಲ್ಲಿ ಕೆಲಸ ಮಾಡಬೇಕಾದರೆ ದುಡ್ಡು ಬೇಕಾಗುತ್ತದೆ. ಆದ್ದರಿಂದ BWSSBಗೆ ತಾವು ಕೊಟ್ಟಿರುವ ಬಜೆಟರಿ ಪ್ರಾವಿಜನ್

ಬಹಳ ಕಡಿಮೆ ಇದೆ. ಕೇವಲ 150 ಕೋಟಿ 200ಕೋಟಿ ರೂಪಾಯಿ ಕೊಟ್ಟಿದ್ದೀರಿ. ಖಂಡಿತವಾಗಿ ಇದು ಸಾಕಾಗುವುದಿಲ್ಲ. ಇನ್ನೂ ಜಾಸ್ತಿ ಮಾಡಬೇಕು. ಕುಡಿಯುವ ನೀರು ಕೊಡುವುದಕ್ಕೆ ಸಾಧ್ಯವಾಗಬೇಕಾದರೆ ಈಗ ಇರತಕ್ಕಂಥ ಎಲ್ಲಾ ಪೈಪ್‌ಲೈನ್‌ನ್ನು ಬದಲಾವಣೆ ಮಾಡಬೇಕಾಗುತ್ತದೆ. ಇನ್ನೊಂದು ಮುಖ್ಯವಾದ ವಿಷಯವೇನೆಂದರೆ, ಸ್ಯಾನಿಟರಿ ಮತ್ತು ಕುಡಿಯುವ ನೀರು ಜೊತೆಯಲ್ಲಿ ಹೋಗುತ್ತಿವೆ. ನಮಗೆ contaminated ಆಗಿರತಕ್ಕಂಥ ನೀರು ಸಿಗುತ್ತಿದೆ. ಆದ್ದರಿಂದ, ಈ contaminated ನೀರನ್ನು ನಿಲ್ಲಿಸಬೇಕಾದರೆ ಹೊಸದಾಗಿ ಪೈಪ್ ಲೈನ್ ಬದಲಾವಣೆ ಮಾಡಬೇಕಾಗುತ್ತದೆ. ಅಂದರೆ, ಸ್ಯಾನಿಟರಿಗೆ ಬೇರೆ ಲೈನ್ ಮತ್ತು ಕುಡಿಯುವ ನೀರಿಗೆ ಬೇರೆ ಲೈನ್ ಹೋಗಬೇಕಾಗುತ್ತದೆ. ಮತ್ತೆ ಇವತ್ತಿನ ದಿವಸ ಕುಡಿಯುವ ನೀರನ್ನು ಹಿಡಿಯುವುದಕ್ಕೋಸ್ಕರ ಜನರು ಮಧ್ಯರಾತ್ರಿಯಲ್ಲಿ ಎದ್ದು ಮನೆಗಳಲ್ಲಿ ನೀರು ಹಿಡಿಯತಕ್ಕಂಥ ಸಂಭವ ಇದೆ. ಇವತ್ತು ಮಧ್ಯರಾತ್ರಿ 1 ಅಥವಾ 2 ಗಂಟೆ ಕೇವಲ 2 ಗಂಟೆ ಮಾತ್ರ ನೀರು ಬಿಡುತ್ತಾರೆ. ಈ ನೀರನ್ನು ಹಿಡಿಯುವುದಕ್ಕೋಸ್ಕರ ಜನರು ರಾತ್ರಿಯೆಲ್ಲಾ ಜಾಗರಣೆ ಮಾಡಿ ನೀರನ್ನು ಹಿಡಿದು ಬೆಳಿಗ್ಗೆ ನಿದ್ರೆ ಮಾಡತಕ್ಕಂಥ ಪರಿಸ್ಥಿತಿ ಇದೆ. ಈ ರೀತಿ ಏಕೆ ಆಗುತ್ತದೆಂದು BWSSB ವರಿಗೆ ಕೇಳಿದರೆ ಪ್ರೆಜರ್ ಇಲ್ಲವೆಂದು ಮತ್ತು ನಮ್ಮ ಟ್ಯಾಂಕ್ ಕ್ಯಾಪಾಸಿಟಿ ಇಲ್ಲವೆಂದು ಹಾಗೂ ಕೆ.ಇ.ಬಿ.ಯಿಂದ ನಮಗೆ ಪವರ್ ಸರಬರಾಜು ಸರಿಯಾಗಿ ಆಗುತ್ತಿಲ್ಲವೆಂದು ಹೇಳುತಿದ್ದಾರೆ. ಆದ್ದರಿಂದ, BWSSBಗೆ ಬೇಕಾಗುವಷ್ಟು ಹಣಕಾಸಿನ ಸೌಕರ್ಯವನ್ನು ಮಾಡಿಕೊಟ್ಟು ಬೆಂಗಳೂರಿನಲ್ಲಿ ನಾವು ಇದನ್ನೂ ಸರಿಪಡಿಸದಿದ್ದರೆ ಬೆಳೆಯುತ್ತಿರುವ ಬೆಂಗಳೂರಿಗೆ ಕೆಟ್ಟ ಹೆಸರು ಬರುತ್ತದೆಂದು ಹೇಳಲಿಕ್ಕೆ ನಾನು ಇಷ್ಟಪಡುತ್ತೇನೆ. ಮತ್ತೆ ಬೆಂಗಳೂರು ಸಿಟಿಯಲ್ಲಿ ಬಾಂಬ್ ಸ್ಫೋಟ ಆಗಿರುವುದನ್ನು ನಾವು ನೋಡಿದ್ದೇವೆ. ಇದೆಲ್ಲಾ ಆಗುವುದಕ್ಕೆ ಕಾರಣ ನಮ್ಮ ಪೊಲೀಸ್ ಇಲಾಖೆಗೆ ಬೇಕಾಗಿರತಕ್ಕಂಥ ಇನ್ನಷ್ಟು ಸವಲತ್ತುಗಳನ್ನು ಮಾಡಿಕೊಡಬೇಕಾಗುತ್ತದೆ. ಇವತ್ತಿನ ದಿವಸ Police Department is not fully equipped. ಅವರಿಗೆ ಬೇಕಾಗಿರತಕ್ಕಂಥ human resource ಮತ್ತು equipments ಕೂಡ ಇಲ್ಲ. ಆದ್ದರಿಂದ ಸನ್ಮಾನ್ಯ ಮುಖ್ಯಮಂತ್ರಿಗಳು ವಿಶೇಷವಾಗಿ ಬೆಂಗಳೂರಿನಲ್ಲಿರುವ ಪೊಲೀಸ್ ಇಲಾಖೆಗೆ ಇನ್ನೊಂದಷ್ಟು ಬಲ ಪಡಿಸತಕ್ಕಂಥ ಪ್ರಯತ್ನವನ್ನು ಮಾಡಬೇಕಾಗುತ್ತದೆ. ಮತ್ತೆ ಬೆಂಗಳೂರಿನಲ್ಲಿ ಕೊಟ್ಟಿರತಕ್ಕಂಥ ಬಿಪಿಎಲ್ ಕಾರ್ಡ್ ಸಂಖ್ಯೆ ತುಂಬಾ ಕಡಿಮೆಯಾಗಿದೆ. ನನ್ನ ಕ್ಷೇತ್ರದಲ್ಲಿ ಸುಮಾರು 60 ರಿಂದ 70 ಪರ್ಸೆಂಟ್ ಜನರು ಸ್ಲಮ್‌ನಲ್ಲಿದ್ದಾರೆ. ಅಲ್ಲಿ ಬಿಪಿಎಲ್ ಕಾರ್ಡ್ ಕೊಡುವಂಥ ಜಾಗದಲ್ಲಿ ಎಪಿಎಲ್ ಕಾರ್ಡ್ ಕೊಟ್ಟಿದ್ದೀರಿ. ಖಂಡಿತವಾಗಿ ಇದು ಅನ್ಯಾಯ. ಆದ್ದರಿಂದ ಬಿಪಿಎಲ್ ಕಾರ್ಡ್ ಕೊಡತಕ್ಕಂಥ ಸಂಖ್ಯೆಯನ್ನು ಜಾಸ್ತಿ

ಮಾಡಬೇಕೆಂದು ತಮ್ಮಲ್ಲಿ ಕೇಳಿಕೊಳ್ಳುತ್ತೇನೆ. ಮತ್ತೆ ಈ ಸಾರಿ ಬಜೆಟ್‌ನಲ್ಲಿ ಟೂರಿಸಂ ಬಗ್ಗೆ ಹೇಳಿದ್ದೀರಿ ಮತ್ತೆ ಮಾನ್ಯ ಜನಾರ್ಧನ ರೆಡ್ಡಿಯವರೂ ಕೂಡ ಟೂರಿಸಂ ಡೆವಲಪ್‌ಮೆಂಟ್ ಬಗ್ಗೆ ಹೇಳಿದ್ದಾರೆ. ಆದರೆ, ಒಂದು ಕಡೆ ಟೂರಿಸಂ ಡೆವಲಪ್‌ಮೆಂಟ್ ಬಗ್ಗೆ ಮಾತನಾಡುತ್ತಾರೆ. ಇನ್ನೊಂದು ಕಡೆ luxury ಟ್ಯಾಕ್ಸ್‌ನ್ನು 12.5% ನಿಂದ 20%ಗೆ ಜಾಸ್ತಿ ಮಾಡಿದ್ದಾರೆ. ಇದರಿಂದ ಖಂಡಿತವಾಗಿ ಇಲ್ಲಿಗೆ ಬರುವಂಥ ಟೂರಿಸ್ಟ್‌ಗಳ ಮೇಲೆ ನೇರವಾಗಿ ಪ್ರಭಾವ ಆಗುತ್ತದೆ. ಆದ್ದರಿಂದ, ಮೊದಲು ಇದ್ದಹಾಗೆ ಈ ಟ್ಯಾಕ್ಸ್‌ನ್ನು 12.5% ಮಾಡಿ ಎಂದು ಮತ್ತು ಇದನ್ನು actual tariff ಮೇಲೆ ಮಾಡಬೇಕೆಂದು ಕೇಳಿಕೊಳ್ಳುತ್ತೇನೆ. ಮತ್ತೆ ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಬೇರೆ ಬೇರೆ ವಿಷಯಕ್ಕೆ ಸಂಬಂಧಪಟ್ಟಂತೆ ಸರ್ಕಾರ ಹಣ ಕೊಟ್ಟಿದೆ. ಎಲ್ಲಾ ಕಡೆ ದುಡ್ಡು ಕೊಟ್ಟಾಗ ನಮ್ಮ ಟಿಪ್ಪು ಸುಲ್ತಾನ್ ಮೆಮೋರಿಯಲ್‌ಗೆ 2 ಕೋಟಿ ರೂಪಾಯಿಗಳನ್ನು ಕೊಡುವುದನ್ನು ಮರೆತಿದ್ದಾರೆ. ದಯವಿಟ್ಟು ಅದಕ್ಕೂ ಕೂಡ ಹಣ ಕೊಡಬೇಕೆಂದು ಕೇಳಿಕೊಳ್ಳುತ್ತೇನೆ. ಶ್ರೀರಂಗಪಟ್ಟಣದಲ್ಲಿರುವ ಟಿಪ್ಪು ಸುಲ್ತಾನ್ ಮೆಮೋರಿಯಲ್ ಟೂರಿಸ್ಟ್‌ಗಳಿಗೆ ಆಕರ್ಷಣೆಗೆ ಒಳಗಾಗುವಂಥ ಜಾಗವಾಗಿದೆ. ಆದ್ದರಿಂದ, ಇದಕ್ಕೂ ಕೂಡ ಫಂಡ್ ಕೊಟ್ಟು, ಅಲ್ಲಿಗೆ ಬೇಕಾಗಿರತಕ್ಕಂಥ ಸೌಕರ್ಯಗಳನ್ನು ಮಾಡಿಕೊಡಬೇಕೆಂದು ಕೇಳಿಕೊಳ್ಳುತ್ತೇನೆ. ಕೊನೆಯದಾಗಿ ಹೇಳುವುದೇನೆಂದರೆ ಬೆಂಗಳೂರು ಬಗ್ಗೆ ಹೆಚ್ಚಿನ ಆಸಕ್ತಿ ತೆಗೆದುಕೊಂಡು ರಸ್ತೆ, ನೀರು ಹಾಗೂ ಸ್ಯಾನಿಟರಿ ಬಗ್ಗೆ ಆಸಕ್ತಿ ತೆಗೆದುಕೊಂಡು ಕೆಲಸ ಮಾಡದಿದ್ದರೆ ಬರುವಂಥ ಕಾಲದಲ್ಲಿ ಕಷ್ಟವಾಗಬಹುದೆಂದು ಹೇಳುವುದಕ್ಕೆ ಇಷ್ಟಪಡುತ್ತೇನೆ. ನನಗೆ ಮಾತನಾಡುವುದಕ್ಕೆ ಅವಕಾಶ ಕೊಟ್ಟಿದ್ದಕ್ಕಾಗಿ ತಮಗೆ ಧನ್ಯವಾದಗಳು.

ಅಧ್ಯಕ್ಷರು:- ಮಧ್ಯಾಹ್ನ 3.00 ಗಂಟೆಗೆ ಮಾನ್ಯಮಂತ್ರಿಯವರಿಂದ ಉತ್ತರ. ಮಾನ್ಯ ಮುಖ್ಯಮಂತ್ರಿಗಳು ಮಾನ್ಯ ಸದಸ್ಯರ ಗೌರವಾರ್ಥ ಮಧ್ಯಾಹ್ನ ವಿಧಾನಸೌಧದ ಬ್ಯಾಂಕ್ವೆಟ್ ಹಾಲ್‌ನಲ್ಲಿ ಏರ್ಪಡಿಸಿರುವ ಭೋಜನ ಕೂಟಕ್ಕೆ ತಮ್ಮೆಲ್ಲರನ್ನು ಆಹ್ವಾನಿಸಲಾಗಿದೆ. ದಯವಿಟ್ಟು ತಾವುಗಳು ಭಾಗವಹಿಸಬೇಕೆಂದು ಕೋರುತ್ತಿದ್ದೇನೆ. ಈಗ ಸದನವನ್ನು ಮಧ್ಯಾಹ್ನ 3.00 ಗಂಟೆಗೆ ಸೇರುವಂತೆ ಮುಂದೂಡಲಾಗಿದೆ.

(ಸದನವು ಮಧ್ಯಾಹ್ನ 2.00 ಗಂಟೆಗೆ ಮುಕ್ತಾಯಗೊಂಡು ಮತ್ತೆ ಮಧ್ಯಾಹ್ನ 3.00 ಗಂಟೆಗೆ ಸೇರಲು ನಿಶ್ಚಯಿಸಿತು.)

(ಸಭೆಯು ಪುನಹ 3.12ಕ್ಕೆ ಸಮಾವೇಶಗೊಂಡಿತು)

(ಅಧ್ಯಕ್ಷರು ಪೀಠವನ್ನು ಅಲಂಕರಿಸಿದ್ದರು)